ವಾರ್ಷಿಕ ಚಂದಾ ರೂ.25/-

# ಜನಪದ

ಸಂಪುಟ-06 • ಸಂಚಿಕೆ-04 • ಜನವರಿ 2023



## ಕೃಷಿಕರ ಕಲ್ಪತರು ಕಾಮಧೇನು

Downloaded From: www.kpscvaani.com




ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶರಾವತಿ ಮುಳುಗಡೆ ಸಂತ್ರಸ್ತರಿಂದ ಮನವಿ ಸ್ವೀಕರಿಸಿ, ಅವರನ್ನು ಉದ್ದೇಶಿಸಿ ಮಾತನಾಡುತ್ತಿರುವುದು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಸಿ.ನಾರಾಯಣ ಗೌಡ, ಸಚಿವರಾದ ಬಿ.ಎ.ಬಸವರಾಜ್, ಅರಗ ಜ್ಞಾನೇಂದ್ರ, ಶಾಸಕರಾದ ಹರತಾಳು ಹಾಲಪ್ಪ, ಸಂಸದರಾದ ಬಿ.ವೈ.ರಾಘವೇಂದ್ರ ಮತ್ತಿತರ ಗಣ್ಯರು ಉಪಸ್ಥಿತರಿದ್ದಾರೆ.




ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡಿಸೆಂಬರ್ 14 ರಂದು ಹುಬ್ಬಳ್ಳಿಯ ವಿಮಾನ ನಿಲ್ದಾಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಸಂದರ್ಭ.

Downloaded From: www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-04 • ಜನವರಿ 2023

**06** ಅನ್ನದಾತನ ಆದಾಯ ಹೆಚ್ಚಿಸಲು ಸಹಕಾರಿಯಾದ ಕೃಷಿ ಇಲಾಖೆಯ ಯೋಜನೆಗಳು
• ಸಂಧ್ಯಾ ಸೊರಬ

**13** ಸರ್ವರ ಕ್ಷೇಮಾಭಿವೃದ್ಧಿಗಾಗಿ ಆರೋಗ್ಯ ಸೇವೆ: ಸರ್ಕಾರದ ಸಂಕಲ್ಪ
• ಉಮೇಶ್ ಕೊಲಿಗೆರೆ

**19** ಬಡ ಜನರ ಆರೋಗ್ಯ ರಕ್ಷಣೆಗಾಗಿ 'ನಮ್ಮ ಕ್ಲಿನಿಕ್'
• ಚಾರುಸ್ಮಿತಾ

**22** ಕೃಷಿ ಪೂರಕ ಚಟುವಟಿಕೆಗಳಿಗೆ ಸರ್ಕಾರದಿಂದ ವಿವಿಧ ಯೋಜನೆಗಳ ಕೊಡುಗೆ
• ಡಾ. ಪಿ. ವಿ. ವರಪ್ರಸಾದ್ ರಾವ್

**26** ಕುರಿ ಸಾಕಾಣಿಕೆಯಲ್ಲಿ ಬದುಕು ಕಂಡುಕೊಂಡ ಪದವೀಧರ ಮಹಿಳೆ
• ಶ್ವೇತಾ ಜ

**28** ಬಯಲುಸೀಮೆ ನಾಡಲ್ಲೊಂದು ಕಾಫಿ ತೋಟ
• ಜಿ. ಚಂದ್ರಕಾಂತ

**30** ಸ್ವಾವಲಂಬಿ ಕರ್ನಾಟಕಕ್ಕಾಗಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು
• ನಂಜುಂಡಪ್ಪ. ವಿ.

**35** ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಸರ್ಕಾರದ ಗುರಿ
• ಬಿ.ಎಸ್. ಪಲ್ಲವಿ

**39** ಶತಮಾನ ವರ್ಷಾಚರಣೆಗೆ ಸಜ್ಜಾದ ಬೆಳಗಾವಿಯ ಹಿಂಡಲಗಾ ಕಾರಾಗೃಹ
• ಡಿ.ಪಿ.ಮುರಳೀಧರ್



**43** ಮೆದುಳು ಸೋಂಕು ನಿವಾರಣೆಗೆ ಅಗತ್ಯ ಕ್ರಮ
• ಡಾ. ಎಂ. ನೇತ್ರಾವತಿ

**46** ಸ್ವಾಸ್ಥ್ಯ ಕರ್ನಾಟಕ: ಸುಸ್ಥಿರ ಕರ್ನಾಟಕ
• ಕೆ. ರೋಹಿಣಿ

**48** ಪ್ರಜಾರಾಜ್ಯದಲ್ಲಿ ಪ್ರಜೆಗಳೇ ಪ್ರಭುಗಳು
• ವೆಂಕಟೇಶ ಕೆ. ಜನಾದ್ರಿ

**50** ಪದಬಂಧ-38



ಪ್ರಧಾನ ಸಂಪಾದಕರು
ಡಾ|| ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್
ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ,
ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ನಿಮ್ಮ ಅನಿಸಿಕೆ

ನವೆಂಬರ್ 1 ರಿಂದ ಯಶಸ್ವಿನಿ ಯೋಜನೆಯನ್ನು ಸರ್ಕಾರವು ಮರು ಜಾರಿಗೊಳಿಸಿರುವುದು ತುಂಬಾ ಸಂತಸವಾಗಿದೆ. ನಮ್ಮ ಬಡ ಜನರ ಬೇಡಿಕೆಯನ್ನು ಈಡೇರಿಸಿದ ಸರ್ಕಾರಕ್ಕೆ ಅದರಲ್ಲೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಮರು ಜಾರಿಗೊಂಡಿರುವ ಈ ಯೋಜನೆಯ ಬಗ್ಗೆ ಡಿಸೆಂಬರ್ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟಿಸಿರುವ ಲೇಖನವು ಯೋಜನೆಯ ಬಗ್ಗೆ ನಮಗೆ ಇದ್ದ ಎಲ್ಲಾ ಅನುಮಾನಗಳನ್ನು ಪರಿಹಾರ ಮಾಡಿತು.

ಪರಿಷ್ಕರಣೆ ಮಾಡಿರುವ ಈ ಯೋಜನೆಯಡಿ ಫಲಾನುಭವಿಯಾಗಲು ಇರಬೇಕಾದ ಅರ್ಹತೆಗಳೇನು?, ಈ ಸೌಲಭ್ಯ ಪಡೆಯುವ ಪ್ರಕ್ರಿಯೆ ಹೇಗೆ?, ಪಾವತಿಸಬೇಕಾದ ವಂತಿಗೆ ಹಣ ಎಷ್ಟು?, ಮತ್ತು ಈ ಸೌಲಭ್ಯಕ್ಕೆ ಯಾರೆಲ್ಲಾ ಒಳಪಡುತ್ತಾರೆ?. ಎಂಬ ಎಲ್ಲಾ ಮಾಹಿತಿಯನ್ನು ನೀಡಲಾಗಿದೆ. ಇಂತಹ ಉಪಯುಕ್ತ ಲೇಖನವನ್ನು ನೀಡಿದ ವಾರ್ತಾ ಜನಪದ ಸಂಪಾದಕ ವಿಭಾಗದವರಿಗೆ ಧ್ಯನವಾದಗಳು.

**–ಸೌಭಾಗ್ಯ, ಚಿತ್ರದುರ್ಗ**

* * *

ಬೆಂಗಳೂರು ನಗರದ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಬೃಹತ್ ಕಂಚಿನ ಪ್ರತಿಮೆಯು ಪ್ರಧಾನಿ ನರೇಂದ್ರ ಮೋದಿ ಅವರಿಂದ ಅನಾವರಣಗೊಂಡಿರುವುದು ಹೆಮ್ಮೆಯ ಸಂಗತಿ.


ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ಪ್ರತಿಮೆಯನ್ನು ನಿರ್ಮಾಣ ಮಾಡಿರುವುದರಿಂದ ವಿವಿಧ ರಾಜ್ಯಗಳಿಂದ ಮತ್ತು ವಿದೇಶಗಳಿಂದ ರಾಜ್ಯಕ್ಕೆ ಬರುವವರಿಗೆಲ್ಲಾ ನಮ್ಮ ಬೆಂಗಳೂರು ನಗರವನ್ನು ಕಟ್ಟಿ ಬೆಳೆಸಿದ ಕೆಂಪೇಗೌಡರನ್ನು ಪರಿಚಯಿಸಿದಂತಾಗುತ್ತದೆ. ಇನ್ನು ಪಾಳೇಗಾರರೊಬ್ಬರ ಅತಿ ಎತ್ತರದ ಪ್ರತಿಮೆ ನಿರ್ಮಾಣ ಮಾಡಿರುವುದು ವಿಶ್ವದಾಖಲೆಯಾಗಿದೆ ಎಂದು ತಿಳಿದು ಹೆಚ್ಚಿನ ಸಂತೋಷವಾಯಿತು. ಇಂತಹ ಬೃಹತ್ ಆಕರ್ಷಕ ಪ್ರತಿಮೆ ನಿರ್ಮಾಣ ಮಾಡಿದ ಸರ್ಕಾರಕ್ಕೆ ಸಮಸ್ತ ಬೆಂಗಳೂರಿನ ಜನರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**–ಹೆಚ್. ಸಿ. ಹರೀಶ್, ಬೆಂಗಳೂರು**

* * *

ಡಿಸೆಂಬರ್ ವಾರ್ತಾ ಜನಪದ ಸಂಚಿಕೆಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಾದ ಮುರುಗೇಶ ನಿರಾಣಿ ಅವರು ಜಾಗತಿಕ ಹೂಡಿಕೆದಾರರ ಸಮಾವೇಶದ ಕುರಿತು ಬರೆದಿರುವ ಲೇಖನ ಓದಿ ಆಶ್ಚರ್ಯವಾಯಿತು.

5 ಲಕ್ಷ ಕೋಟಿ ಬಂಡವಾಳ ನಿರೀಕ್ಷೆಯಿದ್ದ ಈ ಸಮಾವೇಶದಿಂದ 9.8 ಲಕ್ಷ ಕೋಟಿ ರೂ ಮೊತ್ತದ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಒಡಂಬಡಿಕೆ ಆಗಿದೆ ಎಂದು ತಿಳಿದು ಹೆಮ್ಮೆ ಎನಿಸಿತು. ನಿರೀಕ್ಷೆಗಿಂತ ದುಪ್ಪಟ್ಟು ಹೂಡಿಕೆ ಆಗಿರುವುದರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಯಾಗುವುದರಿಂದ ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವಂತಾಗುತ್ತದೆ.




ಎರಡು ಮತ್ತು ಮೂರನೇ ಹಂತದ ನಗರಗಳಿಗೆ ಕೈಗಾರಿಕೆಗಳನ್ನು ವಿಸ್ತರಿಸುವ ಉದ್ದೇಶವನ್ನು ಸರ್ಕಾರ ಹೊಂದಿರುವುದರಿಂದ ಬೆಂಗಳೂರಿಗೆ ಉದ್ಯೋಗ ಅರಸಿ ಇತರೆ ಜಿಲ್ಲೆಗಳಿಂದ ಜನರು ವಲಸೆ ಬರುವುದು ಕೂಡ ತಪ್ಪಲಿದೆ. ಸರ್ಕಾರದ ಈ ಸಾಧನೆ ಪ್ರಶಂಸನೀಯವಾದುದು.

**–ಕುಶಾಲ್ ಬೊಪ್ಪಣ್ಣ, ವಿರಾಜಪೇಟೆ**

* * *

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಕುರಿತು ಲೇಖಕ ಎಂ.ಎನ್. ಪ್ರಶಾಂತ್ ಕುಮಾರ್ ಅವರು ಬರೆದಿರುವ ಲೇಖನ ಓದಿ ಸ್ವತಃ ನಾನೇ ಅಲ್ಲಿಗೆ ಹೋಗಿ ಬಂದ ಅನುಭವ ನೀಡಿತು. ಲೇಖನ ಓದಿದವರಿಗೆ ಒಂದು ಬಾರಿ ಅಲ್ಲಿಗೆ ಹೋಗಿ ಬರಬೇಕು ಅನಿಸದಿರದು. ಲೇಖನಕ್ಕೆ ಬಳಸಿರುವ ಛಾಯಾಚಿತ್ರಗಳು ಕೂಡ ಅತ್ಯಂತ ಆಕರ್ಷಕವಾಗಿವೆ.

**–ಚಂದ್ರಣ್ಣ, ಮಂಡ್ಯ**

* * *

ಆರೋಗ್ಯ ದಾಖಲೆಗಳ ರಕ್ಷಣೆ ಮತ್ತು ಸಂಗ್ರಹಣೆಗಾಗಿ ಅಭಿವೃದ್ಧಿ ಪಡಿಸಿರುವ ಆಭಾ ಮೊಬೈಲ್ ಆ್ಯಪ್ ಕುರಿತ ಲೇಖನ ಓದಿ ನಿಜಕ್ಕೂ ಸರ್ಕಾರ ಇಷ್ಟರ ಮಟ್ಟಿಗೆ ತಂತ್ರಜ್ಞಾನದಲ್ಲಿ ಮುಂದುವರೆದಿದೆಯಲ್ಲಾ ಎಂದು ಆಶ್ಚರ್ಯವಾಯಿತು. ಆರೋಗ್ಯ ದಾಖಲೆಗಳನ್ನು ನಾವು ಮನೆಯಲ್ಲಿ ಎಲ್ಲೋ ಇಟ್ಟು, ಬೇಕಾದಾಗ ಹುಡುಕಾಡುತ್ತೇವೆ. ಇಲ್ಲವೇ ಹಳೆಯದಾಯಿತು ಎಂದು ಬಿಸಾಡಿ ಬಿಡುತ್ತೇವೆ.

ಅವಶ್ಯಕತೆ ಇದ್ದಾಗ ಸಿಗದೇ ಹೋದಾಗ ಮತ್ತೆ ಎಲ್ಲಾ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಆದರೆ ಈ ಆ್ಯಪ್‌ನಿಂದ ವೈದ್ಯಕೀಯ ದಾಖಲೆಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳಬಹುದು ಎಂದು ತಿಳಿದ ಕೂಡಲೇ ಈ ಆ್ಯಪ್ ಅನ್ನು ಮೊದಲು ನನ್ನ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡೆ. ಆರೋಗ್ಯಕ್ಕಿಂತ ಮತ್ತಾವುದು ಮುಖ್ಯವಲ್ಲ. ಆರೋಗ್ಯಕ್ಕೆ ಸಂಬಂಧಿಸಿದಂತೆ ಇಂತಹ ಉಪಯುಕ್ತ ಲೇಖನವನ್ನು ನೀಡಿದಕ್ಕಾಗಿ ತುಂಬ ತುಂಬಾ ಧನ್ಯವಾದಗಳು.

**–ಎಸ್.ಬಿ.ಅಶೋಕ್, ಮೈಸೂರು**

ಕಾಶಿ ಯಾತ್ರೆ ಮಾಡಿಸುವ ಭಾರತ್ ಗೌರವ್ ಕಾಶಿ ದರ್ಶನ ರೈಲಿನ ಪ್ರವಾಸ ಕುರಿತ ಲೇಖನವು ಕಾಶಿ ದರ್ಶನ ಮಾಡಲು ಇಚ್ಛಿಸುವವರಿಗೆ ಸೂಕ್ತ ಮಾರ್ಗದರ್ಶನ ನೀಡುವಂತಿತ್ತು. ಲೇಖನದಲ್ಲಿ ರೈಲಿನಲ್ಲಿರುವ ಸೌಲಭ್ಯಗಳು, ಸವಲತ್ತುಗಳು ಮತ್ತು ರೈಲು ಚಲಿಸುವ ಮಾರ್ಗ ಇವೇ ಮುಂತಾದಂತಹ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಗಿದೆ. ಪುಣ್ಯ ಕ್ಷೇತ್ರಗಳಿಗೆ ಕಡಿಮೆ ಖರ್ಚಿನಲ್ಲಿ ಪ್ರವಾಸ ಕೈಗೊಳ್ಳಲು ಅನುಕೂಲವಾಗುವಂತೆ ಪ್ಯಾಕೇಜುಗಳನ್ನು ರೂಪಿಸುವ ನಿಟ್ಟಿನಲ್ಲಿ ಮುಜರಾಯಿ ಇಲಾಖೆ ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಜೀವನದಲ್ಲಿ ಒಮ್ಮೆಯಾದರೂ ಕಾಶಿ ಯಾತ್ರೆ ಕೈಗೊಳ್ಳಬೇಕು ಎನ್ನುವವರಿಗೆ ಸರ್ಕಾರವು ಉತ್ತಮ ಸೌಲಭ್ಯವನ್ನು ಒದಗಿಸಿದೆ.

**–ಮೋಹನ ಕುಮಾರಿ, ಚಿಕ್ಕಮಗಳೂರು**

'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೆ,

ನಮ್ಮ ರಾಜ್ಯ ಸರ್ಕಾರವು ಜನಸಾಮಾನ್ಯರ ಆರೋಗ್ಯ ಸಂರಕ್ಷಣೆಗಾಗಿ ಹೆಚ್ಚಿನ ಕಾಳಜಿಯಿಂದ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ನವೆಂಬರ್ 1 ರಿಂದ ಯಶಸ್ವಿನಿ ಯೋಜನೆಯನ್ನು ಪರಿಷ್ಕೃತಗೊಳಿಸಿ ಮರು ಜಾರಿಗೊಳಿಸಿರುವುದರಿಂದ ಸಹಕಾರಿ ವಲಯದ ಜನರು ನಗದು ರಹಿತ ಚಿಕಿತ್ಸೆಯನ್ನು ಪಡೆಯುವಂತಾಗಿದೆ.

ಗ್ರಾಮೀಣ ಭಾಗದ ರೈತರು ಮತ್ತು ಸಹಕಾರ ಸಂಘಗಳ ಸದಸ್ಯರಿಗೆ ಮಾತ್ರ ಯಶಸ್ವಿನಿ ಯೋಜನೆಯು ಅನ್ವಯವಾಗುತ್ತದೆ. ನಗರ ಪ್ರದೇಶದಲ್ಲಿ ವಾಸವಿರುವ ಆರ್ಥಿಕವಾಗಿ ಹಿಂದುಳಿದ ಜನರ ಆರೋಗ್ಯ ಕಾಪಾಡುವ ಬಗ್ಗೆ ಇಲ್ಲಿಯವರೆಗೂ ಯಾರೂ ಗಮನಹರಿಸಿರಲಿಲ್ಲವೆಂದೇ ಹೇಳಬಹುದು. ಆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ನಗರ ಪ್ರದೇಶದ ಬಡ ಜನರಿಗೂ ಉಚಿತ ಚಿಕಿತ್ಸೆ ನೀಡಬೇಕೆಂದು ನಿರ್ಧರಿಸಿತು.

ಹಾಗಾಗಿ ಸರ್ಕಾರವು ಅದರಲ್ಲೂ ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಯನ್ನು ಒದಗಿಸುವ ಸಲುವಾಗಿ ಇದೇ ಡಿಸೆಂಬರ್ 14 ರಂದು 114 **'ನಮ್ಮ ಕ್ಲಿನಿಕ್'**ಗಳಿಗೆ ಚಾಲನೆ ನೀಡಿದೆ. ಏಕಕಾಲಕ್ಕೆ ಇಷ್ಟು **'ನಮ್ಮ ಕ್ಲಿನಿಕ್'**ಗಳನ್ನು ಪ್ರಾರಂಭಿಸಿರುವುದು ಭಾರತದಲ್ಲೇ ಪ್ರಪ್ರಥಮ. ಇನ್ನು ಕೆಲವೇ ದಿನಗಳಲ್ಲಿ ಹದಿನೈದು ಸಾವಿರದಿಂದ ಇಪ್ಪತ್ತು ಸಾವಿರದವರೆಗಿನ ಜನತೆಗೆ ಅನುಗುಣವಾಗಿ ರಾಜ್ಯದಾದ್ಯಂತ ಒಟ್ಟು 438 ನಮ್ಮ ಕ್ಲಿನಿಕ್‌ಗಳು ಸ್ಥಾಪನೆಗೊಳ್ಳಲಿವೆ.

ನಮ್ಮ ಕ್ಲಿನಿಕ್‌ನಲ್ಲಿ ಸಾಮಾನ್ಯ ಕಾಯಿಲೆಗಳಿಗೆ ಚಿಕಿತ್ಸೆ, ಔಷಧಿ, ಲ್ಯಾಬ್ ಪರೀಕ್ಷೆ, ತಪಾಸಣೆ ಎಲ್ಲವೂ ಸಂಪೂರ್ಣ ಉಚಿತವಾಗಿರುತ್ತದೆ. ಇದು ಆರೋಗ್ಯ ವ್ಯವಸ್ಥೆಯಲ್ಲಿ ಸರ್ಕಾರವು ಕೈಗೊಂಡ ಕ್ರಾಂತಿಕಾರಕ ಯೋಜನೆಯಾಗಲಿದೆ.

ಕುಟುಂಬದ ಎಲ್ಲರ ಕಾಳಜಿಯನ್ನು ಮಾಡುವ ಮಹಿಳೆಯು ತನ್ನ ಆರೋಗ್ಯವನ್ನೇ ನಿರ್ಲಕ್ಷಿಸುವುದರಿಂದ ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ವೈದ್ಯಕೀಯ ಸೇವೆ ಒದಗಿಸಲು ರಾಜ್ಯದಾದ್ಯಂತ ಸುಮಾರು 250 'ಆಯುಷ್ಮತಿ ಕ್ಲಿನಿಕ್' ಅನ್ನು ಪ್ರಾರಂಭಿಸಲು ಆರೋಗ್ಯ ಇಲಾಖೆಯು ಯೋಜನೆಯನ್ನು ರೂಪಿಸುತ್ತಿದೆ. ಇವೆಲ್ಲವೂ ನಮ್ಮ ರಾಜ್ಯ ಸರ್ಕಾರವು ಜನಪರ ಆರೋಗ್ಯ ಸೇವೆಯನ್ನು ನೀಡುತ್ತಿರುವುದಕ್ಕೆ ಪ್ರತ್ಯಕ್ಷ ನಿದರ್ಶನವಾಗಿದೆ.

ಈ ವರ್ಷದ 26 ನೇ ರಾಷ್ಟ್ರೀಯ ಯುವಜನೋತ್ಸವವನ್ನು ನಮ್ಮ ರಾಜ್ಯದ ಹುಬ್ಬಳ್ಳಿಯಲ್ಲಿ ಆಯೋಜಿಸಲು ಕೇಂದ್ರ ಸರ್ಕಾರವು ನಿರ್ಧರಿಸಿದೆ. ಈ ಬಾರಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ನಮ್ಮ ರಾಜ್ಯದಲ್ಲೇ ಜರುಗಿದ್ದು, ಈಗ ಯುವಜನೋತ್ಸವ ಆಚರಣೆಯೂ ನಮ್ಮ ರಾಜ್ಯಕ್ಕೆ ಸಿಕ್ಕಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಲಿದ್ದಾರೆ. ಹಾಗಾಗಿ ಯುವಜನೋತ್ಸವ ಸಮಾರಂಭದ ಸಿದ್ಧತೆ ಕುರಿತು ಮುಖ್ಯಮಂತ್ರಿಗಳು ಪೂರ್ವ ಸಿದ್ಧತಾ ಸಭೆಗಳನ್ನು ನಡೆಸಿ, ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಪ್ರಸ್ತುತ ಸರ್ಕಾರದ ಅವಧಿಯು ಇನ್ನು ಕೆಲವೇ ತಿಂಗಳುಗಳಲ್ಲಿ ಮುಕ್ತಾಯಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಹಮ್ಮಿಕೊಂಡಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕುರಿತು ನಮ್ಮ ಪತ್ರಿಕೆಯಲ್ಲಿ ಮಾಹಿತಿ ನೀಡಲು ನಿರ್ಧರಿಸಲಾಗಿದ್ದು, ಈ ಸಂಚಿಕೆಯಲ್ಲಿ ಕೃಷಿ, ಆರೋಗ್ಯ, ಪಶುಸಂಗೋಪನೆ, ಸಹಕಾರ, ಕೌಶಲ್ಯಾಭಿವೃದ್ಧಿ ಇಲಾಖೆಯ ಕುರಿತು ಲೇಖನಗಳನ್ನು ಪ್ರಕಟಿಸಲಾಗಿದೆ.

ಹಲವು ದೇಶಗಳಲ್ಲಿ ಕೊರೊನಾ ಹೊಸ ರೂಪಾಂತರಿ ವೈರಸ್‌ಗಳು ಕಂಡುಬರುತ್ತಿರುವುದರಿಂದ ಕೇಂದ್ರ ಸರ್ಕಾರವು ಮಾಸ್ಕ್ ಧರಿಸುವುದು ಸೇರಿದಂತೆ ಮತ್ತಿತರ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲು ಸೂಚಿಸಿದೆ. ಆರೋಗ್ಯದ ವಿಷಯದಲ್ಲಿ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ವಹಿಸದೇ ಎಲ್ಲರೂ ಸಾಮಾಜಿಕ ಅಂತರ ಕಾಪಾಡಿಕೊಂಡು ಸರ್ಕಾರದ ಮಾರ್ಗಸೂಚಿಯನ್ನು ಗಂಭೀರವಾಗಿ ಪಾಲಿಸುವಂತೆ ಹಾಗೂ ಲಸಿಕೆಯನ್ನು ಹಾಕಿಸಿಕೊಳ್ಳುವಂತೆ ಮನವಿ ಮಾಡುತ್ತಾ, ಹೊಸ ವರ್ಷ ಎಲ್ಲರಿಗೂ ಸಂತಸವನ್ನು ತರಲೆಂದು ಹಾರೈಸುವೆ.

**ಓದುಗರೆಲ್ಲರಿಗೂ ಹೊಸ ವರ್ಷದ ಮತ್ತು ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From: www.kpscvaani.com



## ಅನ್ನದಾತನ ಆದಾಯ ಹೆಚ್ಚಿಸಲು ಸಹಕಾರಿಯಾದ

# ಕೃಷಿ ಇಲಾಖೆಯ ಯೋಜನೆಗಳು

**ರಾಜ್ಯ ಸರ್ಕಾರವು ಕೃಷಿ ಇಲಾಖೆ ವತಿಯಿಂದ ಅನ್ನದಾತನ ಆದಾಯ ಹೆಚ್ಚಿಸುವಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಮತ್ತು ಚಟುವಟಿಕೆಗಳ ಮೇಲೆ ಈ ಲೇಖನವು ಬೆಳಕು ಚೆಲ್ಲಿದೆ.**

ಸಂಧ್ಯಾ ಸೊರಬ

ಪ್ರಸ್ತುತ ಈಗಿನ ಸರ್ಕಾರ ಬಂದ ಮೇಲೆ ಕೃಷಿ ಇಲಾಖೆ ಹಿಂದೆಂದಿಗಿಂತಲೂ ಹೆಚ್ಚು ಸಕ್ರಿಯವಾಗಿದೆ. ಈ ಸರ್ಕಾರದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಹಾಲಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಕೃಷಿ ಸಚಿವರಾಗಿರುವ ಬಿ.ಸಿ.ಪಾಟೀಲರು ಒಟ್ಟುಗೂಡಿ ಕೃಷಿ ಇಲಾಖೆಯ ಆಡಳಿತ ಯಂತ್ರವನ್ನು ಚುರುಕುಗೊಳಿಸಿದ್ದಾರೆ. ಹಾಗಾಗಿ ಕೃಷಿ ಇಲಾಖೆಯಲ್ಲಿ ಹೊಸ ಹೊಸ ಯೋಜನೆಗಳು ರೈತಪರ ಚಿಂತನೆಗಳು ಅನ್ನದಾತರ ಆದಾಯ ವೃದ್ಧಿಯತ್ತ ಹೆಚ್ಚೆಚ್ಚು ಗಮನ ಹರಿಸಲಾಗಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕನಸಂತೆ ರೈತ ಕೇವಲ ಫಸಲು ಬೆಳೆಯುವುದಕ್ಕೆ ಮಾತ್ರ ಮೀಸಲಾಗಿರಬಾರದು, ರೈತ ರೈತೋದ್ಯಮಿಯಾಗಬೇಕು. ಅನ್ನದಾತನ ಆದಾಯ ದ್ವಿಗುಣಗೊಳಿಸಬೇಕೆಂಬ ಉದ್ದೇಶವನ್ನು ಈಡೇರಿಸುವಲ್ಲಿ ರಾಜ್ಯ ಸರ್ಕಾರವು ಕಾರ್ಯತತ್ಪರವಾಯಿತು. ಇಡೀ ದೇಶದಲ್ಲಿಯೇ ಮೊದಲ ಬಾರಿಗೆ **"ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ"** ಯೇ ಆಗಿರಬಹುದು, ಸ್ವತಃ ರೈತನೇ ತನ್ನ ಬೆಳೆಗೆ ತಾನೇ ಪ್ರಮಾಣಪತ್ರ ಕೊಡುವ **"ಮೊಬೈಲ್ ಆ್ಯಪ್ ಬೆಳೆ ಸಮೀಕ್ಷೆ"** ಇರಬಹುದು, ಇಂತಹ ಹಲವು ಯೋಜನೆಗಳು ಕರ್ನಾಟಕದ ಕೃಷಿ ಇಲಾಖೆಯತ್ತ ದೇಶವೇ ತಿರುಗಿ ನೋಡುವಂತೆ ಮಾಡಿತು. ಕರ್ನಾಟಕ ರಾಜ್ಯದ ಹಲವು ಯೋಜನೆಗಳು ಇತರೆ ರಾಜ್ಯಗಳಿಗೂ ಮಾದರಿಯಾಗಿದ್ದು, ಕೇಂದ್ರ ಸರ್ಕಾರ ಕರ್ನಾಟಕ ಕೃಷಿ ಇಲಾಖೆಯನ್ನು **"ಅಗ್ರಿ ಟ್ರೆಂಡ್ ಸೆಟ್ಟರ್"** ಎಂದು ಶ್ಲಾಘಿಸಿ ಪ್ರಶಂಸಿದೆ.




Downloaded From: www.kpscvaani.com

**ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮ:**

ರೈತರ ಮಕ್ಕಳು ಸ್ನಾತಕೋತ್ತರ ಶಿಕ್ಷಣದವರೆಗೆ ವಿದ್ಯಾಭ್ಯಾಸ ಪಡೆಯಲು ಪ್ರೋತ್ಸಾಹಿಸಲು ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೊದಲ ದಿನವೇ 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಕಾರ್ಯಕ್ರಮವನ್ನು ಘೋಷಣೆ ಮಾಡಿ ಈ ಸರ್ಕಾರ ರೈತರಿಗಷ್ಟೇ ಅಲ್ಲದೇ ರೈತರ ಮಕ್ಕಳಿಗೂ ಬೆಳಕಾಗಬಲ್ಲದೆಂಬುದನ್ನು ತೋರಿದ್ದಾರೆ. ಈ ಯೋಜನೆಯಡಿ 8, 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರೈತ ಕುಟುಂಬದ ಹೆಣ್ಣುಮಕ್ಕಳು ಮತ್ತು 10ನೇ ತರಗತಿಯನ್ನು ಪೂರೈಸಿರುವ ಹಾಗೂ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣಸಂಸ್ಥೆ / ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳವರೆಗೆ ವಿದ್ಯಾಭ್ಯಾಸ ಮಾಡುತ್ತಿರುವ ರೈತರ ಮಕ್ಕಳು ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ. ವಿದ್ಯಾರ್ಥಿ ವೇತನವನ್ನು ವಾರ್ಷಿಕವಾಗಿ ಬ್ಯಾಂಕ್ ಖಾತೆಗಳಿಗೆ ನೇರನಗದು ವರ್ಗಾವಣೆ (Direct Benefit Transfer – DBT) ಪದ್ಧತಿಯ ಮೂಲಕ ವರ್ಗಾಯಿಸಲಾಗುತ್ತದೆ. 2022 ಡಿಸೆಂಬರ್ 12 ರವರೆಗೆ 2021 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಒಟ್ಟು 10,22,505 ವಿದ್ಯಾರ್ಥಿಗಳಿಗೆ 451.27 ಕೋಟಿ ರೂ. ವಿದ್ಯಾರ್ಥಿವೇತನ ಮಂಜೂರಾಗಿದೆ.

**ಪ್ರಧಾನ್ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ:**

ಕರ್ನಾಟಕ ರಾಜ್ಯದಲ್ಲಿ ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ದಿನಾಂಕ 01.12.2018 ರಿಂದ ಅನ್ವಯ ವಾಗುವಂತೆ ಫೆಬ್ರವರಿ 2019 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸಾಗುವಳಿ ಭೂಮಿ ಹೊಂದಿರುವ (01.02.2019 ರಳೊಗಾಗಿ ಸ್ವಾಧೀನದಲ್ಲಿರುವ /ಭೂದಾಖಲೆಯಲ್ಲಿ ಹೆಸರಿರುವ) ಎಲ್ಲಾ ಅರ್ಹ ರೈತ ಕುಟುಂಬಕ್ಕೆ (ಒಂದು ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳು) ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ




ಕೃಷಿ ಮೇಳದಲ್ಲಿ ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿದ ಸಂದರ್ಭ.

ಆದಾಯಗಳಿಸಲು ನೆರವಾಗಲು ವಾರ್ಷಿಕ ರೂ.6000/–ಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಸದರಿ ಅನುದಾನವನ್ನು ರೂ.2000/–ಗಳಂತೆ ಮೂರು ಕಂತುಗಳಲ್ಲಿ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುತ್ತಿದೆ.

ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ದಿನಾಂಕ 14.08.2019 ರಿಂದ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ರೂ.4000/ಗಳ ಆರ್ಥಿಕ ನೆರವನ್ನು ಎರಡು ಕಂತುಗಳಲ್ಲಿ ಪಿ.ಎಂ.ಕಿಸಾನ್–ಕರ್ನಾಟಕ ಯೋಜನೆಯಡಿ ನೀಡಲಾಗುತ್ತಿದೆ. ಇಲ್ಲಿಯವರೆಗೆ 2022–23 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಒಟ್ಟು 10,871.85 ಕೋಟಿ ರೂ. ರಾಜ್ಯ ಸರ್ಕಾರದಿಂದ 4821.37 ಕೋಟಿ ರೂ. ಮೊತ್ತ ವರ್ಗಾಯಿಸಲಾಗಿದೆ.

**ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ:**

ಪ್ರಕೃತಿ ವಿಕೋಪಗಳಿಂದ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಆರ್ಥಿಕ ಬೆಂಬಲ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ 2016–17 ನೇ ಸಾಲಿನಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2020–21 ನೇ ಸಾಲಿನ ಮುಂಗಾರು ಹಂಗಾಮಿನಿಂದ ಈ ಯೋಜನೆಗೆ ಕೆಲವೊಂದು ಮಾರ್ಪಾಡುಗಳನ್ನು ಮಾಡಲಾಗಿದೆ.2018–19 ಸಾಲಿನಲ್ಲಿ 20.94 ಲಕ್ಷ ರೈತರು ರೂ.188.85 ಕೋಟಿಗಳ ರೈತರ ವಿಮಾ ಕಂತನ್ನು ಪಾವತಿಸಿ ನೋಂದಾಯಿಸಿದ್ದು, ವಿಮಾ ಸಂಸ್ಥೆಯವರಿಂದ 13.02 ಲಕ್ಷ ರೈತರಿಗೆ ರೂ.2632.22 ಕೋಟಿಗಳ ಬೆಳೆವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥ ಪಡಿಸಲಾಗಿರುತ್ತದೆ.

2019–20 ಸಾಲಿನಲ್ಲಿ 21.02 ಲಕ್ಷ ರೈತರು ರೂ.173.55 ಕೋಟಿಗಳ ರೈತರ ವಿಮಾಕಂತನ್ನು ಪಾವತಿಸಿ ನೋಂದಾಯಿಸಿದ್ದು, ವಿಮಾ ಸಂಸ್ಥೆಯವರಿಂದ 7.61 ಲಕ್ಷ ರೈತರಿಗೆ ರೂ.868.81 ಕೋಟಿಗಳ ಬೆಳೆವಿಮೆ ಪರಿಹಾರ ಮೊತ್ತವನ್ನು ಹಾಗೂ 2020–21ನೇ ಸಾಲಿನಲ್ಲಿ 15.16 ಲಕ್ಷ ರೈತರು ರೂ.143.31 ಕೋಟಿಗಳ ರೈತರ ವಿಮಾಕಂತನ್ನು ಪಾವತಿಸಿ ನೋಂದಾಯಿಸಿದ್ದು, ವಿಮಾ ಸಂಸ್ಥೆಯವರಿಂದ 5.03 ಲಕ್ಷ ರೈತರಿಗೆ ರೂ.624.68 ಕೋಟಿಗಳ ಬೆಳೆವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥ ಪಡಿಸಲಾಗಿರುತ್ತದೆ.

2021–22 ಸಾಲಿನಲ್ಲಿ 15.77 ಲಕ್ಷ ರೈತರು ರೂ.145.51 ಕೋಟಿಗಳ ವಿಮಾಕಂತನ್ನು ಪಾವತಿಸಿ ನೋಂದಾಯಿಸಿರುತ್ತಾರೆ. ವಿಮಾ ಸಂಸ್ಥೆಯವರಿಂದ 8.02 ಲಕ್ಷ ರೈತರಿಗೆ ರೂ.830.80 ಕೋಟಿಗಳ ಬೆಳೆವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥ ಪಡಿಸಲಾಗಿರುತ್ತದೆ.



Downloaded From: www.kpscvaani.com



ಅಡಿಕೆ ಮರಕ್ಕೆ ಎಲೆ ಚುಕ್ಕಿ ರೋಗ ಬಂದಿರುವುದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪರಿಶೀಲನೆ ನಡೆಸಿರುವುದು.

2022 ರ ಮುಂಗಾರು ಹಂಗಾಮಿನಲ್ಲಿ ದಾಖಲೆ ಪ್ರಮಾಣದಲ್ಲಿ ಒಟ್ಟು 19.61 ಲಕ್ಷ ರೈತರು ಬೆಳೆ ವಿಮೆ ಯೋಜನೆಯಡಿ ನೋಂದಣಿಯಾಗಿರುತ್ತಾರೆ. 2022ರ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ವೈಫಲ್ಯ, ಸ್ಥಳ ನಿರ್ದಿಷ್ಟ ಪ್ರಕೋಪ ಮತ್ತು ಮಧ್ಯಂತರ ಬೆಳೆ ವಿಮೆ ಪರಿಹಾರದಡಿ ಒಟ್ಟು 88,832 ರೈತ ಪ್ರಸ್ತಾವನೆಗಳಿಗೆ ರೂ.67.52 ಕೋಟಿಗಳ ಬೆಳೆವಿಮೆ ಪರಿಹಾರ ಪಾವತಿಸಲಾಗಿದೆ.

2022–23 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 19.62 ಲಕ್ಷ ರೈತ ಪ್ರಸ್ತಾವನೆಗಳು ಬೆಳೆವಿಮೆ ಯೋಜನೆಯಡಿ ಸ್ವೀಕೃತಗೊಂಡಿರುತ್ತವೆ. ಪ್ರಿವೆಂಟೆಡ್ ಶೋಯಿಂಗ್ ಮತ್ತು ಸ್ಥಳ ನಿರ್ದಿಷ್ಟ ಪ್ರಕೋಪದಡಿ ಒಟ್ಟು 5356 ಫಲಾನುಭವಿಗಳಿಗೆ 393.51 ಲಕ್ಷ ರೂ.ಗಳ ಬೆಳೆವಿಮೆ ಪರಿಹಾರವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥ ಪಡಿಸಲಾಗಿರುತ್ತದೆ.

**ಕೃಷಿ ಯಾಂತ್ರೀಕರಣ:**

ರಾಜ್ಯದಲ್ಲಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳಲ್ಲಿ ರೈತರ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ, ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಂಡು ಕೃಷಿಯಲ್ಲಿ ಯಾಂತ್ರೀಕರಣವನ್ನು ಪ್ರೋತ್ಸಾಹಿಸಲು 'ಕೃಷಿ ಯಾಂತ್ರೀಕರಣ ಯೋಜನೆಯಡಿ' ಟ್ರ್ಯಾಕ್ಟರ್ ಹೊರತು ಪಡಿಸಿ ಇತರೆ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ರೈತರಿಗೆ ಶೇ 50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ. 90 ರಷ್ಟು ಸಹಾಯಧನವನ್ನು ಗರಿಷ್ಠ ರೂ. 1.00 ಲಕ್ಷದವರೆಗೆ ನೀಡಲಾಗುತ್ತಿದೆ.

ರಾಜ್ಯದಲ್ಲಿ ಕೃಷಿಯಲ್ಲಿ ಯಾಂತ್ರೀಕರಣವನ್ನು ಹೆಚ್ಚಿಸಲು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಂಡು ರೈತರ ಶ್ರಮವನ್ನು ಕಡಿತಗೊಳಿಸಲು ಈ ಸರ್ಕಾರದ ಅವಧಿಯಲ್ಲಿ 7.6 ಲಕ್ಷ ರೈತರಿಗೆ ವಿವಿಧ ಕೃಷಿ ಯಂತ್ರೋಪಕರಣಗಳ ಖರೀದಿಗಾಗಿ 1744.48 ಕೋಟಿ ರೂ. ಸಹಾಯಧನವನ್ನು ಒದಗಿಸಲಾಗಿದೆ.

ಅದೇ ರೀತಿ ವೈಯಕ್ತಿಕವಾಗಿ ಕೃಷಿ ಯಂತ್ರೋಪಕರಣಗಳ ಖರೀದಿಗೆ ಬಡರೈತರಿಗೆ, ಸಣ್ಣ, ಅತಿಸಣ್ಣ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಯಾಧಾರದಲ್ಲಿ ಖರೀದಿಸಲು ಅನುಕೂಲವಾಗುವಂತೆ ರಾಜ್ಯದಲ್ಲಿ 302 ಕೃಷಿ ಯಂತ್ರಧಾರೆ ಕೇಂದ್ರಗಳನ್ನು 139.84 ಕೋಟಿ ಸಹಾಯಧನ ಒದಗಿಸಿ ಸೇವಾಧಾರೆ ಸಂಸ್ಥೆಗಳ ಸಹಯೋಗದಲ್ಲಿ ಸ್ಥಾಪಿಸಲಾಗಿರುತ್ತದೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ 440 ಕೃಷಿ ಯಂತ್ರೋಪಕರಣ ಬ್ಯಾಂಕ್‌ಗಳನ್ನು ಶೇ.80 ರಷ್ಟು ಸಹಾಯದನದಡಿಯಲ್ಲಿ 35.2 ಕೋಟಿ ರೂ.ಗಳ ಸಹಾಯಧನ ಒದಗಿಸಿ ಸ್ಥಾಪಿಸಲಾಗಿದೆ.

ಈ ಯೋಜನೆಯಿಂದ ಕೃಷಿಕರು ಉಳುಮೆ ಮಾಡಲು ಮತ್ತು ಕೊಯ್ಲುಮಾಡಲು ಬೇಕಾಗುವ ಉಪಕರಣಗಳನ್ನು ಖರೀದಿ ಮಾಡಿಕೊಂಡು ಕೃಷಿ ಚಟುವಟಿಕೆಯಲ್ಲಿ ತಮ್ಮ ಶ್ರಮವನ್ನು ಕಡಿಮೆ ಮಾಡಿಕೊಂಡಿದ್ದಾರೆ.

**ಬಿತ್ತನೆ ಬೀಜ ವಿತರಣೆ:**

ರಾಜ್ಯ ಸರ್ಕಾರದ 'ಬಿತ್ತನೆ ಬೀಜ ಮತ್ತು ಇತರೆ ಹೂಡುವಳಿ' ರಿಯಾಯಿತಿ ಯೋಜನೆಯಡಿ ಭತ್ತ, ರಾಗಿ, ಜೋಳ, ಮೆಕ್ಕೆಜೋಳ, ಉದ್ದು, ಹೆಸರು, ಕಡಲೆ, ಅಲಸಂದೆ, ನೆಲಗಡಲೆ, ಸೋಯಾ, ಅವರೆ, ಸೂರ್ಯಕಾಂತಿ, ಗೋದಿ, ಕುಸುಬೆ ಮತ್ತು ನವಣೆ ಬಿತ್ತನೆ ಬೀಜಗಳ ಪ್ರಮಾಣಿತ ಹಾಗೂ ನಿಜ ಚೀಟಿ ಬಿತ್ತನೆ ಬೀಜಗಳನ್ನು ರಾಜ್ಯದ ಎಲ್ಲಾ ವರ್ಗದ ರೈತರಿಗೆ ರಿಯಾಯಿತಿ (ಸಾಮಾನ್ಯ ರೈತರಿಗೆ ಶೇ 50ರ ವರೆಗೆ ಹಾಗೂ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.75ರ) ದರದಲ್ಲಿ ವಿತರಿಸಲಾಗುತ್ತದೆ. ಒಟ್ಟಾರೆ ಗರಿಷ್ಠ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ ಯಾವುದು ಕಡಿಮೆಯೋ ಆ ವಿಸ್ತೀರ್ಣದ ಮಿತಿಯೊಳಗೆ ರೈತರಿಗೆ ಸಕಾಲದಲ್ಲಿ ಹೋಬಳಿ ಮಟ್ಟದಲ್ಲಿಯೇ ಉತ್ತಮ ಬಿತ್ತನೆ

**ರೈತ ಶಕ್ತಿ**

2022–23 ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು ಪ್ರತಿ ಎಕರೆಗೆ ರೂ.250/– ರಂತೆ ಗರಿಷ್ಠ 5 ಎಕರೆಗಳಿಗೆ ರೂ.1000/–ಗಳನ್ನು ಡಿ.ಬಿ.ಟಿ ಮೂಲಕ ಡೀಸೆಲ್‌ಗೆ ಸಹಾಯಧನವನ್ನು ನೀಡುವ ಯೋಜನೆ ಇದಾಗಿದ್ದು, ಇದಕ್ಕಾಗಿ ರೂ.400.00 ಕೋಟಿ ರೂ.ಗಳ ಅನುದಾನವನ್ನು ಇಡಲಾಗಿದೆ. ಶೀಘ್ರದಲ್ಲಿಯೇ ರೈತ ಶಕ್ತಿ ಯೋಜನೆ ಜಾರಿಯಾಗಲಿದೆ.



Downloaded From: www.kpscvaani.com



ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮ.

ಬೀಜಗಳು ಲಭ್ಯವಾಗುವಂತೆ ಆಯಾ ಹೋಬಳಿಯ ರೈತ ಸಂಪರ್ಕ ಕೇಂದ್ರಗಳು/ ಗುರುತಿಸಿದ ಹೆಚ್ಚುವರಿ ಮಾರಾಟ ಕೇಂದ್ರಗಳು ಹಾಗೂ ಗ್ರಾಮ ಮಟ್ಟದಲ್ಲಿಯೇ ಲಭ್ಯವಾಗುವಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದೆ.

**ಬೆಳೆ ಸಮೀಕ್ಷೆ ಯೋಜನೆ:**

ಬೆಳೆ ಸಮೀಕ್ಷೆ ಯೋಜನೆಯು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಈ ಯೋಜನೆಯಡಿ ನನ್ನ ಬೆಳೆ ನನ್ನ ಹಕ್ಕು ಎಂಬ ಘೋಷದೊಂದಿಗೆ ರೈತರಿಂದಲೇ ತಮ್ಮ ಬೆಳೆ ಸಮೀಕ್ಷೆಯನ್ನು ಈಗಾಗಲೇ ಬೆಳೆ ಸಮೀಕ್ಷೆ ಆ್ಯಪ್ ಉಪಯೋಗಿಸಿ 2020-21ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮೊಟ್ಟ ಮೊದಲ ಬಾರಿಗೆ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಿ ರೈತರೇ ತಮ್ಮ ಜಮೀನಿನಲ್ಲಿ ಬೆಳೆದ ಬೆಳೆ ವಿವರಗಳನ್ನು ಆ್ಯಪ್ ಮೂಲಕ ನಮೂದಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದು, ಈ ರೀತಿಯ ಪ್ರಯೋಗ ದೇಶದಲ್ಲೇ ಮೊಟ್ಟ ಮೊದಲು ಆಗಿರುವುದು ಕರ್ನಾಟಕ ರಾಜ್ಯದ ಹೆಮ್ಮೆಯ ವಿಷಯವಾಗಿರುತ್ತದೆ. ಈ ಕುರಿತು ಸರ್ಕಾರದ ಕಾರ್ಯಕ್ರಮವನ್ನು ಜನಾಂದೋಲನ ಕಾರ್ಯಕ್ರಮವಾಗಿ ಅಳವಡಿಸಿದ್ದಕ್ಕಾಗಿ ಕೇಂದ್ರ ಸರ್ಕಾರದ ಕೃಷಿ ಸಚಿವಾಲಯದಿಂದ ಕರ್ನಾಟಕ ರಾಜ್ಯಕ್ಕೆ ಪ್ರಸಂಶನಾ ಪತ್ರವನ್ನು ನೀಡಿದ್ದಲ್ಲದೇ ಈ ಬೆಳೆ ಸಮೀಕ್ಷೆ ಯೋಜನೆಯನ್ನು ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲೂ ಅಳವಡಿಸಲು ಕ್ರಮ ಜರುಗಿಸುವುದಾಗಿ ತಿಳಿಸಿರುವುದು ಹೆಮ್ಮೆಯ ವಿಷಯವಾಗಿರುತ್ತದೆ.

2019-20ನೇ ಸಾಲಿನಲ್ಲಿ ಖಾಸಗಿ ನಿವಾಸಿಗಳ ಆ್ಯಪ್ ಮೂಲಕ 355.96 ಲಕ್ಷ ತಾಕುಗಳ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. 2020-21ನೇ ಸಾಲಿನಲ್ಲಿ ರೈತರ ಮೊಬೈಲ್ ಆ್ಯಪ್ ಮೂಲಕ 80.63 ಲಕ್ಷ ತಾಕಗಳು ಹಾಗೂ ಖಾಸಗಿ ನಿವಾಸಿಗಳ ಆ್ಯಪ್ ಮೂಲಕ 293.20 ಲಕ್ಷ ತಾಕುಗಳಂತೆ ಒಟ್ಟಾರೆಯಾಗಿ 373.83 ಲಕ್ಷ ತಾಕುಗಳ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. 2021-22ನೇ ಸಾಲಿನಲ್ಲಿ ರೈತರ ಮೊಬೈಲ್ ಆ್ಯಪ್ ಮೂಲಕ 17.50 ಲಕ್ಷ ತಾಕುಗಳು ಹಾಗೂ ಖಾಸಗಿ ನಿವಾಸಿಗಳ ಆ್ಯಪ್ ಮೂಲಕ 408.66 ಲಕ್ಷ ತಾಕುಗಳಂತೆ ಒಟ್ಟಾರೆಯಾಗಿ 426.17 ಲಕ್ಷ ತಾಕುಗಳ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. 2022-23ನೇ ಸಾಲಿನಲ್ಲಿ ಈವರೆಗೆ ರೈತರ ಮೊಬೈಲ್ ಆ್ಯಪ್ ಮೂಲಕ 8.17 ಲಕ್ಷ ತಾಕುಗಳು ಹಾಗೂ ಖಾಸಗಿ ನಿವಾಸಿಗಳ ಆ್ಯಪ್ ಮೂಲಕ 247.26 ಲಕ್ಷ ತಾಕುಗಳಂತೆ ಒಟ್ಟಾರೆಯಾಗಿ 255.43 ಲಕ್ಷ ತಾಕುಗಳ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ.

**ರೈತಸಿರಿ ಯೋಜನೆ:**

ರಾಜ್ಯದ ಸಿರಿಧಾನ್ಯ ಕ್ಷೇತ್ರವನ್ನು ವಿಸ್ತರಿಸುವ ನಿಟ್ಟಿನಲ್ಲಿ ರೈತಸಿರಿ ಯೋಜನೆಯನ್ನು 2019-20 ನೇ ಸಾಲಿನಿಂದ ಪ್ರಾರಂಭಿಸಿದ್ದು ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಬೆಳೆಗಳನ್ನು ಬೆಳೆಯುವ ರೈತರಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ DBT ಮುಖಾಂತರ ಪ್ರೋತ್ಸಾಹಧನವನ್ನು ಇಲ್ಲಿಯವರೆವಿಗೆ 67227 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಒಟ್ಟು 79208 ರೈತರಿಗೆ ರೂ.60.00 ಕೋಟಿ ಅನುದಾನವನ್ನು ಪಾವತಿಸಲಾಗಿದೆ. ಮುಂದುವರೆದು, ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರಾಂಡಿಂಗ್ ಘಟಕಗಳಿಗೆ ಯೋಜನೆಯ ಪ್ರಸ್ತಾವನೆಯ ಯಂತ್ರೋಪಕರಣಗಳ ಒಟ್ಟು ವೆಚ್ಚದ ಮೇಲೆ ಶೇ.50ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳನ್ನು ನೀಡುತ್ತಿದ್ದು ಆಸಕ್ತ ರೈತರು/ರೈತ ಗುಂಪುಗಳು/ ರೈತ ಉತ್ಪಾದಕರ ಗುಂಪುಗಳು/ ನವೋದ್ದಿಮೆಗಳು/ ಸಾರ್ವಜನಿಕ ಉದ್ದಿಮೆಗಳು, ಪ್ರಸ್ತಾವನೆ ಸಲ್ಲಿಸಿ ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.


ತಾವು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಕೃಷಿ ಮೇಳದಲ್ಲಿ ತರಕಾರಿಗಳ ಪರಿಶೀಲನೆ ಮಾಡುತ್ತಿರುವುದು


Downloaded From: www.kpscvaani.com



ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾ ವಾಹನ ಕೃಷಿ ಸಂಜೀವಿನಿ ರೈತ ಜಮೀನಿಗೆ ಭೇಟಿ ನೀಡಿರುವುದು.

**ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ**

ರಾಜ್ಯದಲ್ಲಿ ಲಭ್ಯವಿರುವ ನೀರನ್ನು ಸದ್ಬಳಕೆ ಮಾಡಿಕೊಂಡು ನೀರಿನ ಉಪಯೋಗದ ದಕ್ಷತೆ ಹೆಚ್ಚಿಸಲು ರೈತರಿಗೆ ಶೇ.90 ರಷ್ಟು ಸಹಾಯಧನದಲ್ಲಿ ತುಂತುರು ಮತ್ತು ಹನಿ ನೀರಾವರಿ ಘಟಕಗಳನ್ನು ವಿತರಿಸಲಾಗಿದೆ. 9.58 ಲಕ್ಷ ರೈತರ 9.82 ಲಕ್ಷ ಹೆಕ್ಟೇರ್ ಪ್ರದೇಶವನ್ನು ತುಂತುರು ಮತ್ತು ಹನಿ ನೀರಾವರಿ ಪದ್ಧತಿಯಡಿ ತರಲು 2010.9 ಕೋಟಿ ಸಹಾಯಧನವನ್ನು ಒದಗಿಸಲಾಗಿದೆ.

**ಸಾವಯವ ಕೃಷಿ:**

ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ ಕಾರ್ಯಕ್ರಮದಡಿ ರಾಜ್ಯದ ಆಸಕ್ತ ಸಾವಯವ ರೈತ/ರೈತ ಗುಂಪುಗಳ ಕ್ಷೇತ್ರವನ್ನು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ (KSSOCA)ಯಡಿ ನೋಂದಾಯಿಸಿ ಸಾವಯವ ಪ್ರಮಾಣೀಕರಣದ ವ್ಯಾಪ್ತಿಗೆ ಒಳಪಡಿಸುವ ಸಂಬಂಧದ ವೆಚ್ಚವನ್ನು KSSOCA ಸಂಸ್ಥೆಯ ಮೂಲಕ ಭರಿಸಲಾಗುತ್ತಿದೆ. ಒಟ್ಟಾರೆಯಾಗಿ ಕಾರ್ಯಕ್ರಮದಡಿ 16514 ರೈತರ 26611 ಹೆಕ್ಟೇರ್ ಪ್ರದೇಶವನ್ನು ಹೆಚ್ಚುವರಿಯಾಗಿ ಪ್ರಮಾಣೀಕರಣಕ್ಕೆ ಒಳಪಡಿಸಲಾಗಿದೆ. ರಾಜ್ಯದ ಆಸಕ್ತ ಗುಂಪು ಮತ್ತು ಕೃಷಿಕರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದ್ದು KSSOCA ಸಂಸ್ಥೆಯ ಮೂಲಕ ಪ್ರಸ್ತಾವನೆಗಳ ನೋಂದಣಿ ಪ್ರಗತಿಯಲ್ಲಿರುತ್ತದೆ.

2021-22ನೇ ಸಾಲಿನ ಆಯವ್ಯಯ ಕಾರ್ಯಕ್ರಮವಾದ ಸಾವಯವ ಸಿರಿ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗಿರುವ ಸಾಮಾಜಿಕ ಸಂಸ್ಥೆಗಳ ಮುಖಾಂತರ ಸಾವಯವ ಕೃಷಿಯಲ್ಲಿ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ ಆಯೋಜಿಸಲು ಕ್ರಮಕೈಗೊಳ್ಳಲಾಗಿದ್ದು, ಪ್ರಸ್ತುತ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಅಲ್ಲದೆ, ರಾಜ್ಯದ 5 ಕೃಷಿ/ತೋಟಗಾರಿಕಾ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಮಾದರಿ ಸಾವಯವ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಹಾಗೆಯೇ ಸಾವಯವ ಬೀಜೋತ್ಪಾದನೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿರುತ್ತದೆ.



**ಮಾನ್ಯ ಮುಖ್ಯಂತ್ರಿಗಳ ನೈಸರ್ಗಿಕ ಕೃಷಿ ಕಾರ್ಯಕ್ರಮ:**

2022-23 ನೇ ಸಾಲಿನಲ್ಲಿ ರಾಜ್ಯದ ಕೃಷಿ/ತೋಟಗಾರಿಕಾ ವಿಶ್ವವಿದ್ಯಾಲಯಗಳ ಮೂಲಕ "ಮುಖ್ಯ ಮಂತ್ರಿಗಳ ನೈಸರ್ಗಿಕ ಕೃಷಿ" ಯೋಜನೆಯಡಿ ಪ್ರಾಯೋಗಿಕ ಪ್ರಯೋಗಗಳನ್ನು ಪ್ರಾರಂಭಿಸಲಾಗಿದ್ದು, ಪ್ರತಿ ಕೃಷಿ ವಿಶ್ವವಿದ್ಯಾಲಯಗಳ ವ್ಯಾಪ್ತಿಯ 1000 ಎಕರೆ ರೈತರ ಕ್ಷೇತ್ರಗಳಲ್ಲಿ ರೈತರ ಸಹಭಾಗಿತ್ವದಲ್ಲಿ ಸಂಶೋಧನೆ ಕೈಗೊಳ್ಳುವುದಾಗಿರುತ್ತದೆ. ಪ್ರಸ್ತುತ ಕಾರ್ಯಕ್ರಮದಡಿ ಯೋಜನಾ ಪ್ರದೇಶಗಳು, ರೈತರು ಮತ್ತು ಕ್ಲಸ್ಟರ್‌ಗಳನ್ನು ಗುರುತಿಸಲಾಗಿದ್ದು ಎಲ್ಲಾ ಕ್ಲಸ್ಟರ್‌ಗಳಲ್ಲಿ ತರಬೇತಿ ನೀಡಲಾಗುವುದು.

**ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ:**

ರೈತರ ಆದಾಯ ದ್ವಿಗುಣಗೊಳಿಸಲು ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯತೆ ಕಾರ್ಯಕ್ರಮದಡಿ 2 ವರ್ಷಗಳ ಅವಧಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ (6027 ಸಂಖ್ಯೆ) ಸಮಗ್ರ ಕೃಷಿ ಪದ್ಧತಿಯ ಮಾದರಿ ಸ್ಥಾಪಿಸಿ ಕಲಿಕಾ ಕೇಂದ್ರವಾಗಿ ರೂಪಿಸಲು RKVY ಯೋಜನೆಯಡಿ ರೂ.72.34 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ. 2021-22 ನೇ ಸಾಲಿನಲ್ಲಿ 1703 ಫಲಾನುಭವಿಗಳು ಸಮಗ್ರ ಕೃಷಿ ಪದ್ಧತಿಯ ಮಾದರಿಯನ್ನು ಅಳವಡಿಸಿಕೊಂಡಿದ್ದು, 1601 ಫಲಾನುಭವಿಗಳಿಗೆ ರೂ. 7.83 ಕೋಟಿ ಸಹಾಯಧನವನ್ನು ನೇರ ನಗದು ವರ್ಗಾವಣೆ ಮಾಡಲಾಗಿರುತ್ತದೆ. 2022-23 ನೇ ಸಾಲಿಗೆ 3470 ಮಾದರಿಗಳ ಅನುಷ್ಠಾನದ ಗುರಿ ಹೊಂದಿದ್ದು, 2985 ರೈತರು ಸದರಿ ಕಾರ್ಯಕ್ರಮದಡಿ ಈಗಾಗಲೇ ನೋಂದಾಯಿಸಿಕೊಂಡಿದ್ದು, ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದೆ.


Downloaded From: www.kpscvaani.com




ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಯೋಜನೆಗೆ ಚಾಲನೆ ನೀಡಿದ ಸಂದರ್ಭ

**ತಾಂತ್ರಿಕತೆಗಳ ಅಭಿವೃದ್ಧಿಗೆ ಸಮಿತಿ ರಚನೆ:**

ರಾಜ್ಯದ ಕೃಷಿ ವಿಶ್ವ ವಿದ್ಯಾಲಯಗಳ ಮೂಲಕ ರೈತರಿಗೆ ಅನುಕೂಲವಾಗುವಂತಹ ತಾಂತ್ರಿಕತೆಗಳನ್ನು ಅಬಿವೃದ್ಧಿಪಡಿಸುವ ಕುರಿತು ಪರಿಶೀಲಿಸಲು ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ.

ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಕೃಷಿ ಪಂಡಿತ ಪ್ರಶಸ್ತಿ ವಿಜೇತ ರೈತರನ್ನೊಳಗೊಂಡು ಸದರಿ ಸಮಿತಿಯ ಎರಡು ಸಭೆಯನ್ನು ನಡೆಸಲಾಗಿದ್ದು, ಪ್ರತಿ ಸಭೆಯಲ್ಲಿ ಒಂದು ಅಥವಾ ಎರಡು ಅತೀ ಮುಖ್ಯ ಕೃಷಿ ತಾಂತ್ರಿಕತೆಗಳ ಕುರಿತು ಚರ್ಚಿಸಿ ತೀರ್ಮಾನ ಕೈಗೊಂಡು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿರುತ್ತದೆ. ಅದರಂತೆ ಸಭೆಗಳಲ್ಲಿ ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನದ ಬಳಕೆ ಹಾಗೂ ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ನಡೆಸುತ್ತಿರುವ ಸಂಶೋಧನೆ ಹಾಗೂ ನೂತನ ತಳಿಗಳ ಕುರಿತು ಚರ್ಚಿಸಲಾಗಿದ್ದು, ಅವಶ್ಯಕತೆಗನುಗುಣವಾಗಿ ರೈತರಿಗೆ ಅನುಕೂಲವಾಗುವಂತಹ ಸಂಶೋಧನೆಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಮುಂದುವರೆದು, ಉನ್ನತಾಧಿಕಾರ ಸಮಿತಿಯು ಕೃಷಿ ಉಪ ಉತ್ಪನ್ನಗಳನ್ನು ಉತ್ತೇಜಿಸುವಂತಹ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸಲು ಅನುಕೂಲವಾಗುವಂತೆ, ಕೃಷಿ ವಿಶ್ವ ವಿದ್ಯಾಲಯಗಳ ಮೂಲಕ ಉತ್ಪನ್ನ ಅಭಿವೃದ್ಧಿಗೆ ಪೂರಕವಾಗುವಂತೆ ಸಂಶೋಧನೆ, ತರಬೇತಿಗಳನ್ನು ಆಯೋಜಿಸಲು ಹಾಗೂ ಸೆಕೆಂಡರಿ ಕೃಷಿ ನಿರ್ದೇಶನಾಲಯದ ಮೂಲಕ ಅನುಷ್ಠಾನ ಮಾಡಲು ಒತ್ತು ನೀಡುತ್ತಿದೆ.



ಕೃಷಿ ಇಲಾಖೆ ಆಯೋಜಿಸಿದ್ದ ಸಿರಿಧಾನ್ಯ ಮೇಳ ಕಾರ್ಯಕ್ರಮ ಉದ್ಘಾಟನೆ ಸಂದರ್ಭ.

**ಸೆಕಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ:**

ಕರ್ನಾಟಕ ಸರ್ಕಾರವು ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪ್ರಾಣಿಜನ್ಯ ಉತ್ಪನ್ನಗಳ ಸಂಸ್ಕರಣೆ, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಮೂಲಕ ರೈತರಿಗೆ ಆದಾಯ ತರಲು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗ ಸೃಜನೆಗೆ ಪೂರಕವಾಗಿ ಪ್ರತ್ಯೇಕ ಸೆಕಂಡರಿ ಕೃಷಿ ನಿರ್ದೇಶನಾಲಯದ ಸ್ಥಾಪನೆ ಮಾಡಿದೆ. ಈ ನಿರ್ದೇಶನಾಲಯದ ಮೂಲಕ ಕೃಷಿ ಉತ್ಪನ್ನಗಳ ತಯಾರಿಕೆಗೆ ಕಾರ್ಯಕ್ರಮ /ಯೋಜನೆಗಳನ್ನು ರೂಪಿಸಲು ಹಾಗೂ ಅನುಷ್ಠಾನ ಮಾಡಲು ರಾಜ್ಯ ಮಟ್ಟದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ


Downloaded From: www.kpscvaani.com



ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಚಾಲನಾ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಸಮಿತಿಯು ಸೆಕಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಕಾರ್ಯತತ್ಪರವಾಗಿರುತ್ತದೆ.

2022-23 ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸೆಕೆಂಡರಿ ಕೃಷಿ ಕಾರ್ಯಕ್ರಮಗಳನ್ನು ಪ್ರಾಯೋಗಿಕವಾಗಿ ಬೆಳಗಾವಿ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ ಹಾಗೂ ಉತ್ತರ ಕನ್ನಡ 5 ಜಿಲ್ಲೆಗಳಲ್ಲಿ ಜಾರಿಯಾಗಿದೆ. ಉಳಿದ ಜಿಲ್ಲೆಗಳಲ್ಲಿ ಅನುಷ್ಠಾನ ಪ್ರಗತಿಯಲ್ಲಿದೆ.

**ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ) ಸ್ಥಾಪನೆ:**

ಬೆಳೆಗಳಿಗೆ ತಗಲುವ ರೋಗ, ಕೀಟ ಬಾಧೆ, ಕಳೆಗಳ ಬಾಧೆ, ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆ ಕುರಿತಂತೆ ರೈತರ ತಾಕುಗಳಲ್ಲಿಯೇ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯಗಳನ್ನು ಒದಗಿಸಲು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ) ಯೋಜನೆಯನ್ನು 2020-21 ರಲ್ಲಿ ಜಾರಿಗೊಳಿಸಲಾಗಿದ್ದು, 2020-21 ರಲ್ಲಿ 60 ವಾಹನಗಳ ಪೈಕಿ ಕೊಪ್ಪಳ ಜಿಲ್ಲೆಯ ರೈತ ಸಂಪರ್ಕ ಕೇಂದ್ರಕ್ಕೆ ಡಿ.ಎಂ.ಎಫ್. ನಿಧಿಯಿಂದ 20 ವಾಹನವನ್ನು ಉಳಿದ ಕೆಲವು ಜಿಲ್ಲೆಗಳಿಗೆ 40 ವಾಹನಗಳನ್ನು ಹಂಚಿಕೆ ಮಾಡಲಾಗಿತ್ತು. 2021-22 ರಲ್ಲಿ 100 ವಾಹನ ಹಾಗೂ 2022-23 ರಲ್ಲಿ 64 ಸೇರಿದಂತೆ ಇಲ್ಲಿವರೆಗೆ ಒಟ್ಟು 224 ಕೃಷಿ ಸಂಜೀವಿನಿ ವಾಹನಗಳನ್ನು ಬಹುಪಾಲು ಜಿಲ್ಲೆಗಳಿಗೆ ನೀಡಲಾಗಿದ್ದು, ಇನ್ನು ಕೆಲವು ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಒದಗಿಸಲು ಕ್ರಮವಹಿಸಲಾಗುತ್ತಿದೆ.

ರೈತರು ಬೆಳೆದ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಒದಗಿಸಿಕೊಟ್ಟಾಗ ಅವರ ಆರ್ಥಿಕ ಸಂಕಷ್ಟವನ್ನು ಕಡಿಮೆ ಮಾಡಿದಂತ್ತಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ಹಲವು ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ರೈತರು ಬೆಳೆಯುವ ಕೃಷಿ ಉತ್ಪನ್ನಗಳನ್ನು ಉತ್ತಮ ರೀತಿಯಲ್ಲಿ ಸಂಸ್ಕರಣೆ ಮಾಡಿದರೆ ಹೆಚ್ಚಿನ ಬೆಲೆಯನ್ನು ಒದಗಿಸಬಹುದೆಂಬ ಉದ್ದೇಶದಿಂದ ಕೃಷಿ ಉತ್ಪನ್ನಗಳ ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಹಾಗಾಗಿ ಕೃಷಿ ಸಂಸ್ಕರಣಾ ಘಟಕಗಳು, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳು ಹಾಗೂ ಟಾರ್ಪಲೀನ್ ವಿತರಣೆಗೆ ಪ್ರಾಮುಖ್ಯತೆ ನೀಡಲಾಗಿದೆ.

ಕಟಾವಿನ ನಂತರ ಕೃಷಿ ಉತ್ಪನ್ನಗಳನ್ನು ಮಳೆ, ಗಾಳಿ ಹಾಗು ಇತರೆ ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಿ ಉತ್ರಮ ಗುಣಮಟ್ಟವನ್ನು ಕಾಯ್ದುಕೊಳ್ಳಲು 05 ಪದರಗಳುಳ್ಳ 250 ಜಿಎಸ್‌ಎಂ, ಕಪ್ಪು ಬಣ್ಣದ 8*6 ಮೀಟರ್ ಅಳತೆಯ ಟಾರ್ಪಲೀನ್‌ಗಳನ್ನು ವಿತರಿಸಲಾಗುತ್ತಿದೆ.

ಇನ್ನು ಉತ್ತಮ ಬೆಳೆ ಬೆಳೆಯಬೇಕಾದರೆ ಮಣ್ಣಿನ ಸತ್ವ ಬಹಳ ಮುಖ್ಯವಾಗುತ್ತದೆ. ಹಾಗಾಗಿ ಸರ್ಕಾರವು ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಮಣ್ಣಿನ ಸತ್ವ ಹೆಚ್ಚಿಸಲು ಕಾರ್ಯಕ್ರಮವನ್ನು ಹಾಕಿಕೊಂಡಿತು. ಮಣ್ಣಿನ ಸತ್ವ ಹೆಚ್ಚಾದರೆ, ಉತ್ತಮ ಬೆಳೆ ಸಿಗುತ್ತದೆ. ಉತ್ತಮ ಬೆಳೆ ಸಿಕ್ಕರೆ, ಉತ್ತಮ ಬೆಲೆ ಸಿಗುತ್ತದೆ. ರೈತರ ಆದಾಯ ಹೆಚ್ಚುತ್ತದೆ ಎಂಬುದು ಸರ್ಕಾರದ ಉದ್ದೇಶ.

ರೈತರ ಆರ್ಥಿಕ ಮಟ್ಟವನ್ನು ಸುಧಾರಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದ್ದರೆ, ಸಾವಯವ ಕೃಷಿಯನ್ನು ಉತ್ತೇಜಿಸುವುದು ಕೂಡ ಇದರ ಉದ್ದೇಶವಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ರೈತರಿಗೆ ಎರೆಹುಳು ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ, ಸಿಟಿ ಕಾಂಪೋಸ್ಟ್, ಖಾದ್ಯವಲ್ಲದ ಎಣ್ಣೆ ರಹಿತ ಹಿಂಡಿ ಗೊಬ್ಬರ, ಇವುಗಳನ್ನು ಸಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ರಿಯಾಯಿತಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ. 75 ರಷ್ಟು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ. ಪ್ರಸುತ್ತ ಸಾಲಿನಲ್ಲಿ ಮಣ್ಣಿನ ಸತ್ವ ಹೆಚ್ಚಿಸುವಿಕೆ ಕಾರ್ಯಕ್ರಮದಡಿ 100.00 ಲಕ್ಷ ರೂಗಳು ಅನುದಾನ ಬಿಡುಗಡೆಯಾಗಿದ್ದು, 69.15 ಲಕ್ಷ ರೂಗಳು ಪ್ರಗತಿಯಾಗಿದೆ.

ರೈತರ ಕಷ್ಟ, ಸಮಸ್ಯೆಗಳನ್ನು ಅರಿಯುವ ಸಲುವಾಗಿ ಈ ಸರ್ಕಾರವು ರೈತರ ಮನೆ ಬಾಗಿಲಿಗೆ ಹೋಗಿ ಅವರ ಕಷ್ಟಗಳನ್ನು ಅರಿತು ಪರಿಹಾರ ಸೂಚಿಸುವ ಸಲುವಾಗಿ 2020 ರ ನವೆಂಬರ್ 14 ರಿಂದ 'ರೈತರೊಂದಿಗೊಂದು ದಿನ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಇದುವರೆವಿಗೆ ಮಂಡ್ಯ, ಕೋಲಾರ, ದಾವಣಗೆರೆ, ಚಾಮರಾಜನಗರ, ಬೀದರ್, ಮೈಸೂರು ಸೇರಿದಂತೆ 14 ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಇದು ಒಟ್ಟಾರೆ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರ ಅಭ್ಯುದಯಕ್ಕಾಗಿ ಹಾಗೂ ಅವರ ಆದಾಯವನ್ನು ಹೆಚ್ಚಿಸುವ ಸಲುವಾಗಿ ಪ್ರಸ್ತುತ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳ ಒಂದು ಕಿರು ಪರಿಚಯವಷ್ಟೆ.


Downloaded From: www.kpscvaani.com



# ಸರ್ವರ ಕ್ಷೇಮಾಭಿವೃದ್ಧಿಗಾಗಿ ಆರೋಗ್ಯ ಸೇವೆ: ಸರ್ಕಾರದ ಸಂಕಲ್ಪ

**ಕೋವಿಡ್**–19 ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿರ್ಮಿಸಿದ್ದಲ್ಲದೆ, ಜಗತ್ತನ್ನೇ ತಟಸ್ಥ ಸ್ಥಿತಿಯಲ್ಲಿರಿಸಿ, ಹೊಸ ಪಾಠ ಕಲಿಸಿತ್ತು. ಎಲ್ಲಾ ಕ್ಷೇತ್ರಗಳೂ ನಿಷ್ಕ್ರಿಯವಾಗಿದ್ದಾಗ ಆರೋಗ್ಯ ವಲಯ ಮಾತ್ರ ಸಕ್ರಿಯವಾಗಿತ್ತು. ವೈದ್ಯರು, ಶುಶ್ರೂಷಕರು ತಮ್ಮ ಜೀವ ಪಣಕ್ಕಿಟ್ಟು, ಹಗಲು ರಾತ್ರಿ ಸೋಂಕಿತರ ರಕ್ಷಣೆಯಲ್ಲಿ ತೊಡಗಿದ್ದರು.

ಸಂಕೀರ್ಣ ಜನಸಂಖ್ಯೆ ಹೊಂದಿರುವ ಭಾರತದಂತಹ ದೇಶದಲ್ಲಿ ಕೋವಿಡ್ ಸವಾಲನ್ನು ನಿಭಾಯಿಸುವುದು ಸುಲಭದ ಮಾತಾಗಿರಲಿಲ್ಲ. ಆ ಸವಾಲಿಗೆ ಪ್ರತಿಯೊಬ್ಬರು ಹೆಗಲು ಕೊಟ್ಟು ಬೆಂಬಲವಾಗಿದ್ದರು. ಕರ್ನಾಟಕವಂತೂ ತನ್ನೆಲ್ಲಾ ಶಕ್ತಿ ಸಾಮರ್ಥ್ಯವನ್ನು ಪಣಕ್ಕಿಟ್ಟು ಕೊರೊನಾವನ್ನು ಮಣಿಸಿ, ಜೀವ ರಕ್ಷಣೆ ಮಾಡಿತ್ತು. ಮೊದಲ ಅಲೆಯಲ್ಲಿ ಚಿಕಿತ್ಸೆ ಏನು ಎಂಬುದೇ ಗೊತ್ತಿಲ್ಲದ ಅಯೋಮಯ ಪರಿಸ್ಥಿತಿಯಿತ್ತು. ಎರಡನೇ ಅಲೆಯಲ್ಲಿ ಆಕ್ಸಿಜನ್ ಕೊರತೆ, ಜೀವ ರಕ್ಷಕ ಔಷಧಿಗಳ ಅಲಭ್ಯತೆ, ಎಲ್ಲವೂ ಸವಾಲಿನ ಸಂದರ್ಭಗಳಲ್ಲೇ ಆಗಿದ್ದವು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಸಂಪುಟದ ಎಲ್ಲಾ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಂಕ್ರಾಮಿಕದ ವಿರುದ್ಧ ಹೋರಾಟಕ್ಕಿಳಿದರು. ವೃತ್ತಿಯಲ್ಲಿ ವೈದ್ಯರಾಗಿದ್ದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಸುಧಾಕರ್ ಅವರ ಅನುಭವ ಸಂಕಷ್ಟ ಕಾಲದಲ್ಲಿ ಬಹಳಷ್ಟು ಉಪಯೋಗಕ್ಕೆ ಬಂತು.

ದುರ್ಗಮ ಪರಿಸ್ಥಿತಿಗಳನ್ನು ಸಮರ್ಥವಾಗಿ ನಿಭಾಯಿಸಿ, ಸೋಂಕಿನ ವಿರುದ್ಧ ಜಯ ಸಾಧಿಸಲಾಯಿತು. ಕೋವಿಡ್ ಬಾಧಿತ 2.87 ಲಕ್ಷ ಜನರಿಗೆ ಸಾವಿರಾರು ರೂಪಾಯಿ ವೆಚ್ಚದಲ್ಲಿ ಉಚಿತ ಚಿಕಿತ್ಸೆ ಕೊಡಲಾಯಿತು. ಬದುಕುಳಿಯುವ ಭರವಸೆಯೂ ಇಲ್ಲದ ಕಾಲದಲ್ಲಿ ಸರ್ಕಾರ ಕೈ ಹಿಡಿಯದೇ ಹೋಗಿದ್ದರೆ ಎಂಬ ಪರಿಸ್ಥಿತಿ ಊಹಿಸಿಕೊಳ್ಳುವುದು ಕಷ್ಟ. ಕೋವಿಡ್ ವೇಳೆ ಸರ್ಕಾರ ನೀಡಿದ ಸಹಾಯ ಹಸ್ತವನ್ನು ಸಂತ್ರಸ್ಥರು ಜೀವನದುದ್ದಕ್ಕೂ ನೆನಪಿನಲ್ಲಿಟ್ಟುಕೊಳ್ಳುವಂತಿದೆ.

ಕೋವಿಡ್ ಪರೀಕ್ಷೆ, ಪತ್ತೆ, ಚಿಕಿತ್ಸೆಯ ಜೊತೆಗೆ ಸೋಂಕು ನಿಯಂತ್ರಣಕ್ಕೆ

**ಜನರ ಆರೋಗ್ಯ ಸ್ವಾಸ್ಥ್ಯವಾಗಿರುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಅತ್ಯುತ್ತಮ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ.**

ಉಮೇಶ್ ಕೊಲಿಗೆರೆ


Downloaded From: www.kpscvaani.com



ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೋವಿಡ್–19 ವ್ಯಾಕ್ಸಿನ್ ಅನ್ನು ಪ್ರದರ್ಶಿಸುತ್ತಿರುವುದು.

ರಾಮಬಾಣ ಎಂದು ಘೋಷಿಸಲ್ಪಟ್ಟ ಲಸಿಕಾ ಅಭಿಯಾನವನ್ನು ಯಶಸ್ವಿಯಾಗಿ ನಡೆಸಲಾಯಿತು. ಕೆಲವರು ಆರಂಭದಲ್ಲಿ ಲಸಿಕೆ ಪಡೆಯಲು ಹಿಂದೇಟು ಹಾಕಿದರು. ಎರಡನೇ ಅಲೆಯಲ್ಲಿ ಸಾವು ನೋವುಗಳ ಸಂಖ್ಯೆ ಹೆಚ್ಚಾದಂತೆ ರೋಗನಿರೋಧಕ ಶಕ್ತಿಗೆ ಲಸಿಕೆ ಅನಿವಾರ್ಯ ಎಂದಾದಾಗ, ಲಸಿಕೆ ಪಡೆಯಲು ಸಾಲುಗಟ್ಟಿ ನಿಲ್ಲಲಾರಂಭಿಸಿದರು. ಆ ಸಮಯಕ್ಕೆ ಕೇಂದ್ರದ ಮೇಲೆ ಒತ್ತಡ ತಂದು ಅಗತ್ಯದಷ್ಟು ಲಸಿಕೆ ಪಡೆದು, ಸಾಮಾಜಿಕ ಅಂತರ, ಕಡ್ಡಾಯ ಮಾಸ್ಕ್ ಧಾರಣೆಯಂತಹ ಕಡ್ಡಾಯ ನಿಯಗಳ ಪಾಲನೆಯೊಂದಿಗೆ ಲಸಿಕೆ ಕೊಡಿಸಿದ್ದು ಸಾಧನೆಯೇ ಸರಿ. ಯಶಸ್ವಿ ಲಸಿಕಾ ಅಭಿಯಾನದಿಂದ ದೇಶದಲ್ಲಿ ಮೂರನೇ ಅಲೆ ಹೆಚ್ಚು ಹಾನಿ ಮಾಡಲಿಲ್ಲ. ರಾಜ್ಯದಲ್ಲಿ ಒಟ್ಟು 12 ಕೋಟಿ ಡೋಸ್ ಲಸಿಕೆಗಳನ್ನು ಹಾಕಲಾಯಿತು.

ಕೋವಿಡ್ ಮೊದಲ ಮತ್ತು ಎರಡನೇ ಅಲೆಯಲ್ಲಿ ಕಲಿತ ಪಾಠಗಳಿಂದ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರ ವೈದ್ಯಕೀಯ ಮೂಲಸೌಕರ್ಯಗಳ ಸುಧಾರಣೆಗೆ ಹೆಚ್ಚಿನ ಒತ್ತು ನೀಡಲಾರಂಭಿಸಿತು. 2022–23ನೇ ಸಾಲಿನಲ್ಲಿ ಮಂಡಿಸಲಾದ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಶೇ.17.41ರಷ್ಟು ಹೆಚ್ಚುವರಿ ಅನುದಾನ ಒದಗಿಸಲಾಯಿತು. 2020–21ರಲ್ಲಿ 10,122 ಕೋಟಿ, 2021–22ರಲ್ಲಿ 11,908 ಕೋಟಿ, 2022–23ನೇ ಸಾಲಿಗೆ 13,982 ಕೋಟಿ ರೂಪಾಯಿ ಅನುದಾನ ನೀಡಲಾಯಿತು. ಪ್ರಸಕ್ತ ಹಣಕಾಸು ವರ್ಷಕ್ಕೆ ಹಿಂದಿನ ಸಾಲಿಗಿಂತ 2,074 ಕೋಟಿ ರೂಪಾಯಿ ಹೆಚ್ಚುವರಿ ಅನುದಾನ ದೊರೆತಿದೆ. ಕೋವಿಡೋತ್ತರದಲ್ಲಿ ಆರೋಗ್ಯ ಮೂಲಸೌಕರ್ಯಗಳಲ್ಲಿ ಹೆಚ್ಚು ಸುಧಾರಣೆಯಾಗಿದೆ. ಕೋವಿಡ್ ವೇಳೆ ರಾಜ್ಯದ ಚಿಕಿತ್ಸಾ ಸಾಮರ್ಥ್ಯ ಒರೆಗಚ್ಚಲ್ಪಟ್ಟಿತ್ತು. ಸವಾಲನ್ನೇ ಅವಕಾಶವನ್ನಾಗಿ ಪರಿವರ್ತಿಸಿಕೊಂಡರೆ ಯಶಸ್ಸಿನ ಮತ್ತೊಂದು ಮಗ್ಗಲು ತಲುಪಲು ಸಾಧ್ಯ ಎಂಬುದಕ್ಕೆ ಕರ್ನಾಟಕ ಸ್ಪಷ್ಟ ಉದಾಹರಣೆಯಾಗಿದೆ. 15ನೇ ಹಣಕಾಸು ಆಯೋಗದಡಿ ಐದು ವರ್ಷಗಳ ಅವಧಿಗೆ 2929 ಕೋಟಿ ರೂಪಾಯಿ ಮತ್ತು ಆಯುಷ್ಮಾನ್ ಭಾರತ್ ಯೋಜನೆಯ ನೆರವು ಪಡೆದು ವೈದ್ಯಕೀಯ ಕ್ಷೇತ್ರವನ್ನು ಸುಧಾರಿತ ಮಟ್ಟಕ್ಕೆ ಅಭಿವೃದ್ಧಿ ಪಡಿಸಲಾಗಿದೆ. ಮುಂದಿನ ಕೆಲವೇ ವರ್ಷಗಳಲ್ಲಿ ಖಾಸಗಿ ವಲಯಕ್ಕೆ ಸರ್ಕಾರಿ ಆಸ್ಪತ್ರೆಗಳು ಪೈಪೋಟಿ ನೀಡಲಿವೆ.

ಉತ್ತಮ ಸೌಲಭ್ಯಗಳು ಸರ್ಕಾರಿ ಚಿಕಿತ್ಸಾಲಯಗಳಲ್ಲೇ ದೊರೆಯುವುದರಿಂದ ಜನ ಸಾಮಾನ್ಯರ ಮೇಲಾಗುತ್ತಿದ್ದ ಹೊರೆ ಗಣನೀಯವಾಗಿ ತಗ್ಗುವ ನಿರೀಕ್ಷೆ ಇದೆ. ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆಯ ವೇಳೆಯಲ್ಲಿ ಸೋಂಕಿತರ ಸಂಖ್ಯೆ ಐದು ಸಾವಿರ ದಾಟಿ, ಸ್ವಲ್ಪ ಮಟ್ಟಿಗೆ ಚಿಕಿತ್ಸೆಗೆ ಐಸಿಯು ಹಾಸಿಗೆಗಳ ಕೊರತೆಯನ್ನು ಎದುರಿಸಬೇಕಾಯಿತು. ಆದರೆ ಸರ್ಕಾರವು ಹಂತ ಹಂತವಾಗಿ ಪರಿಸ್ಥಿತಿಯನ್ನು ಸುಧಾರಿಸಿತು. 2019ಕ್ಕೂ ಮುನ್ನಾ ರಾಜ್ಯದಲ್ಲಿ 715 ಐಸಿಯು, 4 ಸಾವಿರ ಆಕ್ಸಿಜನ್, 2180 ಆಕ್ಸಿಜನ್ ಸಿಲಿಂಡರ್‌ಗಳು, 41,378 ಹಾಸಿಗೆ ಸೌಲಭ್ಯವಿತ್ತು. ಐಸಿಯು ಬೆಡ್‌ಗಳ



ಕಾಯಕಲ್ಪಗೊಂಡಿರುವ ಬಸವನಬಾಗೇವಾಡಿ ತಾಲ್ಲೂಕಿನ ಆಸ್ಪತ್ರೆ.



Downloaded From: www.kpscvaani.com

ಸಂಖ್ಯೆಯನ್ನು ಮೊದಲ ಅಲೆಯಲ್ಲಿ 858, ಎರಡನೇಯ ಅಲೆಯಲ್ಲಿ 1961ಕ್ಕೆ ಪ್ರಸ್ತುತ 4 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಆಕ್ಸಿಜನ್ ಬೆಡ್‌ಗಳ ಸಂಖ್ಯೆಯನ್ನು ಮೊದಲ ಅಲೆಯಲ್ಲಿ 5187ಕ್ಕೆ, ಎರಡನೇ ಅಲೆಯಲ್ಲಿ 25 ಸಾವಿರಕ್ಕೆ, ನಂತರ 28 ಸಾವಿರಕ್ಕೆ ಹೆಚ್ಚಿಸಲಾಗಿದೆ. ಮೊದಲು ಆಕ್ಸಿಜನ್ ಎಂದರೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಮಾತ್ರ ಸಿಗುವ ಸೌಲಭ್ಯ ಎಂಬ ಭ್ರಮೆ ಇತ್ತು. 2180 ರಷ್ಟಿದ್ದ ಆಕ್ಸಿಜನ್ ಸಿಲಿಂಡರ್‌ಗಳ ಸಂಖ್ಯೆಯನ್ನು 15 ಸಾವಿರಕ್ಕೆ, ಸಾಂದ್ರಕಗಳ ಸಂಖ್ಯೆಯನ್ನು 8 ಸಾವಿರಕ್ಕೆ ಹೆಚ್ಚಿಸಲಾಯಿತು.

ಜಿಲ್ಲಾಸ್ಪತ್ರೆಗಳಲ್ಲಿ ಐಸಿಯು ಬೆಡ್‌ಗಳ ಸಂಖ್ಯೆಯನ್ನು 25 ರಿಂದ 50 ಕ್ಕೆ ಹೆಚ್ಚಿಸಿ, 13 ಕೆಎಲ್ ಸಾಮರ್ಥ್ಯದ ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಸಂಗ್ರಹ ಟ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಆರು ಐಸಿಯು ಬೆಡ್‌ಗಳನ್ನು 25ಕ್ಕೆ ಹೆಚ್ಚಿಸಿದ್ದು, ಆಕ್ಸಿಜನ್ ಸಾಮರ್ಥ್ಯವನ್ನು 6 ಕೆಎಲ್ ವೃದ್ಧಿಸಲಾಗಿದೆ. 262 ಕ್ಕೂ ಹೆಚ್ಚು ಕಡೆ ಮೆಡಿಕಲ್ ಲಿಕ್ವಿಡ್ ಆಕ್ಸಿಜನ್ ಉತ್ಪಾದನಾ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಮೂರನೇ ಅಲೆ ಮಕ್ಕಳ ಮೇಲೆ ಪರಿಣಾಮ ಬೀರಲಿದೆ ಎಂಬ ಮುನ್ಸೂಚನೆಯಿಂದ ಮಕ್ಕಳ ಚಿಕಿತ್ಸಾ ವಾರ್ಡ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು.

ಆಸ್ಪತ್ರೆಗಳ ಒಟ್ಟು ಹಾಸಿಗೆ ಸಾಮರ್ಥ್ಯ 41 ಸಾವಿರದಿಂದ 50 ಸಾವಿರಕ್ಕೆ ಹೆಚ್ಚಾಗಿದೆ. ಆರೋಗ್ಯ ಕವಚ ಯೋಜನೆಯಡಿ ಕೆಲಸ ನಿರ್ವಹಿಸುವ 710 ಆ್ಯಂಬುಲೆನ್ಸ್‌ಗಳ ಸೌಲಭ್ಯ ಸುಧಾರಣೆಯಾಗಿದೆ. ರಾಜ್ಯದಲ್ಲಿ ಪ್ರಸ್ತುತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವೈದ್ಯಕೀಯ ಕಾಲೇಜು ಆಸ್ಪತ್ರೆಗಳು, ಜಿಲ್ಲಾಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಜೊತೆಗೆ 8619 ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು, 2751 ಉಪ ಕೇಂದ್ರಗಳನ್ನು ಆರಂಭಿಸಲಾಗಿದೆ. ಪ್ರಯೋಗಾಲಯಗಳ ಸಂಖ್ಯೆ ಮತ್ತು ಸಾಮರ್ಥ್ಯವೂ ಗಣನೀಯವಾಗಿ ಏರಿಕೆಯಾಗಿದ್ದು ದಿನವೊಂದಕ್ಕೆ ಎಂಟು ಲಕ್ಷ ಪರೀಕ್ಷಾ ಸಾಮರ್ಥ್ಯ ಅಭಿವೃದ್ಧಿ ಪಡಿಸಲಾಗಿದೆ.

### ವೈದ್ಯಕೀಯ ಮಾನವ ಸಂಪನ್ಮೂಲಾಭಿವೃದ್ಧಿಗೆ ಒತ್ತು:

ದೇಶದಲ್ಲಿ ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಆರಂಭಿಸುವ ಕನಸು ಪ್ರಧಾನಿಯವರದಾಗಿದೆ. ಅದರ ಭಾಗವಾಗಿ ಚಿಕ್ಕಬಳ್ಳಾಪುರದಲ್ಲಿ 100 ಸೀಟುಗಳ ಮೆಡಿಕಲ್ ಕಾಲೇಜು ಆರಂಭಗೊಂಡಿದೆ. ಚಿತ್ರದುರ್ಗ, ಚಿಕ್ಕಮಗಳೂರು, ಹಾವೇರಿ, ಯಾದಗಿರಿಯಲ್ಲಿ ತಲಾ 150 ಸೀಟುಗಳ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಅನುಮತಿಸಿದೆ. ತುಮಕೂರು, ವಿಜಯನಗರ ಮಡಿಕಲ್ ಕಾಲೇಜು ಸೇರಿ ಹಲವು ಹೊಸ ಮೆಡಿಕಲ್ ಕಾಲೇಜುಗಳಿಗೆ ಅನುಮೋದನೆ ಸಿಕ್ಕಿರುವುದರಿಂದ ಹೆಚ್ಚುವರಿಯಾಗಿ 897 ಮೆಡಿಕಲ್ ಸೀಟುಗಳು ಲಭ್ಯವಾಗಲಿವೆ. ಈವರೆಗಿನ ಸ್ಥಾಪಿತ ಶಿಕ್ಷಣ ಸಂಸ್ಥೆಗಳ ಸಾಮರ್ಥ್ಯದ ಪ್ರಕಾರ ರಾಜ್ಯದಲ್ಲಿ ಎಂಬಿಬಿಎಸ್ ಕೋರ್ಸ್‌ಗೆ 8,232, ದಂತ ವೈದ್ಯಕೀಯ ಕೋರ್ಸ್‌ನಿಂದ 2,810 ಸೇರಿ 11,042 ಸೀಟುಗಳು ಲಭ್ಯ ಇವೆ. ಅವುಗಳಲ್ಲಿ ಅರ್ಧದಷ್ಟು ಸರ್ಕಾರಿ ಕೋಟಾದ ಸೀಟುಗಳು ಎಂಬುದು ಗಮನಾರ್ಹ.

ರಾಜ್ಯ ಸರ್ಕಾರ 1763 ವೈದ್ಯಾಧಿಕಾರಿಗಳನ್ನು ನೇರ ನೇಮಕಾತಿ ಮಾಡಿಕೊಂಡಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಒಂದಷ್ಟು ವೈದ್ಯರನ್ನು ನೇಮಿಸಲಾಗಿದೆ. 2108 ಖಾಲಿ ಹುದ್ದೆಗಳ ಪೈಕಿ 2053 ವೈದ್ಯರನ್ನು ಭರ್ತಿ ಮಾಡಲಾಗಿದೆ. 57 ಜನರಲ್ ಸರ್ಜನ್, 145 ಪ್ರಸೂತಿ ತಜ್ಞರು, 3 ನೆಫ್ರೋಯುರಾಲಜಿ ಸೇರಿ 715 ತಜ್ಞ ವೈದ್ಯರನ್ನು ನೇಮಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯ ಸೇವೆ ಪದ್ಧತಿ ಅನುಸಾರ ಗುತ್ತಿಗೆ ಆಧರದ ಮೇಲೆ ಎರಡು ಸಾವಿರ, ಗ್ರಾಮೀಣ ಭಾಗದಲ್ಲಿ ಕಡ್ಡಾಯ ಸೇವೆ ನಿಯಮಾನುಸಾರ ಸಾವಿರಕ್ಕೂ ಹೆಚ್ಚು ವೈದ್ಯರನ್ನು ನೇಮಿಸಿಕೊಳ್ಳಲಾಗಿತ್ತು. ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳ ಐಸಿಯುಗೆ 666 ವೈದ್ಯರನ್ನು ನಿಯೋಜನೆಗೊಂಡಿದ್ದರು. ಈ ಎಲ್ಲಾ ಉಪಕ್ರಮಗಳಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ವೈದ್ಯರು ಲಭ್ಯವಾಗಿದ್ದರು. ವೈದ್ಯರ ಕೊರತೆ ತಗ್ಗಿತ್ತು. ಈಗ ಪರಿಸ್ಥಿತಿ ಸುಧಾರಿಸಿದ್ದರಿಂದ ಗ್ರಾಮೀಣ ಸೇವೆ ಕಡ್ಡಾಯಗೊಳಿಸುವ ಷರತ್ತನ್ನು ಸಡಿಸಲು ನಿರ್ಧರಿಸಲಾಗಿದೆ. ಇನ್ನು ಮುಂದೆ ಸರ್ಕಾರ ಖೋಟಾದಡಿ ಸೀಟು ಪಡೆದವರಿಗೆ ಮಾತ್ರ ಗ್ರಾಮೀಣ ಸೇವೆ ಕಡ್ಡಾಯ ಎಂಬ ನಿಯಮ ಬದಲಾವಣೆ ಮಾಡಲು ನಿರ್ಧರಿಸಲಾಗಿದೆ.

### ರೋಬೋಟಿಕ್ ತಂತ್ರಜ್ಞಾನ ಪರಿಚಯ:

ಖಾಸಗಿ ಆಸ್ಪತ್ರೆಗಳಲ್ಲಿ ನಾವೀನ್ಯ ಅವಿಷ್ಕಾರಗಳು ಬಳಕೆಯಾಗುತ್ತಲೇ ಇರುತ್ತವೆ. ಇದರಿಂದ ಹೆಚ್ಚು ಜನರು ಖಾಸಗಿ ಚಿಕಿತ್ಸಾ ಕೇಂದ್ರಗಳತ್ತ ಮುಖ ಮಾಡುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲೂ ಆಧುನಿಕ ತಂತ್ರಜ್ಞಾನಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನವನ್ನು ರಾಜ್ಯ ಸರ್ಕಾರ ನಡೆಸಿದೆ. ಇತ್ತೀಚಿನ ದಿನಗಳಲ್ಲಿ ರೋಬೋಟಿಕ್ ಡಾಕ್ಟರ್ ಸೌಲಭ್ಯ ಹೆಚ್ಚು ಜನಪ್ರಿಯವಾಗಿದೆ. ತುರ್ತು ನಿಗಾ ಘಟಕದಲ್ಲಿ ರೋಬೋಟಿಕ್ ತಂತ್ರಜ್ಞಾನವನ್ನು ಬಳಸಿ, ಆರೈಕೆ ಮಾಡಬಹುದಾಗಿದೆ. ಪ್ರತಿಯೊಂದು ರೋಗಿಯ ಮೇಲೂ ಎಚ್ಚರಿಕೆಯ ಕಣ್ಣಿಟ್ಟಿರುವ ರೋಬೋಟಿಕ್ ವ್ಯವಸ್ಥೆ ಏಕಕಾಲಕ್ಕೆ ಎಲ್ಲಾ ರೋಗಿಗಳ



ಸಾರ್ವಜನಿಕ ಆರೋಗ್ಯ ಮೇಳದಲ್ಲಿ ಸಚಿವರು ಪಾಲ್ಗೊಂಡಿರುವುದು.



Downloaded From: www.kpscvaani.com




ಮುಖ್ಯಮಂತ್ರಿಗಳಿಂದ ರೋಬೋಟಿಕ್ ಯಂತ್ರದ ವೀಕ್ಷಣೆ

ಮಾಹಿತಿಯನ್ನು ಕೊಠಡಿಯಲ್ಲಿ ಕುಳಿತಿರುವ ವೈದ್ಯರಿಗೆ ತಲುಪಿಸುತ್ತದೆ.

ತಜ್ಞರು ದೂರದಲ್ಲಿದ್ದುಕೊಂಡೇ ಚಿಕಿತ್ಸೆ ನೀಡಬಹುದಾಗಿದೆ. ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ಈ ತಂತ್ರಜ್ಞಾನ ವರದಾನವೆಂದೇ ಹೇಳಬಹುದಾಗಿದೆ. ನೇರ ಸಂಪರ್ಕವಿಲ್ಲದೆ ಹಿರಿಯ ವೈದ್ಯರು ಏಕಕಾಲಕ್ಕೆ ಐಸಿಯು ಘಟಕದ ಎಲ್ಲಾ ರೋಗಿಗಳಿಗೂ ಚಿಕಿತ್ಸೆ ನೀಡಲು ಸಾಧ್ಯವಾಗಲಿದೆ. ಈ ತಂತ್ರಜ್ಞಾನವನ್ನು ಬೆಂಗಳೂರಿನ ರಾಜೀವ್‌ಗಾಂಧಿ ಆಸ್ಪತ್ರೆಯಲ್ಲಿ 28 ಬೆಡ್‌ಗಳ ವಾರ್ಡ್‌ಗೆ ಪರಿಚಯಿಸಿದ್ದು ವಿಶೇಷವಾಗಿದೆ. ಒಂದು ವೇಳೆ ಪ್ರಯೋಗಾರ್ಥ ಪರೀಕ್ಷೆ ಯಶಸ್ವಿಯಾಗಿ ಎಲ್ಲಾ ಕಡೆ ಜಾರಿಯಾಗಿದ್ದೇ ಆದರೆ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಲಿವೆ.

ಕೇಂದ್ರ ಸರ್ಕಾರದ ಇ-ಸಂಜೀವಿನಿ ಟೆಲಿ ಕನ್ಸಲ್ಟೆಷನ್ ಯೋಜನೆಯ ಸೌಲಭ್ಯ ಪಡೆದುಕೊಂಡಿರುವುದರಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಸುಮಾರು 80 ಲಕ್ಷಕ್ಕೂ ಹೆಚ್ಚು ಟೆಲಿ ಸರ್ವಿಸ್‌ಗಳನ್ನು ಒದಗಿಸಲಾಗಿದೆ. ಇದರಿಂದ ತಜ್ಞ ವೈದ್ಯಕೀಯ ಸೇವೆಗಳು ಮತ್ತಷ್ಟು ಸುಲಭವಾಗಿ ಜನಸಾಮಾನ್ಯರಿಗೆ ಧಕ್ಕಲಿವೆ. ವೈದ್ಯರ ಕೊರತೆ ಕಾಡದಂತಹ ವಾತಾವರಣ ಆಧುನಿಕ ತಂತ್ರಜ್ಞಾನ ಬಳಕೆಯಿಂದ ಸುಲಭ ಸಾಧ್ಯವಾಗಲಿದೆ.

**ಜನರ ಭಾವನೆಗೆ ತಕ್ಕ ಸ್ಪಂದನೆ:**

ಮದುವೆಯಾದ ಮೇಲೆ ಮಗುವೊಂದು ಬೇಕು, ಜೀವನದಲ್ಲಿ ಮನೆಯೊಂದನ್ನು ಕಟ್ಟಬೇಕು ಎಂಬುದು ಪ್ರತಿಯೊಬ್ಬರ ಕನಸು. ಬದಲಾದ ಜೀವನಶೈಲಿಯಲ್ಲಿ ಫಲಿತತೆ ಪ್ರಮಾಣ ತಗ್ಗುತ್ತಿದೆ. ಮಕ್ಕಳಾಗುವ ಸಾಧ್ಯತೆಗಳು ಕ್ಷೀಣಿಸುತ್ತಿವೆ. ಈ ಭಾವಾತ್ಮಕ ವಿಷಯವನ್ನು ಬಳಸಿಕೊಂಡು ಖಾಸಗಿ ಆಸ್ಪತ್ರೆಗಳು ಕೃತಕ ಗರ್ಭಧಾರಣೆ ಹೆಸರಿನಲ್ಲಿ ದುಬಾರಿ ಹಣ ಶುಲ್ಕ ವಸೂಲಿ ಮಾಡುತ್ತಿವೆ. ದೇಶದಲ್ಲೇ ಮೊದಲ ಬಾರಿಗೆ ರಾಜ್ಯ ಸರ್ಕಾರ ಸಂತಾನೋತ್ಪತಿ ಕೇಂದ್ರ (ಐವಿಎಫ್)ಗಳನ್ನು ಸ್ಥಾಪಿಸುವ ನಿರ್ಧಾರ ಕೈಗೊಂಡಿದೆ. ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ ಸೇರಿ ನಾಲ್ಕು ಕಂದಾಯ ವಿಭಾಗಗಳಲ್ಲಿ ನಾಲ್ಕು ಫರ್ಟಿಲಿಟಿ ಕೇಂದ್ರಗಳು ಅಸ್ತಿತ್ವಕ್ಕೆ ಬರಲಿವೆ. ಇಲ್ಲಿ ರಿಯಾಯಿತಿ ದರದಲ್ಲಿ ಅಥವಾ ಉಚಿತವಾಗಿ ಸಂತಾನೋತ್ಪತಿ ನೆರವು ಒದಗಿಸಲಾಗುತ್ತದೆ.

ಮಾನಸಿಕ ಒತ್ತಡ, ಅಸ್ವಸ್ಥತೆ ಈ ಕಾಲಘಟದಲ್ಲಿ ಸಾಮಾನ್ಯವಾಗಿರುವ ಅನಾರೋಗ್ಯ ಸಮಸ್ಯೆ. ನಿಮ್ಹಾನ್ಸ್ ಸಹಯೋಗದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರಿನಲ್ಲಿ ಮಾನಸಿಕ ಆರೋಗ್ಯ ಕಾರ್ಯಕ್ರಮ ಇ-ಮನಸ್ಸು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಬೀದರ್, ಚಾಮರಾಜನಗರ, ಹಾವೇರಿ ಮತ್ತು ಚಿಕ್ಕಮಗಳೂರಿನಲ್ಲಿ ಸಂಚಾರಿ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುತ್ತದೆ. ಕ್ಯಾನ್ಸರ್ ಚಿಕಿತ್ಸೆಗೆ ತುಮಕೂರು, ಕಲಬುರಗಿ, ಶಿವಮೊಗ್ಗ, ಮೈಸೂರು, ಬೆಳಗಾವಿಯಲ್ಲಿ ಪ್ರಾದೇಶಿಕ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕ್ಯಾನ್ಸರ್ ರೋಗಕ್ಕೆ ಒಳಗಾದ ಬಡ ಕುಟುಂಬದ ಮಕ್ಕಳಿಗೆ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ದುಬಾರಿ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ಉಚಿತವಾಗಿ ನೀಡುವ ಸೌಲಭ್ಯವನ್ನು ಪ್ರಾರಂಭಿಸಲಾಗಿದೆ.



ಕೋವಿಡ್-19 ನಿರ್ವಹಣೆಯಲ್ಲಿ ತೊಡಗಿದ್ದ ಆರೋಗ್ಯ ಕಾರ್ಯಕರ್ತರ ಯೋಗಕ್ಷೇಮವನ್ನು ಮುಖ್ಯಮಂತ್ರಿಗಳು ವಿಚಾರಿಸುತ್ತಿರುವುದು.


Downloaded From: www.kpscvaani.com




ಉಡುಪಿ ಜಿಲ್ಲಾ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ಸಂದರ್ಭ.

2025ಕ್ಕೆ ಕರ್ನಾಟಕವನ್ನು ಕ್ಷಯ ಮುಕ್ತಗೊಳಿಸುವ ಗುರಿಯೊಂದಿಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ಚಿಕ್ಕಬಳ್ಳಾಪುರ, ಬೆಳಗಾವಿ ಜಿಲ್ಲೆಗಳಲ್ಲಿ ರೋಗ ಪತ್ತೆಗೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನ ಬಳಸಲಾಗುತ್ತಿದೆ. ಬಜೆಟ್‌ನಲ್ಲಿ ಘೋಷಿಸಿದಂತೆ ಮುಂದಿನ ತಿಂಗಳು 60 ವರ್ಷ ಮೇಲ್ಪಟ್ಟವರಿಗೆ ಬಿಪಿಎಲ್ ಕುಟುಂಬದವರಿಗೆ ಉಚಿತ ನೇತ್ರ ಪರೀಕ್ಷೆ, ಶಸ್ತ್ರಚಿಕಿತ್ಸೆ ಮತ್ತು ಕನ್ನಡಕ ನೀಡುವ ಕಾರ್ಯಕ್ರಮ ಜಾರಿಯಾಗಲಿದೆ.

**ಬಡವರ ಪಾಲಿನ ಆಪ್ತ ರಕ್ಷಕ ಆಯುಷ್ಮಾನ್ ಭಾರತ್:**

ರಾಷ್ಟ್ರೀಯ ಮಟ್ಟದಲ್ಲಿ ಆಯುಷ್ಮಾನ್ ಭಾರತ್ ಮೈಲಿಗಲ್ಲಿನ ಯೋಜನೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸ್ವ–ಅನುಭವ ಹಾಗೂ ಕಾಳಜಿ ಆಧರಿಸಿ ವಿನ್ಯಾಸಗೊಂಡ ಈ ಯೋಜನೆಯಡಿ ಬಡ ಕುಟುಂಬಗಳ ಜನರಿಗೆ ಐದು ಲಕ್ಷ ರೂಪಾಯಿವರೆಗೂ ಚಿಕಿತ್ಸೆ ಕೊಡಿಸಲಾಗುತ್ತದೆ. ದೇಶದದಲ್ಲಿ 50 ಕೋಟಿ ಜನರಿಗೆ ಕಾರ್ಡ್ ವಿತರಿಸುವ ಗುರಿಯಿದ್ದು, ಈವರೆಗೂ 20 ಕೋಟಿಗೂ ಅಧಿಕ ಕಾರ್ಡ್‌ಗಳ ವಿತರಣೆಯಾಗಿದೆ. 4.12 ಕೋಟಿಗೂ ಅಧಿಕ ಮಂದಿಗೆ 48 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. 2018ರ ಸೆಪ್ಟಂಬರ್ 23ರಂದು ಆರಂಭಗೊಂಡ ಈ ಯೋಜನೆಯಡಿ ದೇಶಾದ್ಯಂತ 27 ಸಾವಿರ ಆಸ್ಪತ್ರೆಗಳು ಯೋಜನೆಗೆ ಜೋಡಣೆಗೊಂಡಿವೆ.

ಒಂದು ತಿಂಗಳಿನಲ್ಲೇ ರಾಜ್ಯದಲ್ಲಿ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆ ಮಾದರಿ ಮಾರ್ಪಡುಗಳೊಂದಿಗೆ ಜಾರಿಗೆ ಬಂದಿದೆ. ಜನಸಾಮಾನ್ಯರಿಗೆ ಉತ್ತಮ ಸೇವೆ ಒದಗಿಸುವಲ್ಲಿ ಮಂಚೂಣಿಯಲ್ಲಿರುವ ರಾಜ್ಯವು 5.09 ಕೋಟಿ ಜನರಿಗೆ ಕಾರ್ಡ್ ವಿತರಿಸುವ ಗುರಿಯನ್ನು ಹೊಂದಿದ್ದು, ಈಗಾಗಲೇ 1.20 ಕೋಟಿ ಕಾರ್ಡ್‌ಗಳು ಮುದ್ರಣಗೊಂಡಿವೆ. ಈವರೆಗೂ ಕಾರ್ಡ್ ದೊರೆಯದಿರುವ ಪರಿಶಿಷ್ಟ ಸಮುದಾಯದವರು ಆಧಾರ್ ಅಥವಾ ಪಡಿತರ ಚೀಟಿ ಹಾಜರು ಪಡಿಸಿ ಚಿಕಿತ್ಸೆ ಪಡೆಯಬಹುದಾಗಿದೆ.

ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಅಹಿತಕರ ಘಟನೆಯ ಬಳಿಕ ತುರ್ತು ಚಿಕಿತ್ಸೆಗೆ ಯಾವುದೇ ದಾಖಲೆಗಳನ್ನು ಬಯಸದೆ ಮೊದಲು ರೋಗಿಯ ಯೋಗಕ್ಷೇಮಕ್ಕೆ ಆದ್ಯತೆ ನೀಡಬೇಕು ಎಂದು ಸರ್ಕಾರ ಸುತ್ತೋಲೆ ಹೊರಡಿಸಿದೆ.

ಹೃದಯ, ಹೃದಯನಾಳ, ಶ್ವಾಸಕೋಶ, ನರಸಂಬಂಧಿತ ಸಮಸ್ಯೆಗಳು, ಸುಟ್ಟಗಾಯ ಚಿಕಿತ್ಸೆ ಸೇರಿ 23 ವಿಶೇಷಗಳನ್ನು ಒಳಗೊಂಡು 1650 ಬಗೆಯ ಆರೋಗ್ಯ ಸಮಸ್ಯೆಗಳಿಗೆ 3545ಕ್ಕೂ ಹೆಚ್ಚು ನೋಂದಾಯಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ಈವರೆಗೂ 5426 ಕೋಟಿ ರೂಪಾಯಿ ವೆಚ್ಚದಲ್ಲಿ 42 ಲಕ್ಷ ಮಂದಿಗೆ ಚಿಕಿತ್ಸೆ ಕೊಡಿಸಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಎಪಿಎಲ್ ಕುಟುಂಬಗಳಿಗೂ ಒಂದುವರೆ ಲಕ್ಷ ರೂಪಾಯಿಗಳವರೆಗೂ ಚಿಕಿತ್ಸಾ ವೆಚ್ಚ ಭರಿಸಲು ಅವಕಾಶ ಕಲ್ಪಿಸಲಾಗಿದೆ.

ಅಧ್ಯಯನವೊಂದರ ಪ್ರಕಾರ ಮೂರನೇ ಒಂದರಷ್ಟು ಜನ ಆರೋಗ್ಯ ಸಮಸ್ಯೆಗಳಿಗೆ ಬಹುಪಾಲು ದುಡಿಮೆಯನ್ನು ಖರ್ಚು ಮಾಡುತ್ತಾರೆ. ಬಡತನ ಕೆಳಗಿನ ಹಾಗೂ ಮಧ್ಯಮ ವರ್ಗಕ್ಕೆ ಚಿಕಿತ್ಸಾ ವೆಚ್ಚ ಭರಿಸುವುದು ತ್ರಾಸದಾಯಕವೇ ಸರಿ. ಅದಕ್ಕಾಗಿ ಎಷ್ಟೋ ಬಾರಿ ಸರಿಯಾದ ಚಿಕಿತ್ಸೆ ಪಡೆಯಲಾಗದೆ ಪ್ರಾಣ ಹಾನಿಯಂತಹ ದುರಂತಗಳು ನಡೆದಿದೆ. ಅದಕ್ಕೆಲ್ಲಾ ಪರಿಹಾರ ನೀಡುವ ಆಯುಷ್ಮಾನ್ ಭಾರತ್ ಬಡವರ ಪಾಲಿನ ಆಪತ್ಬಾಂದವ ಎಂದೇ ಬಿಂಬಿತವಾಗಿದೆ. ಕೋವಿಡ್ ವೇಳೆಯಲ್ಲಂತೂ ಇದು ಜೀವರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ಆಯುಷ್ಮಾನ್ ಭಾರತ್ ಸೌಲಭ್ಯಗಳನ್ನು ಬಳಸಿಕೊಂಡು ರಾಜ್ಯದಲ್ಲಿ 8619 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 3,173 ಸಮುದಾಯ ಆರೋಗ್ಯಾಧಿಕಾರಿಗಳನ್ನು ನೇಮಿಸಲಾಗಿದೆ. ಆರೋಗ್ಯ ನಂದನ ಯೋಜನೆಯಡಿ 78.32 ಲಕ್ಷ ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗಿದೆ.

**ಜೀವ ರಕ್ಷಕವಾದ ಅಂಗಾಗ ಕಸಿ:**

ಕಿಡ್ನಿ, ಲಿವರ್ ಫೈಲ್ಯೂರ್ ಎಂಬ ಪದ ಕೇಳುತ್ತಿದ್ದಂತೆ ಬಹಳಷ್ಟು ಮಂದಿ ಬೆಚ್ಚಿ ಬೀಳುವ ಆಘಾತಕ್ಕೆ ಒಳಗಾಗುತ್ತಾರೆ. ಬದುಕಿನ ಅವಕಾಶಗಳು ಕಡಿಮೆ ಎಂಬುದು ಒಂದು ಕಾರಣವಾದರೆ ಇವುಗಳಿಗೆ ಭರಿಸಲಾಗದಷ್ಟು ಚಿಕಿತ್ಸಾ ವೆಚ್ಚ ಮತ್ತೊಂದು ಕಾರಣವಾಗಿದೆ. ಇದನ್ನು ಮನಗಂಡ ರಾಜ್ಯ ಸರ್ಕಾರ 2019ರಲ್ಲಿ ಬಿಪಿಎಲ್ ಕುಟುಂಬಗಳಿಗೆ ಉಚಿತ ಅಂಗಾಂಗ ಕಸಿ ಯೋಜನೆಯನ್ನು ಪರಿಚಯಿಸಿತ್ತು. ಕಿಡ್ನಿ ಕಸಿಗೆ 2 ಲಕ್ಷ, ಹೃದಯ ಕಸಿಗೆ 10 ಲಕ್ಷ, ಲಿವರ್ ಕಸಿಗೆ 11 ಲಕ್ಷ ರೂಪಾಯಿಗಳನ್ನು ಸರ್ಕಾರ ನಿಗದಿ ಮಾಡಿದ್ದು, ಅದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಈ ಯೋಜನೆಯಡಿ ನೂರಾರು ಅಮೂಲ್ಯ ಜೀವಗಳನ್ನು ರಕ್ಷಣೆ ಮಾಡಲಾಗುತ್ತಿದೆ. ಮೊದಲ ವರ್ಷ 23, ಎರಡನೇ ವರ್ಷ ಕೋವಿಡ್ ವೇಳೆಯಲ್ಲೂ 9 ಮಂದಿಗೆ, ಮೂರನೇ ವರ್ಷ 13 ಮಂದಿ, ಈ ವರ್ಷ 36 ರೋಗಿಗಳು ಉಚಿತ ಅಂಗಾಂಗ ಕಸಿ ಚಿಕಿತ್ಸೆ ಸೌಲಭ್ಯ ಪಡೆದಿದ್ದಾರೆ. 77 ಕಿಡ್ನಿ, 15 ಹೃದಯ, ಎಂಟು ಲಿವರ್ ಕಸಿ ನಡೆಸಲಾಗಿದೆ. ಇದಕ್ಕಾಗಿ ಸುಮಾರು 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕಸಿಯ ಬಳಿಕ ಒಂದು ವರ್ಷದವರೆಗೂ ಅಗತ್ಯ ಚಿಕಿತ್ಸೆ ಪಡೆಯಲು ಒಂದು ಲಕ್ಷ ರೂಪಾಯಿವರೆಗೂ ಆರ್ಥಿಕ ನೆರವು ನೀಡಲಾಗುತ್ತಿದೆ. ವಿಶೇಷವಾದ ಈ ಯೋಜನೆಗೆ ಬಜೆಟ್‌ನಲ್ಲಿ 30 ಕೋಟಿ ರೂಪಾಯಿಗಳನ್ನು ಕಾಯ್ದಿರಿಸಲಾಗಿದೆ.


Downloaded From: www.kpscvaani.com



ಮಕ್ಕಳಿಗೆ ಶ್ರವಣ ಸಾಧನಗಳನ್ನು ಮುಖ್ಯಮಂತ್ರಿ ಅವರು ವಿತರಿಸುತ್ತಿರುವುದು.

**ಕಿವಿ ಇಂಪ್ಲಾಂಟ್ ಚಿಕಿತ್ಸೆ:**

ಆರೋಗ್ಯ ಒಂದೇ ವಲಯಕ್ಕೆ ಸೀಮಿತವಾಗಿರುವುದಿಲ್ಲ. ಕಣ್ಣು, ಕಿವಿ, ಹೃದಯ ಸೇರಿ ಎಲ್ಲಾ ಅಂಗಾಂಗಳಿಗೂ ಅನ್ವಯವಾಗುತ್ತದೆ. ಕಣ್ಣಿನ ಅಂಧಕಾರದಷ್ಟೇ ಕಿವಿ ಸಮಸ್ಯೆ ಕೂಡ ಮಕ್ಕಳ ಭವಿಷ್ಯವನ್ನು ಅಸ್ತವ್ಯಸ್ಥಗೊಳಿಸಬಹುದು. ಕುರುಡತನಕ್ಕೆ ನೀಡಲಾಗುವ ಕಾಕ್ಲಿಯರ್ ಇಂಪ್ಲಾಂಟ್ ಚಿಕಿತ್ಸೆ ದುಬಾರಿಯಾಗಿದ್ದು, ಆರ್ಥಿಕವಾಗಿ ದುರ್ಬಲ ಕುಟುಂಬಗಳಿಗೆ ಇದು ಕೈಗೆಟಕುವುದು ಕಷ್ಟಸಾಧ್ಯ. ಅದನ್ನು ಮನಗಂಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಳೆದ ಬಜೆಟ್‌ನಲ್ಲಿ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಬೆಂಗಳೂರಿನ ಕೆ.ಸಿ.ಜನರಲ್, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ವಿಕ್ಟೋರಿಯಾ, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ, ತುಮಕೂರು ಜಿಲ್ಲಾಸ್ಪತ್ರೆ, ಹುಬ್ಬಳ್ಳಿ-ಧಾರವಾಡ ಕಿಮ್ಸ್, ರಾಯಚೂರಿನ ರಿಮ್ಸ್, ದಕ್ಷಿಣ ಕನ್ನಡ ಜಿಲ್ಲೆಯ ವೆನ್‌ಲಾಕ್ ಆಸ್ಪತ್ರೆ, ಮಂಡ್ಯದ ವೈದ್ಯಕೀಯ ಸಂಸ್ಥೆಯಲ್ಲಿ ಕಾಕ್ಲಿಯರ್ ಇಂಪ್ಲಾಟ್ ಚಿಕಿತ್ಸೆ ನೀಡಲಾಗುತ್ತಿದೆ. ಇದಲ್ಲದೆ 10 ಖಾಸಗಿ ಆಸ್ಪತ್ರೆಗಳಲ್ಲೂ ಉಚಿತ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದು ಬಡವರ ಪಾಲಿಗೆ ಆಶಾಕಿರಣವಾಗಿದೆ.

**ಮಾತೃಪ್ರಧಾನ ಆರೋಗ್ಯ ರಕ್ಷಣೆಗೆ ಆದ್ಯತೆ:**

ಮಹಿಳೆಯರು ಮತ್ತು ಮಕ್ಕಳ ಆರೋಗ್ಯಕ್ಕೆ ಹೆಚ್ಚಿನ ಕಾಳಜಿ ವಹಿಸಲಾಗಿದೆ. ಹದಿಹರೆಯದ ಹೆಣ್ಣುಮಕ್ಕಳ ಆರೈಕೆ, ಮುಟ್ಟಿನ ಸಮಸ್ಯೆ, ರಕ್ತಹೀನತೆ, ರಕ್ತದೊತ್ತಡ, ಬೊಜ್ಜು, ಸಂಧಿವಾತ, ಕ್ಯಾನ್ಸರ್ ಪತ್ತೆ, ಗರ್ಭಧಾರಣೆ ಸೇರಿದಂತೆ ಹಲವು ಆರೋಗ್ಯ ಸೇವೆಗಳಿಗಾಗಿ ಮುಂದಿನ ಜನವರಿ ವೇಳೆಗೆ 250 ಆಯುಷ್ಮತಿ ಮಹಿಳಾ ಕ್ಲಿನಿಕ್‌ಗಳನ್ನು ಆರಂಭಿಸಲು ಸಿದ್ಧತೆ ಕೈಗೊಳ್ಳಲಾಗಿದೆ. ಈಗಾಗಲೇ ನಗರ ಪ್ರದೇಶಗಳ ಆರ್ಥಿಕ ದುರ್ಬಲರ ವೈದ್ಯಕೀಯ ನೆರವಿಗೆ 438 ನಮ್ಮ ಕ್ಲಿನಿಕ್‌ಗಳ ಆರಂಭಕ್ಕೆ ಚಾಲನೆ ನೀಡಲಾಗಿದ್ದು, ಅದರ ಜೊತೆಗೆ ಮಹಿಳಾ ಸ್ವಾಸ್ಥ್ಯ ಕೇಂದ್ರಗಳು ಆರೋಗ್ಯ ಕ್ಷೇತ್ರದಲ್ಲಿ ಬಹುಮೆಚ್ಚಿನ ಸುಧಾರಣಾ ಕ್ರಮವಾಗಿದೆ. ಸ್ತ್ರೀ ರೋಗ ಹಾಗೂ ಪ್ರಸೂತಿ ರೋಗಗಳ ತಜ್ಞರು ವಾರಕ್ಕೊಮ್ಮೆ ಈ ಕೇಂದ್ರಗಳಿಗೆ ಭೇಟಿ ನೀಡಲಿದ್ದಾರೆ. ಆ ವೇಳೆ ಮಹಿಳೆಯರು ತಜ್ಞರನ್ನು ಭೇಟಿ ಮಾಡಿ ಹೆಚ್ಚಿನ ಚಿಕಿತ್ಸಾ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು, ಉಳಿದಂತೆ ಸಾಮಾನ್ಯ ಚಿಕಿತ್ಸಾ ಸೌಲಭ್ಯಗಳು ಯಥಾರೀತಿ ದೊರೆಯಲಿವೆ.

ತಾಯಿ ಮತ್ತು ಮಕ್ಕಳ ಆರೋಗ್ಯಕ್ಕೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಕಲಬುರಗಿಯಲ್ಲಿ ಜೇವರ್ಗಿ, ಕೊಪ್ಪಳದ ಕುಷ್ಟಗಿ ತಾಲ್ಲೂಕುಗಳಲ್ಲಿ ತಲಾ 100, ಚಿಕ್ಕಬಳ್ಳಾಪುರದ ಮಂಚೇನಹಳ್ಳಿಯಲ್ಲಿ 60 ಹಾಸಿಗೆಯ ಆಸ್ಪತ್ರೆಗಳ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. ಜೊತೆಗೆ ಹುಬ್ಬಳ್ಳಿ, ಧಾರವಾಡ, ಹಾಸನ ಜಿಲ್ಲೆ ಹೊಳೆನರಸೀಪುರ, ಕೋಲಾರದಲ್ಲಿ ತಲಾ 100, ಉತ್ತರ ಕನ್ನಡ ಜಿಲ್ಲೆಯ ಶಿರಸಿ, ರಾಯಚೂರು, ಹೊಸಪೇಟೆಯಲ್ಲಿ ತಲಾ 60, ವಂಟಮುರಿಯಲ್ಲಿ 50 ಹಾಸಿಗೆಗಳ ಆಸ್ಪತ್ರೆ ನಿರ್ಧರಿಸಲಾಗಿದೆ.

**ಜನಮನ್ನಣೆ ಪಡೆದ ಔಷಧಿ ಕೇಂದ್ರಗಳು:**

ಜೀವ ರಕ್ಷಕ ಔಷಧಿಗಳನ್ನು ರಿಯಾಯಿತಿ ದರದಲ್ಲಿ ಪೂರೈಸುವ ಪ್ರಧಾನಮಂತ್ರಿ ಜನೌಷಧಿ ಕಾರ್ಯಕ್ರಮ ಜಾರಿಯಲ್ಲಿ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ರಾಜ್ಯಾದ್ಯಂತ 1052ಕ್ಕೂ ಹೆಚ್ಚು ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಇನ್ನು ಹೆಚ್ಚುವರಿಯಾಗಿ 500 ಮಳಿಗೆಗಳನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆ. ಇಲ್ಲಿ ಮಾರುಕಟ್ಟೆಗಿಂತ ಶೇ.50 ರಿಂದ 80ರಷ್ಟು ಕಡಿಮೆ ದರದಲ್ಲಿ ಔಷಧಿಗಳನ್ನು ಮಾರಾಟ ಮಾಡಲಾಗುತ್ತಿದೆ. 1451 ಔಷಧಗಳು, 240 ಶಸ್ತ್ರಚಿಕಿತ್ಸೆ ಪರಿಕರಗಳು, ದುಬಾರಿ ಕ್ಯಾನ್ಸರ್ ಔಷಧಗಳು ಇಲ್ಲಿ ಲಭ್ಯವಾಗುತ್ತಿವೆ.

**ಪ್ರಶಸ್ತಿಗಳ ಗರಿಮೆ:**

ವೈದ್ಯಕೀಯ ಮಾನವ ಸಂಪನ್ಮೂಲವನ್ನು ಹೆಚ್ಚಿಸಲು ಜಿಲ್ಲಾಸ್ಪತ್ರೆಗಳಲ್ಲಿ ಡಿಎನ್‌ಬಿ ಕೋರ್ಸ್‌ಗಳನ್ನು ಆರಂಭಿಸಲಾಯಿತು. ಅಭ್ಯರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದರಿಂದ ಉಪ ರಾಷ್ಟ್ರಪತಿಯವರಿಂದ ಪ್ರಶಸ್ತಿ ಸ್ವೀಕರಿಸಲಾಗಿದೆ.

ಕ್ಷಯ ರೋಗ ನಿರ್ಮೂಲನೆ ಚಟುವಟಿಕೆಯಲ್ಲಿ ಐದು ಬೆಳ್ಳಿ, ಒಂಬತ್ತು ಕಂಚು ಸೇರಿ 14 ರಾಷ್ಟ್ರೀಯ ಪದಕಗಳನ್ನು ಪಡೆಯಲಾಗಿದೆ. ಉತ್ತಮ ಕೋವಿಡ್ ನಿರ್ವಹಣೆಗಾಗಿ ಇಂಡಿಯಾ ಟುಡೇ ಹೆಲ್ತ್‌ಗಿರಿ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಪಡೆದಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ದೇಶಕ್ಕೆ ಒಂದು ಟ್ರಿಲಿಯನ್ ಆರ್ಥಿಕತೆ ಕೊಡುಗೆ ನೀಡಲು ಔದ್ಯೋಗಿಕ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಅದಕ್ಕೆ ಆರೋಗ್ಯವಂತ ಸಮಾಜ ಅಷ್ಟೇ ಮುಖ್ಯವಾಗಿದೆ. ಹಾಗಾಗಿ ಡಾ.ಸುಧಾಕರ್ ಅವರ ನೇತೃತ್ವದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಎಲ್ಲರಿಗೂ ಆರೋಗ್ಯ ಎಲ್ಲೆಡೆ ಆರೋಗ್ಯ ಎಂಬ ಧ್ಯೇಯದೊಂದಿಗೆ ಜನಪರ ಯೋಜನೆಗಳನ್ನು ರೂಪಿಸುತ್ತಾ ಇತರೆ ರಾಜ್ಯಗಳಿಗೆ ಮಾದರಿಯಾಗಿ ಮುನ್ನಡೆದಿದೆ.



Downloaded From: www.kpscvaani.com




# ಬಡ ಜನರ ಆರೋಗ್ಯ ರಕ್ಷಣೆಗಾಗಿ ನಮ್ಮ ಕ್ಲಿನಿಕ್

**ನಗರಗಳಲ್ಲಿ ವಾಸವಿರುವ ಬಡವರು ಮತ್ತು ಮಧ್ಯಮ ವರ್ಗದ ಜನಸಾಮಾನ್ಯರ ಆರೋಗ್ಯ ಕಾಪಾಡುವ ಸಲುವಾಗಿ ರಾಜ್ಯ ಸರ್ಕಾರವು ಸ್ಥಾಪಿಸುತ್ತಿರುವ 'ನಮ್ಮ ಕ್ಲಿನಿಕ್' ಗೆ ರಾಜ್ಯದಾದ್ಯಂತ ಚಾಲನೆ ದೊರಕಿದೆ.**

ಚಾರುಸ್ಮಿತಾ

ಮಧ್ಯಮ ವರ್ಗದ ಜನರ ಬಹುಪಾಲು ದುಡಿಮೆ ಖರ್ಚಾಗುವುದು ಶಿಕ್ಷಣ ಮತ್ತು ಆರೋಗ್ಯ ವಲಯಕ್ಕೆ. ಅದರಲ್ಲೂ ಚಿಕಿತ್ಸೆಗೆಂದು ಹಣ ಖರ್ಚು ಮಾಡುವುದು ಅನಿವಾರ್ಯದ ಬಾಬ್ತಾಗಿದೆ. ಸರ್ಕಾರ ನಿರಂತರ ಪ್ರಯತ್ನದ ಭಾಗವಾಗಿ ಗ್ರಾಮೀಣ ಭಾಗದಲ್ಲಿನ ವೈದ್ಯಕೀಯ ಸೌಲಭ್ಯಗಳನ್ನು ಸುಧಾರಿಸಿದೆ. ಆದಾಗ್ಯೂ ಮತ್ತಷ್ಟು ಸೌಲಭ್ಯಗಳ ಅಗತ್ಯ ಇದೆ ಎಂಬ ಕಾರಣಕ್ಕೆ ಪ್ರಯತ್ನಗಳು ಮುಂದುವರೆದಿವೆ.

ಪ್ರಸ್ತುತ ನಗರ ಹಾಗೂ ಗ್ರಾಮೀಣ ಭಾಗವನ್ನು ಒಳಗೊಂಡಂತೆ 42 ಜಿಲ್ಲಾಸ್ಪತ್ರೆಗಳು, 146 ತಾಲ್ಲೂಕು ಆಸ್ಪತ್ರೆಗಳು, 204 ಸಮುದಾಯ ಆರೋಗ್ಯ ಕೇಂದ್ರಗಳು, 2508 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 9334 ಉಪ ಆರೋಗ್ಯ ಕೇಂದ್ರಗಳಿವೆ.

ನಗರ ಪ್ರದೇಶದಲ್ಲಿ 50 ಸಾವಿರ ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಜನಸಂಖ್ಯೆ ಹೆಚ್ಚಿದ್ದು ಚಿಕಿತ್ಸಾ ಕೇಂದ್ರಗಳ ಸಂಖ್ಯೆ ಕಡಿಮೆ ಇರುವುದರಿಂದ ಸಹಜವಾಗಿ ಒತ್ತಡ ಹೆಚ್ಚಾಗಿದೆ. ಜಿಲ್ಲಾಸ್ಪತ್ರೆಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಸಣ್ಣಪುಟ್ಟ ಆರೋಗ್ಯ ಕ್ಷೇಮ ಚಿಕಿತ್ಸೆಗೆ ಸಮಯ ಹಾಗೂ ಸಂಪನ್ಮೂಲ ಬಳಕೆಯಾಗುತ್ತಿದೆ. ಗಂಭೀರ ಕಾಯಿಲೆಗಳ ಸಂಶೋಧನೆ ಹಾಗೂ ಚಿಕಿತ್ಸೆ ಸುಧಾರಣೆಗೆ ಅವಕಾಶಗಳು ಕಡಿಮೆ ಇವೆ.

ನಗರಗಳಲ್ಲಿ ಖಾಸಗಿ ವಲಯದಡಿ ಕೆಲಸ ನಿರ್ವಹಿಸುವ ವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಹೆಚ್ಚಿದ್ದರೂ, ಆರ್ಥಿಕವಾಗಿ ಬಡ ವರ್ಗಗಳಿಗೆ ಕೈಗೆಟುಕದ ಪರಿಸ್ಥಿತಿ ಇದೆ. ಇದರಿಂದಾಗಿ ಮಹಿಳೆಯರು, ಮಕ್ಕಳ ಆರೋಗ್ಯ ತಪಾಸಣೆ ನಿಯಮಿತ ಕಾಲದಲ್ಲಿ ನಡೆಯುತ್ತಿಲ್ಲ. ಕ್ಯಾನ್ಸರ್, ಕ್ಷಯದಂತಹ ಬಹುತೇಕ ಕಾಯಿಲೆಗಳು ತೀವ್ರ ಸ್ವರೂಪಕ್ಕೆ ತಿರುಗುವವರೆಗೂ ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲ. ಉಲ್ಬಣಗೊಂಡ ರೋಗವನ್ನು ಗುಣಪಡಿಸಲಾಗದೆ ಸಾವಿನ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಖಾಸಗಿ ವಲಯ ನಗರ ಪ್ರದೇಶದ ವೈದ್ಯಕೀಯ ಚಿಕಿತ್ಸೆಯಲ್ಲಿ ಬಹುತೇಕ ಏಕಸ್ವಾಮ್ಯತೆಯನ್ನೇ ಸಾಧಿಸಿದೆ. ಕೆಮ್ಮು, ನೆಗಡಿ, ಜ್ವರದಂತಹ ಕಾಯಿಲೆಗಳಿಗೂ ದುಬಾರಿ ಹಣ ತೆತ್ತು ಚಿಕಿತ್ಸೆ ಪಡೆಯಬೇಕಾಗಿರುವುದರಿಂದ ಜನ



Downloaded From: www.kpscvaani.com




**ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ನಮ್ಮ ಸರಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ. ಆರೋಗ್ಯ ಕ್ಷೇತ್ರಕ್ಕೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 10 ಸಾವಿರ ಕೋಟಿ ಅನುದಾನ ಮೀಸಲಿಡಲಾಗಿದೆ. ಬಡವರಿಗೆ ಮತ್ತು ಮಧ್ಯಮ ವರ್ಗದ ಜನಸಾಮಾನ್ಯರಿಗೆ ಅತ್ಯಂತ ಅವಶ್ಯಕತೆ ಇರುವ ಈ ನಮ್ಮ ಕ್ಲಿನಿಕ್ ಆರೋಗ್ಯ ಕಾರ್ಯಕ್ರಮ ಮಹತ್ವದ್ದಾಗಿದೆ. ಬಡವರಿಗೆ ಆರೋಗ್ಯ ಸಮಸ್ಯೆ ಉಂಟಾದರೆ ಖಾಸಗಿ ಆಸ್ಪತ್ರೆಗಳು ಹೆಚ್ಚು ದರ ವಿಧಿಸುವುದರಿಂದ ತೊಂದರೆ ಆಗುತ್ತದೆ. ಹಾಗಾಗಿ ಯಾವುದೇ ತಾರತಮ್ಯವಿಲ್ಲದೇ ಎಲ್ಲರಿಗೂ ಉತ್ತಮ ಚಿಕಿತ್ಸೆ, ಉಚಿತ ಔಷಧೋಪಚಾರ ದೊರೆಯುವಂತೆ ನಮ್ಮ ರಾಜ್ಯ ಸರ್ಕಾರವು ವಿವಿಧ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.**

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿಗಳು

ಸಾಮಾನ್ಯರು ಸರ್ಕಾರಿ ಆಸ್ಪತ್ರೆಗಳ ಮೇಲೆ ಹೆಚ್ಚು ಅವಲಂಬಿತರಾಗುತ್ತಿದ್ದಾರೆ. ಜನಸಂಖ್ಯೆಗೆ ಅನುಗುಣವಾಗಿ ಚಿಕಿತ್ಸಾ ಕೇಂದ್ರಗಳಿಲ್ಲ ಎಂಬ ಗಂಭೀರವಾದ ಈ ಸಮಸ್ಯೆಗೆ ಸರ್ಕಾರ ಇತಿಶ್ರೀ ಹಾಡಲು ಮುಂದಾಗಿದೆ. 15 ರಿಂದ 20 ಸಾವಿರ ಜನಸಂಖ್ಯೆಗೆ ಒಂದರಂತೆ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸುತ್ತಿದೆ. ಬೆಂಗಳೂರಿನಲ್ಲಿ ಪ್ರತಿವಾರ್ಡ್‌ಗೊಂದರಂತೆ ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ ಜ್ವರ, ನೆಗಡಿ, ಕೆಮ್ಮಿನಂತಹ ಸಣ್ಣ ಪ್ರಮಾಣದ ಅನಾರೋಗ್ಯಗಳಿಗೆ ಖಾಸಗಿ ಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆಯಲು ಸಾವಿರಾರು ರೂಪಾಯಿ ಖರ್ಚು ಮಾಡುವ ತಾಪತ್ರಾಯ ತಪ್ಪಲಿದೆ.

ಕೊಳಗೇರಿ ಮತ್ತು ದುರ್ಬಲ ವರ್ಗದವರು ಹೆಚ್ಚು ವಾಸಿಸುವ ಪ್ರದೇಶಗಳನ್ನು ಗುರುತಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 243, ರಾಜ್ಯದ ಇತರ ನಗರ ಪ್ರದೇಶದಲ್ಲಿ 195 ಸೇರಿ ಒಟ್ಟು 438 ನಮ್ಮ ಕ್ಲಿನಿಕ್‌ಗಳನ್ನು ಆರಂಭಿಸಲಾಗುತ್ತಿದೆ. ಮೊದಲ ಹಂತವಾಗಿ 114 ನಮ್ಮ ಕ್ಲಿನಿಕ್‌ಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹುಬ್ಬಳ್ಳಿಯ ಭೈರಿದೇವರಕೊಪ್ಪದಲ್ಲಿ ವರ್ಚುವಲ್ ವೇದಿಕೆ ಮೂಲಕ ಡಿಸೆಂಬರ್ 14ರಂದು ಚಾಲನೆ ನೀಡಿದ್ದಾರೆ. ಬೆಂಗಳೂರು ಸೇರಿದಂತೆ ಕೆಲವೆಡೆ ಬಾಕಿ ಇರುವ ಕ್ಲಿನಿಕ್‌ಗಳು ಜನವರಿಯಲ್ಲಿ ಹಂತ ಹಂತವಾಗಿ ತಿಂಗಳಾಂತ್ಯಕ್ಕೆ ಸಂಪೂರ್ಣವಾಗಿ ಕಾರ್ಯಾರಂಭಿಸಲಿವೆ.

ನಗರ ಪ್ರದೇಶದಲ್ಲಿ ವಾಸಿಸುವ ಬಡವರಿಗೆ ಉಚಿತ ಹಾಗೂ ಗುಣಮಟ್ಟದ ಚಿಕಿತ್ಸೆ ದೊರಕಿಸಲು ಕ್ರಾಂತಿಕಾರಕ ನಿರ್ಧಾರ ಕೈಗೊಂಡಿರುವ ರಾಜ್ಯ ಸರ್ಕಾರ ಗುಣಮಟ್ಟದಲ್ಲಿ ಉತ್ಕೃಷ್ಟತೆಯನ್ನು ಕಾಯ್ದುಕೊಂಡಿದೆ. ಸುಮಾರು 150 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿರುವ ನಮ್ಮ ಕ್ಲಿನಿಕ್‌ಗಳು ನಗರ ಪ್ರದೇಶದ ಬಡ, ಮಧ್ಯಮ ವರ್ಗದವರ ಪಾಲಿಗೆ ಆಶಾ ಕಿರಣವಾಗಲಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ಕ್ಲಿನಿಕ್‌ಗೆ 36.45 ಲಕ್ಷ, ಇತರೆ ನಗರ ಪ್ರದೇಶಗಳಲ್ಲಿ 34.77 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ಪ್ರಾಥಮಿಕ ಆರೋಗ್ಯ ಸೇವೆ ಒದಗಿಸುವ ಈ ಕೇಂದ್ರಗಳಲ್ಲಿ ಒಬ್ಬ ವೈದ್ಯಾಧಿಕಾರಿ, ಒಬ್ಬರು ಶುಶ್ರೂಷಕರು, ಪ್ರಯೋಗ ಶಾಲಾ ತಂತ್ರಜ್ಞ ಅಥವಾ ಕಿರಿಯ ದರ್ಜೆ ಸಹಾಯಕ, ಒರ್ವ ಡಿ ದರ್ಜೆ ಸಿಬ್ಬಂದಿ ಕೆಲಸ ನಿರ್ವಹಿಸುತ್ತಾರೆ. ಭಾನುವಾರ ರಜಾ ದಿನವಾಗಿದ್ದು, ಉಳಿದಂತೆ ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗೆ 9ರಿಂದ ಸಂಜೆ 4.30ರವೆಗೆ ಕ್ಲಿನಿಕ್‌ಗಳು ತೆರೆದಿರಲಿವೆ.

ಪ್ರತಿ ಕ್ಲಿನಿಕ್ ಕನಿಷ್ಠ ಸಾವಿರ ಚದುರ ಅಡಿ ವಿಸ್ತೀರ್ಣ ಹೊಂದಿದ್ದು, ಉತ್ತಮ ಒಳಾಂಗಣ ಮತ್ತು ಹೊರಾಂಗಣಗಳಿವೆ. ಹೊರ ರೋಗಿಗಳ ತಪಾಸಣಾ ಕೊಠಡಿ, ಚುಚ್ಚುಮದ್ದು ನೀಡುವ ಕೊಠಡಿ, ಪ್ರಯೋಗ ಶಾಲೆ, ಯೋಗ ಕೊಠಡಿ, ಔಷಧಿ ದಾಸ್ತಾನು ಮತ್ತು ವಿತರಣಾ ಕೊಠಡಿ, ಆಡಳಿತ ಕಚೇರಿ, ಪ್ರತ್ಯೇಕ ಶೌಚಾಲಯ, ಅಗತ್ಯ ವೈದ್ಯಕೀಯ ಸಲಕರಣೆಗಳು, ಔಷಧಿಗಳು, ಪಿಠೋಪಕರಣಗಳು, ಪ್ರಯೋಗಾಲಯ ಪರಿಕರಗಳನ್ನು ಅಳವಡಿಸಲಾಗಿದೆ. ಈವರೆಗೂ ಆರಂಭವಾದ ಕ್ಲಿನಿಕ್‌ಗಳ ಪೈಕಿ ಶೇ.80ರಷ್ಟು ಸ್ವಂತ ಕಟ್ಟಡ ಹೊಂದಿವೆ. ಉಳಿದವುಗಳಿಗೂ ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ.

ಪ್ರಮುಖವಾಗಿ 12 ಸೇವೆಗಳನ್ನು ನಮ್ಮ ಕ್ಲಿನಿಕ್‌ಗಳು ಒದಗಿಸುತ್ತವೆ. ಗರ್ಭಿಣಿ ಆರೈಕೆ ಮತ್ತು ಬಾಣಂತಿ ಸೇವೆ, ನವಜಾತ ಮತ್ತು ಶಿಶು ಸಮಗ್ರ ಆರೋಗ್ಯ ಆರೈಕೆ, ಬಾಲ್ಯ ಮತ್ತು ಹದಿಹರೆಯದವರ ಸಮಗ್ರ ಆರೋಗ್ಯ ಸೇವೆಗಳು, ಸಾರ್ವತ್ರಿಕ ಲಸಿಕಾಕರಣ, ಕುಟುಂಬ ಕಲ್ಯಾಣ, ಗರ್ಭನಿರೋಧಕ ಸೇವೆಗಳು, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ಸಾಮಾನ್ಯ ಮತ್ತು ಸಣ್ಣ ಪ್ರಮಾಣದ ಕಾಯಿಲೆಗಳಿಗೆ ಹೊರ ರೋಗಿ ಸೇವೆಗಳನ್ನು ಒದಗಿಸಲಾಗುತ್ತದೆ.

ಕ್ಷಯ, ಕುಷ್ಠದಂತಹ ಸಾಂಕ್ರಾಮಿಕ ರೋಗಗಳು, ಮಧುಮೇಹ, ರಕ್ತದೊತ್ತಡ, ದೀರ್ಘಾವಧಿ ಶ್ವಾಸಕೋಶ ಸಮಸ್ಯೆ, ಕೀಲು ನೋವು, ಸಂಧಿವಾತ, ಬಾಯಿ, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್‌ನಂತಹ ಅಸಾಂಕ್ರಾಮಿಕ ರೋಗಗಳ ಪರೀಕ್ಷೆಗೆ ಪದೇ ಪದೇ ಹಣ ಖರ್ಚು ಮಾಡಿ ಬಸವಳಿದವರು ನಿಟ್ಟುಸಿರು ಬಿಡುವಂತಾಗಿದೆ. 14ಕ್ಕೂ ಹೆಚ್ಚು ಪರೀಕ್ಷೆಗಳನ್ನು ನಮ್ಮ ಕ್ಲಿನಿಕ್‌ನ ಪ್ರಯೋಗಾಲಯಗಳು ನಿರ್ವಹಣೆ ಮಾಡಲಿವೆ. ರೋಗ ಪತ್ತೆ, ಪ್ರಾಥಮಿಕ


Downloaded From: www.kpscvaani.com

ಚಿಕಿತ್ಸೆ ಮತ್ತು ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವವರಿಗೆ ರೆಫರಲ್ ಕೇಂದ್ರಗಳಾಗಿಯೂ ಕೆಲಸ ಮಾಡುತ್ತವೆ.

ಕಣ್ಣು, ಬಾಯಿ, ಕಿವಿ, ಮೂಗು, ಗಂಟಲು ಆರೈಕೆ, ಮಾನಸಿಕ ಆರೋಗ್ಯದ ಮೂಲಭೂತ ಪರೀಕ್ಷೆ, ವೃದ್ಧಾಪ್ಯ ಆರೈಕೆ, ಸುಟ್ಟಗಾಯ, ಅಪಘಾತ ಮತ್ತಿತರ ಗಾಯಗಳಿಗೆ ತುರ್ತು ವೈದ್ಯಕೀಯ ನೆರವು ನೀಡಲಿವೆ. ರಕ್ತ ಹೀನತೆ, ಮಧುಮೇಹ, ಮೂತ್ರ ಪರೀಕ್ಷೆ, ಗರ್ಭಧಾರಣ ಪರೀಕ್ಷೆ, ಡೇಂಘಿ, ಮಲೇರಿಯಾದಂತಹ ಕೇಂದ್ರ ಸರ್ಕಾರ ಕಳೆದ ಮೂರು ವರ್ಷಗಳ ಹಿಂದೆ ಆರಂಭಿಸಿದ ಇ-ಸಂಜೀವಿನಿ ಟೆಲಿಮೆಡಿಷನ್ ವೇದಿಕೆ ಮೂಲಕ ನಮ್ಮ ಕ್ಲಿನಿಕ್‌ಗಳು ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲಿದೆ.


ನಮ್ಮ ಕ್ಲಿನಿಕ್‌ಗಾಗಿ ಈಗಾಗಲೇ 300 ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದ್ದು, ಬಾಕಿ ಉಳಿದ ಕೇಂದ್ರಗಳಿಗೆ ಗ್ರಾಮೀಣ ಸೇವೆಯ ಮೇಲೆ ವೈದ್ಯಕೀಯ ಪದವೀಧರರನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಕಳೆದ ಒಂದುವರೆ ವರ್ಷದಲ್ಲಿ 2500 ವೈದ್ಯರ ನೇಮಕಾತಿಯಾಗಿದ್ದು, ಎಲ್ಲಾ ಆರೋಗ್ಯ ಕೇಂದ್ರಗಳಿಗೂ ವೈದ್ಯರನ್ನು ನಿಯೋಜಿಸಲಾಗಿದೆ. ವೈದ್ಯಕೀಯ ಕ್ಷೇತ್ರದ ಸುಧಾರಣೆಯಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದ್ದು, ಅತಿ ಹೆಚ್ಚು ವೈದ್ಯಕೀಯ ಕಾಲೇಜುಗಳನ್ನು ಹೊಂದಿದ್ದು, ಉತ್ತಮ ಸೌಲಭ್ಯಗಳನ್ನು ಹೊಂದಿದೆ.

ಹೃದ್ರೋಗ, ಕ್ಯಾನ್ಸರ್, ಮಾನಸಿಕ ಆರೋಗ್ಯ ಸೇರಿದಂತೆ ಅನೇಕ ರೋಗಗಳ ನಿರ್ವಹಣೆಯ ವಲಯಗಳಲ್ಲಿ ವಿಶ್ವವಿಖ್ಯಾತವಾಗಿದೆ. ಕೋವಿಡ್ ಪೂರ್ವದಲ್ಲಿ ದೇಶ 1,60,713 ಆರೋಗ್ಯ ಉಪಕೇಂದ್ರಗಳನ್ನು ಹೊಂದಿತ್ತು. ಅದರಲ್ಲಿ 1,57,411 ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿದ್ದರೆ, ನಗರ ಪ್ರದೇಶದಲ್ಲಿ 3302 ಕೇಂದ್ರಗಳು ಮಾತ್ರ ಇದ್ದವು. ಕೋವಿಡ್ ಸಾಂಕ್ರಾಮಿಕ ಸವಾಲು ದೇಶದ ಆರೋಗ್ಯ ವಲಯದ ಪುನಶ್ಚೇತನದ ಅನಿವಾರ್ಯತೆಯನ್ನು ಸಾಬೀತು ಮಾಡಿತು. ತತ್ಪರಿಣಾಮ ಉಪ ಕೇಂದ್ರಗಳಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳವರೆಗೂ ಎಲ್ಲಾ ಹಂತಗಳಲ್ಲೂ ಸುಧಾರಣೆ ಕಂಡಿದೆ.

ಕೋವಿಡೋತ್ತರದಲ್ಲಿ ಮೊದಲ ಬಾರಿಗೆ ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳು ಸ್ಥಾಪಿತವಾಗಿವೆ, ಸಂಗ್ರಹಗಾರಗಳು ಹೆಚ್ಚಾಗಿವೆ. ಕೋವಿಡ್‌ಗೂ ಮೊದಲು 70 ಸಾವಿರದಷ್ಟಿದ್ದ ರಾಜ್ಯದ ಆಸ್ಪತ್ರೆಗಳ ಬೆಡ್ ಸಾಮರ್ಥ್ಯ, ಪ್ರಸ್ತುತ 1.90 ಲಕ್ಷಕ್ಕೆ ಹೆಚ್ಚಾಗಿದೆ. ಅದರಲ್ಲಿ ಶೇ.25ರಷ್ಟು ಆಕ್ಸಿಜನ್ ಸಹಿತವಾಗಿದೆ. ಮುಂದಿನ ದಿನಗಳಲ್ಲಿ ಕೋವಿಡ್ ಮಾದರಿಯ ಯಾವುದೇ ಸಮಸ್ಯೆಗಳು ಎದುರಾದರೂ ಅದನ್ನು ಎದುರಿಸಲು ಸರ್ಕಾರ ಸಿದ್ಧವಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಆರು ಕೋಟಿ 10 ಲಕ್ಷ ಜನಸಂಖ್ಯೆ ಹೊಂದಿದ್ದರೆ ಅದರಲ್ಲಿ ಶೇ.38ರಷ್ಟು ಮಂದಿ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಸರ್ಕಾರದ ಚಿಕಿತ್ಸಾ ಕೇಂದ್ರಗಳ ಪೈಕಿ ಶೇ.97ರಷ್ಟು ಗ್ರಾಮೀಣ ಭಾಗದಲ್ಲೇ ಇವೆ. ಈ ಅಸಮತೋಲನವನ್ನು ಸರಿದೂಗಿಸಲು ನಮ್ಮ ಕ್ಲಿನಿಕ್‌ಗಳು ಪ್ರಮುಖ ಪಾತ್ರವಹಿಸಲಿವೆ. ಸಮುದಾಯ ಕೇಂದ್ರಗಳ ಮೇಲಿನ ಹೊರೆಯನ್ನು ಕಡಿಮೆ ಮಾಡುವುದರಿಂದ ಇನ್ನೂ ಮುಂದೆ ಚಿಕಿತ್ಸಾ ಕೇಂದ್ರಗಳಲ್ಲಿ ಸೌಲಭ್ಯ ಸುಧಾರಣೆಯಾಗುವ ಜೊತೆಗೆ ಗುಣಮಟ್ಟದ ಆರೈಕೆ ದೊರೆಯುವ ಸಾಧ್ಯತೆಗಳು ಹೆಚ್ಚಾಗಲಿದೆ.




**ನಮ್ಮ ಕ್ಲಿನಿಕ್‌ನಲ್ಲಿ ಲ್ಯಾಬ್ ಪರೀಕ್ಷೆ, ತಪಾಸಣೆ, ಔಷಧಿ ಸಂಪೂರ್ಣ ಉಚಿತವಾಗಿದ್ದು, ಇದು ಆರೋಗ್ಯ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆ ತರುವ ಹೆಜ್ಜೆಯಾಗಿದೆ. ಸದ್ಯ 114 ಕ್ಲಿನಿಕ್‌ಗಳನ್ನು ಉದ್ಘಾಟಿಸಲಾಗುತ್ತಿದೆ. ಇನ್ನು ಮುಂದೆ ಪ್ರತಿ ವಾರಕ್ಕೆ 100 ರಂತೆ ನಮ್ಮ ಕ್ಲಿನಿಕ್‌ಗಳನ್ನು ಉದ್ಘಾಟನೆ ಮಾಡಿ, ಜನವರಿ ಅಂತ್ಯಕ್ಕೆ ಎಲ್ಲಾ 438 ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು.**

**ಡಾ.ಕೆ.ಸುಧಾಕರ್**
ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು



Downloaded From: www.kpscvaani.com

# ಕೃಷಿ ಪೂರಕ ಚಟುವಟಿಕೆಗಳಿಗೆ ಸರ್ಕಾರದಿಂದ ವಿವಿಧ ಯೋಜನೆಗಳ ಕೊಡುಗೆ



ಕೊಪ್ಪಳದ ಗೋ ಶಾಲೆಗೆ ಭೇಟಿ ನೀಡಿದ ಸಂದರ್ಭ.

**ಕೃಷಿಕರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪಶುಸಂಗೋಪನಾ ಇಲಾಖೆ ವತಿಯಿಂದ ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ಸಂಕ್ಷಿಪ್ತ ಮಾಹಿತಿ.**

ಡಾ. ಪಿ. ವಿ. ವರ ಪ್ರಸಾದ್ ರಾವ್

ನಮ್ಮ ದೇಶ ಕೃಷಿ ಪ್ರಧಾನ ದೇಶ. ವ್ಯವಸಾಯವು ಮುಖ್ಯವಾಗಿ ಪಶು ಸಂಪತ್ತನ್ನು ಅವಲಂಭಿಸಿರುವುದರಿಂದ ರಾಷ್ಟ್ರದ ಮತ್ತು ರಾಜ್ಯಗಳ ಗ್ರಾಮೀಣ ಆರ್ಥಿಕ ಅಭಿವೃದ್ಧಿಗೆ ಪಶು ಸಂಪತ್ತಿನ ಪಾತ್ರ ಬಹಳ ಮಹತ್ವದ್ದಾಗಿದೆ. ಪಶುಸಂಗೋಪನಾ ಇಲಾಖೆಯು ಗ್ರಾಮೀಣ ಭಾಗದ ಜನರ ಆರ್ಥಿಕ ಬೆಳವಣಿಗೆಯಲ್ಲಿ ಹಾಗೂ ಅವರುಗಳಿಗೆ ಉದ್ಯೋಗ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಣ್ಣ ಮತ್ತು ಅತೀ ಸಣ್ಣ ರೈತರು ಆದಾಯಕ್ಕೆ ಕೃಷಿಯ ಜೊತೆಗೆ ಉಪ ಕಸುಬಾಗಿ ಪಶುಪಾಲನೆಯನ್ನು ಅವಲಂಬಿಸಿರುತ್ತಾರೆ. ಹಾಗಾಗಿ ಹಸು, ಕುರಿ, ಕೋಳಿ, ಮೇಕೆ ಮುಂತಾದ ಪ್ರಾಣಿಗಳ ಸಾಕಾಣಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುತ್ತಾರೆ.

ಹಾಗಾಗಿಯೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಶುಸಂಗೋಪನೆಯಲ್ಲಿ ತೊಡಗಿರುವ ಗ್ರಾಮೀಣ ಭಾಗದ ಜನರ ಜೀವನವನ್ನು ಸುಧಾರಿಸುವ ಸಲುವಾಗಿ ಪಶುಸಂಗೋಪನಾ ಇಲಾಖೆಯಿಂದ ಅನುಕೂಲವಾಗುವಂತಹ ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಬಸವರಾಜ ಬೊಮ್ಮಾಯಿ ಅವರಂತೂ ಪ್ರಾಣಿ ಪ್ರಿಯರಾಗಿರುವುದರಿಂದ ಹಸುಗಳನ್ನು ರಕ್ಷಿಸಿ ಪೋಷಿಸುವಂತಹ ಪುಣ್ಯಕೋಟಿ ದತ್ತು ಯೋಜನೆಗೆ ಚಾಲನೆ ನೀಡಿದ್ದಾರೆ.

ಇವರಿಬ್ಬರೂ ತಮ್ಮ ಅಧಿಕಾರವಧಿಯಲ್ಲಿ ಪಶುಸಂಗೋಪನಾ ವಲಯಕ್ಕೆ



Downloaded From: www.kpscvaani.com

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸರ್ಕಾರದಿಂದ ಶೇಕಡಾ 90ರ ಸಹಾಯಧನದೊಂದಿಗೆ ಹಾಲು ಕರೆಯುವ ಯಂತ್ರಗಳನ್ನು ವಿತರಿಸಲಾಗುತ್ತದೆ.**



ಪುಣ್ಯಕೋಟಿ ದತ್ತು ಯೋಜನೆಗೆ ಚಾಲನೆ ನೀಡಿದ ಸಂದರ್ಭ.

ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸುವ ಮೂಲಕ ಹಲವು ಸೌಲಭ್ಯಗಳನ್ನು ನೀಡಿದ್ದು, ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.

ಹೈನುಗಾರಿಕೆ ರೈತರ ಪ್ರಮುಖ ಉಪ ಕಸುಬಾಗಿರುವುದರಿಂದ ಸರ್ಕಾರ ಹಸು ಸಾಕಾಣಿಕೆಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಹಸುಗಳು ಕುಳಿತುಕೊಳ್ಳುವಾಗ ತನ್ನ ದೇಹದ ತೂಕದ ಮೂರರಲ್ಲಿ ಎರಡು ಭಾಗವನ್ನು ಮುಂಗಾಲುಗಳ ಮೇಲೆ ಹಾಕಿ ಮಂಡಿಯನ್ನು ಥಟ್ಟನೆ ನೆಲಕ್ಕೆ ಊರಿ ಕೂರುವಾಗ ಮಂಡಿಗೆ ನೋವು ಮಾಡಿಕೊಳ್ಳುತ್ತವೆ. ಹಾಗಾಗಿ ನೋವಾಗದಿರುವ ಹಾಗೆ ಗಾರೆ ನೆಲದ ಮೇಲೆ ಹಾಸುವಂತಹ ನೆಲಹಾಸುಗಳನ್ನು ಸರ್ಕಾರದ ವತಿಯಿಂದ ವಿತರಿಸಲಾಗುತ್ತದೆ. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಯಡಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಪಂಗಡದ ಫಲಾನುಭವಿಗಳಿಗೆ ತಲಾ 2 ಹಸುಗಳಿಗೆ ನೆಲಹಾಸುಗಳನ್ನು ಶೇಕಡ 90 ರ ಸಹಾಯಧನದಲ್ಲಿ ವಿತರಿಸಲಾಗುತ್ತಿದೆ. ಹಾಗೆಯೇ ರಾಜ್ಯದ 99887 ಮಾಲೀಕರುಗಳ ಜಾನುವಾರುಗಳಿಗೆ ರೂ 10.92 ಕೋಟಿ ಅನುದಾನದಲ್ಲಿ ವಿಮೆ ಸೌಲಭ್ಯವನ್ನು ಈ ಸರ್ಕಾರದ ಅವಧಿಯಲ್ಲಿ ಒದಗಿಸಲಾಗಿದೆ.

**ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ:**

ಕರ್ನಾಟಕ ಹಾಲು ಮಹಾಮಂಡಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್‌ಗೆ ರೂ 5 ರಂತೆ ಪ್ರೋತ್ಸಾಹಧನವನ್ನು 8.95 ಲಕ್ಷ ಫಲಾನುಭವಿಗಳಿಗೆ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರೂ. 1170.00 ಕೋಟಿ ಅನುದಾನ ನಿಗದಿಯಾಗಿದ್ದು, ಈವರೆಗೂ 685.5 ಕೋಟಿ ಮೊತ್ತವನ್ನು ವಿತರಿಸಲಾಗಿದೆ. ಜುಲೈ 2022 ರಿಂದ ಇದುವರೆಗೆ ರೂ 162.18 ಕೋಟಿ ಅನುದಾನವನ್ನು 2168966 ಫಲಾನುಭವಿಗಳ ಪ್ರೋತ್ಸಾಹಧನಕ್ಕಾಗಿ ವಿತರಿಸಲಾಗಿದೆ. ಹಾಗೂ ಏಪ್ರಿಲ್-2022 ರಿಂದ ಈವರೆಗೂ ರೂ. 685.5 ಕೋಟಿ ಮೊತ್ತವನ್ನು 8.95 ಲಕ್ಷ ಫಲಾನುಭವಿಗಳಿಗೆ ವಿತರಿಸಲಾಗಿದೆ.

ಹೈನುಗಾರಿಕೆಯನ್ನು ನಂಬಿ ಯಾರೂ ಕೆಟ್ಟವರಿಲ್ಲ. ಹಾಗಾಗಿ ಹಸುವನ್ನು ಕಾಮಧೇನು ಎಂದು ಕರೆಯಲಾಗುತ್ತದೆ. ಹಸುವಿನ ಹಾಲು, ಸಗಣಿ, ಮೂತ್ರ ಎಲ್ಲವೂ ರೈತರಿಗೆ ಬಹಳ ಉಪಯುಕ್ತವಾಗಿದೆ. ಗ್ರಾಮೀಣ ಭಾಗದಲ್ಲಿ ಪ್ರತಿ ಕುಟುಂಬವು ಒಂದಲ್ಲಾ ಒಂದು ಪ್ರಾಣಿಗಳನ್ನು ಸಾಕಿರುತ್ತಾರೆ. ಗ್ರಾಮೀಣ ಜನರ ಸಂಕಷ್ಟವನ್ನು ಅರಿತಿರುವ ಸರ್ಕಾರವು ಅವರಿಗೆ ಮತ್ತಷ್ಟು ಲಾಭವನ್ನು ಮಾಡಿಕೊಡುವ ನಿಟ್ಟಿನಲ್ಲಿ ಪಶುಸಂಗೋಪನಾ ಇಲಾಖೆಯಿಂದ ನಾನಾ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ.

ರಾಜ್ಯದ 8.95 ಲಕ್ಷ ಹಾಲು ಉತ್ಪಾದಕರಿಗೆ ಡಿಬಿಟಿ ಮೂಲಕ ನೇರ ನಗದು ವರ್ಗಾವಣೆ ಮೂಲಕ ಪ್ರೋತ್ಸಾಹಧನವನ್ನು ಜಮೆ ಮಾಡಲಾಗಿದೆ. ಇನ್ನು ಧಾರವಾಡ. ಹಾವೇರಿ, ಗದಗ ಮತ್ತು ದಕ್ಷಿಣ ಕನ್ನಡ ಹಾಲು ಒಕ್ಕೂಟದವತಿಯಿಂದ ಹಾವೇರಿ ಜಿಲ್ಲೆಯ ಜಂಗಮಕೊಪ್ಪದ ಶೀತಲೀಕರಣ ಆವರಣದಲ್ಲಿ ನೂತನ ಹಾವೇರಿ ಡೈರಿ ಮತ್ತು ಯು.ಹೆಚ್.ಟಿ ಹಾಲು ಪ್ಯಾಕಿಂಗ್ ಘಟಕಗಳನ್ನು ಸ್ಥಾಪನೆ ಮಾಡಲಾಗುತ್ತಿದೆ.



ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಂದಿನಿ ಉತ್ಪನ್ನಗಳನ್ನು ಬಿಡುಗಡೆ ಮಾಡುತ್ತಿರುವುದು.



Downloaded From: www.kpscvaani.com



ಹಸುಗಳಿಗೆ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂದರ್ಭ.

ಜಾನುವಾರುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವತಿಯಿಂದ ಬಂಜೆರಾಸು ಚಿಕಿತ್ಸಾ ಶಿಬಿರಗಳ ಯೋಜನೆ, ಮೇವು ಅಭಿವೃದ್ಧಿ ಯೋಜನೆ, ಗಿರಿರಾಜ / ದೇಶಿ ಕೋಳಿಮರಿ ವಿತರಣೆ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಮಹಿಳೆಯರಿಗಾಗಿ ಪಶುಸಂಗೋಪನಾ ಕಾರ್ಯಕ್ರಮ, ಜಾನುವಾರು ವಿಮಾ ಯೋಜನೆ, ಕುರಿ ಸಾಕಾಣಿಕೆ ಯೋಜನೆ, ಪಿಂಜಾರಾಪೋಲ್ ಮತ್ತು ಇತರೆ ಗೋಶಾಲೆಗಳ ನೆರವು ಯೋಜನೆ, ಉಚಿತವಾಗಿ ಮೇವಿನ ಬೀಜದ ಕಿರುಪೊಟ್ಟಣಗಳ ವಿತರಣೆ ಯೋಜನೆ, ಜಲಕೃಷಿ ಮೇವು ಅಭಿವೃದ್ಧಿ ಯೋಜನೆ, ಮೇವು ಕತ್ತರಿಸುವ ಯಂತ್ರ ವಿತರಣೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಇನ್ನು ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ ಕಾರ್ಯಕ್ರಮ (NADCP), ರಾಷ್ಟ್ರೀಯ ಕೃತಕ ಗರ್ಭಧಾರಣೆ ಯೋಜನೆ (NAIP), ಜಾನುವಾರು ವಿಮಾ ಯೋಜನೆಗಳನ್ನು ಜಾರಿಗೆ ತರಲಾಗಿದೆ.

**ಪಶು ಸಂಜೀವಿನಿ ಆಂಬ್ಯುಲೆನ್ಸ್ ಸೇವೆ:**

ಕೃಷಿಕರು ಸಾವಯವ ಕೃಷಿ ಪದ್ಧತಿಯನ್ನು ಅಳವಡಿಕೊಳ್ಳಲು ಕೃಷಿಯ ಜೊತೆಗೆ ಪಶು ಸಾಕಾಣಿಕೆ ಮಾಡುವುದು ಅನುಕೂಲವಾಗುವುದಲ್ಲದೆ ಆದಾಯವನ್ನು ದ್ವಿಗುಣಗೊಳಿಸಲು ಪಶು ಸಾಕಾಣಿಕೆ ಸಹಕಾರಿಯಾಗಿದೆ. ಆದರೆ ಅನಾರೋಗ್ಯ ಸಂದರ್ಭದಲ್ಲಿ ಪಶುಗಳನ್ನು ಸಕಾಲದಲ್ಲಿ ಪಶು ಆಸ್ಪತ್ರೆಗೆ ಸಾಗಿಸುವುದು ಕಷ್ಟದ ಕೆಲಸವಾಗುತ್ತದೆ. ಇದನ್ನು ಮನಗಂಡ ಸರ್ಕಾರವು ಪಶುಗಳಿಗೆ ಉತ್ತಮ ಮತ್ತು ತುರ್ತು ಚಿಕಿತ್ಸೆಯನ್ನು ಒದಗಿಸಲು ಸಂಚಾರಿ ಪಶು ಚಿಕಿತ್ಸಾ ಘಟಕವನ್ನು ಆರಂಭಿಸಿತು.

ಪ್ರಾಣಿಗಳಿರುವ ಸ್ಥಳಕ್ಕೆ ಹೋಗಿ ಚಿಕಿತ್ಸೆ ನೀಡುವ ಸಲುವಾಗಿ ಈ ಪಶು ಚಿಕಿತ್ಸಾ ಘಟಕವಾದ 'ಪಶು ಸಂಜೀವಿನಿ' ಆಂಬ್ಯುಲೆನ್ಸ್ ಸೇವೆಯನ್ನು ಸರ್ಕಾರವು ಪ್ರಾರಂಭಿಸಿತು. ತುರ್ತು ಸಂದರ್ಭದಲ್ಲಿ ಮನುಷ್ಯರ ನೆರವಿಗೆ ಧಾವಿಸುವ ಆಂಬ್ಯುಲೆನ್ಸ್ ಮಾದರಿಯಲ್ಲೇ ಪ್ರಾಣಿಗಳ ರಕ್ಷಣೆಗಾಗಿ "ಪಶು ಸಂಜೀವಿನಿ" ಆಂಬ್ಯುಲೆನ್ಸ್‌ಗಳನ್ನು ರಾಜ್ಯ ಸರಕಾರ ಜಾರಿಗೆ ತಂದಿತು. ಪಶು ಸಂಜೀವಿನಿಯು ರೈತರಿಗೆ ಮತ್ತು ಪಶುಪಾಲಕರಿಗೆ ಅನುಕೂಲವಾಗುವಂತೆ ಜಾನುವಾರುಗಳ ಸಂರಕ್ಷಣೆ, ಆರೈಕೆ ಮತ್ತು ಆರೋಗ್ಯ ರಕ್ಷಣೆಯಲ್ಲಿ ತೊಡಗಿದೆ.

ರಾಜ್ಯದಲ್ಲಿ ದನ, ಎಮ್ಮೆ, ಕುರಿ, ಮೇಕೆ, ಹಂದಿ ಸೇರಿದಂತೆ 290 ಲಕ್ಷ ಜಾನುವಾರುಗಳಿದ್ದು, ಪ್ರತಿ ಒಂದು ಲಕ್ಷ ಜಾನುವಾರುಗಳಿಗೆ ಒಂದು ಪಶು ಸಂಜೀವಿನಿ ಸಂಚಾರಿ ಚಿಕಿತ್ಸಾ ವಾಹನವನ್ನು ಒದಗಿಸಲಾಗುತ್ತಿದೆ. ಈ ಪಶು ಸಂಜೀವಿನಿ ಆಂಬ್ಯುಲೆನ್ಸ್‌ಗಳ ನಿರ್ವಹಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 60:40 ಅನುಪಾತದಲ್ಲಿ ಅನುದಾನವನ್ನು ಒದಗಿಸಲಾಗುತ್ತಿದೆ.

ಸಂಚಾರಿ ಪಶು ವೈದ್ಯಕೀಯ ವಾಹನಗಳ ನಿಗಾ ವ್ಯವಸ್ಥೆಗೆ ಪ್ರತ್ಯೇಕ ಕಾಲ್ ಸೆಂಟರ್ ಆರಂಭಿಸಲಾಗಿದ್ದು, ರೈತರಿಂದ 8277100200 ಅಥವಾ 1962ಕ್ಕೆ ಕರೆ ಬಂದ ತಕ್ಷಣ ಮನೆ ಬಾಗಿಲಿಗೆ ತೆರಳಿ ಚಿಕಿತ್ಸೆ ನೀಡಲಾಗುತ್ತದೆ. ಪ್ರತಿ ಚಿಕಿತ್ಸಾ ವಾಹನದಲ್ಲಿ ಪಶು ವೈದ್ಯಾಧಿಕಾರಿ, ಪಶುವೈದ್ಯ ಸಹಾಯಕ ಹಾಗೂ ಚಾಲಕ ಸಿಬ್ಬಂದಿ ಇರಲಿದ್ದಾರೆ.

2021–22ನೇ ಸಾಲಿನಲ್ಲಿ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಡಿ 275 ಸಂಚಾರಿ ಪಶು ಚಿಕಿತ್ಸಾ ವಾಹನಗಳನ್ನು ಖರೀದಿಸಲಾಗಿದ್ದು, ಅದರಲ್ಲಿ ಬೆಂಗಳೂರು ವಿಭಾಗಕ್ಕೆ 75, ಮೈಸೂರು ವಿಭಾಗಕ್ಕೆ 68, ಬೆಳಗಾವಿ ವಿಭಾಗಕ್ಕೆ 82, ಕಲಬುರಗಿ ವಿಭಾಗಕ್ಕೆ 62 ವಾಹನಗಳನ್ನು ಹಂಚಿಕೆ ಮಾಡಲಾಗಿದೆ. ಈ ವಾಹನಗಳು ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸಲಿವೆ. ಇದಕ್ಕೆ ಪಶು ವೈದ್ಯರು ಮತ್ತು ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ.

**ಪ್ರತಿ ಜಿಲ್ಲೆಗೊಂದು ಗೋ ಶಾಲೆ**

ಗೋಹತ್ಯೆ ನಿಷೇಧ ಕಾಯ್ದೆ ಜಾರಿಯ ನಂತರ ಜಾನುವಾರುಗಳು ಕಸಾಯಿಖಾನೆಗಳಿಗೆ ಹೋಗುವುದನ್ನು ತಡೆಗಟ್ಟಿ ರಕ್ಷಣೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಿದೆ. ಸದ್ಯ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 5 ಗೋಶಾಲೆಗಳಲ್ಲಿ ಜಾನುವಾರುಗಳಿಗೆ ಆಶ್ರಯ ನೀಡಲಾಗಿದೆ. 12 ಗೋಶಾಲೆ ಪೂರ್ಣಗೊಂಡಿದ್ದು, 8 ಪೂರ್ಣಗೊಳ್ಳುವ ಹಂತದಲ್ಲಿದ್ದು, ಇನ್ನು ಉಳಿದವು ನಿರ್ಮಾಣ ಹಂತದಲ್ಲಿವೆ.

ಗೋ ಸಂಪತ್ತಿನ ರಕ್ಷಣೆಗಾಗಿ 15 ಕೋಟಿ ರೂ ವೆಚ್ಚದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಸರ್ಕಾರಿ ಗೋಶಾಲೆಗಳ ಸ್ಥಾಪನೆ ಮಾಡಲಾಗುತ್ತಿರುವುದನ್ನು ನೂರಕ್ಕೆ ಹೆಚ್ಚಿಸಲು ಸರ್ಕಾರವು ನಿರ್ಧರಿಸಿದೆ. ಕಳೆದ ವರ್ಷ ಪಿಂಜ್ರಾಪೋಲ್ ಯೋಜನೆಯಡಿ 142 ಖಾಸಗಿ ಗೋಶಾಲೆಗಳ ಅಭಿವೃದ್ಧಿಗೆ 5.37 ಕೋಟಿ ರೂಗಳನ್ನು ವೆಚ್ಚ ಮಾಡಿದೆ.

ಗೋವುಗಳ ರಕ್ಷಣೆ ಮೂಲಕ ದೇಶದ ಪರಂಪರೆ ಎತ್ತಿಹಿಡಿಯುವ ಕೆಲಸ ಮಾಡುತ್ತಿರುವ ಪಶುಸಂಗೋಪನಾ ಇಲಾಖೆಯ ಕಾರ್ಯ ಶ್ಲಾಘನೀಯವಾದುದು. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗೋಶಾಲೆಗಳು ನಿರ್ಮಾಣವಾಗಲಿದೆ ಎಂದು ಪಶುಸಂಗೋಪನಾ ಸಚಿವರಾದ ಪ್ರಭು ಚೌಹಾಣ್ ತಿಳಿಸಿದ್ದಾರೆ.

**ಪುಣ್ಯಕೋಟಿ ದತ್ತು ಯೋಜನೆ:**

ವೃದ್ಧ, ಕೊಡ್ಡು, ಗಂಡು ಕರುಗಳು ಮತ್ತು ಅಂಗವಿಕಲ ಹಸುಗಳು ಕೃಷಿಕರಿಗೆ ಹೊರೆಯಾಗುತ್ತವೆ. ಇಂತಹ ಹಸುಗಳನ್ನು ಪೋಷಿಸುವುದಕ್ಕಾಗಿ ದತ್ತು ತೆಗೆದುಕೊಳ್ಳುವಂತಹ ಪುಣ್ಯಕೋಟಿ ದತ್ತು





Downloaded From: www.kpscvaani.com

ಯೋಜನೆಯನ್ನು ಸರ್ಕಾರವು ಜಾರಿಗೆ ತಂದೆ. ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಗಳ ಪ್ರತಿ ಒಂದು ಜಾನುವಾರಿಗೆ ವಾರ್ಷಿಕ ರೂ.11,000/- (ಹನ್ನೊಂದು ಸಾವಿರ ಮಾತ್ರ)ಗಳನ್ನು ಪಾವತಿಸಿ ಜಾನುವಾರುಗಳಿಗಾಗಿ ಆಹಾರ ಪೂರೈಕೆಗೆ ಯೋಜನೆಯಡಿ ಸಾರ್ವಜನಿಕರು ದತ್ತು ಸ್ವೀಕರಿಸಬಹುದು. ತಮ್ಮ ಜೀವನದ ವಿಶೇಷ ಸಂದರ್ಭಗಳಲ್ಲಿ (ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ ಇತ್ಯಾದಿ) ಒಂದು ರಾಸುಗಳಿಗೆ ಒಂದು ದಿನಕ್ಕೆ 70 ರೂ.ಗಳನ್ನು ಗೋಶಾಲೆಗಳಿಗೆ ದೇಣಿಗೆ ಮತ್ತು ಗೋಶಾಲೆ ನಿರ್ವಹಣೆ ಯೋಜನೆಯಡಿ ಸಾರ್ವಜನಿಕರು ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಗಳಿಗೆ ಕನಿಷ್ಠ ರೂ.10/- ರಿಂದ ತಮ್ಮ ಶಕ್ತಾನುಸಾರ ಎಷ್ಟು ಬೇಕಾದರೂ ಮೂಲಭೂತ ಸೌಕರ್ಯ ಹಾಗೂ ಇತರೆ ವೆಚ್ಚಗಳಿಗಾಗಿ ದೇಣಿಗೆ ನೀಡಬಹುದು. ಈ ಯೋಜನೆಗೆ ದೇಣಿಗೆ ನೀಡುವವರಿಗೆ ಆದಾಯ ತೆರಿಗೆಯಲ್ಲಿ ವಿನಾಯಿತಿ ದೊರಕಲಿದೆ. ಈ ಯೋಜನೆಯನ್ನು ಇನ್ನು ಹೆಚ್ಚು ಜನಪ್ರಿಯಗೊಳಿಸಲು ಸರ್ಕಾರವು ನಟ ಕಿಚ್ಚ ಸುದೀಪ್ ಅವರನ್ನು 'ಪುಣ್ಯಕೋಟಿ ದತ್ತು ಯೋಜನೆ'ಯ ರಾಯಭಾರಿಯನ್ನಾಗಿಸಿದೆ.

**ಜಾನುವಾರುಗಳ ಚರ್ಮಗಂಟು ರೋಗ ಹತೋಟಿಗೆ ಕ್ರಮ:**

ಇತ್ತೀಚೆಗೆ ಕರ್ನಾಟಕ ರಾಜ್ಯದಲ್ಲಿ ಆಗಸ್ಟ್ 2022 ರ ಮಾಹೆಯಿಂದ ಇದುವರೆಗೆ 28 ಜಿಲ್ಲೆಗಳ 181 ತಾಲ್ಲೂಕುಗಳಲ್ಲಿನ 9053 ಗ್ರಾಮಗಳಲ್ಲಿ ಈ ರೋಗವು ಕಾಣಿಸಿಕೊಂಡಿತು. ಇದುವರೆಗೆ 122506 ಜಾನುವಾರುಗಳು ರೋಗಕ್ಕೆ ತುತ್ತಾಗಿದ್ದು, 67319 ಜಾನುವಾರುಗಳು ಚಿಕಿತ್ಸೆಯಿಂದ ಗುಣಮುಖ ಹೊಂದಿರುತ್ತವೆ. 8446 ಜಾನುವಾರುಗಳು ಸದರಿ ರೋಗದಿಂದ ಮರಣ ಹೊಂದಿದ್ದು, ನವೆಂಬರ್ ಮಾಹೆಯ ಅಂತ್ಯದವರೆಗೆ 29,46,597 ಜಾನುವಾರುಗಳಿಗೆ ಸದರಿ ರೋಗ ತಡೆಗಾಗಿ ಲಸಿಕೆಯನ್ನು ಹಾಕಲಾಗಿದೆ.

ರಾಜ್ಯದಲ್ಲಿ ಜಾನುವಾರುಗಳ ಚರ್ಮಗಂಟು ರೋಗವನ್ನು ಹತೋಟಿಗೆ ತರಲಾಗುತ್ತಿದೆ. ಚರ್ಮಗಂಟು ರೋಗವನ್ನು ನಿಯಂತ್ರಣಕ್ಕೆ ತರಲು ಬೇಕಾದ ಔಷಧ, ಚಿಕಿತ್ಸೆ ನೀಡಲಾಗುತ್ತಿದೆ. ರೋಗದ ಬಗ್ಗೆ ಗ್ರಾಮಗಳಲ್ಲಿ ಮುಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಬ್ಯಾನರ್, ಪೋಸ್ಟರ್‌ಗಳನ್ನು ವಿತರಿಸಲಾಗಿದೆ. ಭಾರತ ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ನು ಮತ್ತು ಚಿಕಿತ್ಸಾ ವಿಧಾನವನ್ನು ಪರಿಪಾಲನೆ ಮಾಡಲು ನಿರ್ದೇಶನ ನೀಡಲಾಗಿದೆ. ಇನ್ನು ಸದರಿ ರೋಗದಿಂದ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಪರಿಹಾರಧನ ವಿತರಿಸಲು ರಾಜ್ಯ ಸರ್ಕಾರದಿಂದ ನವೆಂಬರ್ ಮಾಹೆಯ ಅಂತ್ಯದವರೆಗೆ ಒಟ್ಟು ರೂ. 7.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಫಲಾನುಭವಿಗಳಿಗೆ 1,97,70,500 ರೂ ಪರಿಹಾರಧನವನ್ನು ವಿತರಿಸಲಾಗಿದೆ. ಉಳಿದ ಪರಿಹಾರ ಧನ ವಿತರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಚರ್ಮಗಂಟು ರೋಗವು ನೇರವಾಗಿ ಜಾನುವಾರುಗಳ ಉತ್ಪಾದಕತೆಯನ್ನು ಕುಂಠಿತಗೊಳಿಸುವುದರಿಂದ ರೈತರು ಹಾಗೂ ಜಾನುವಾರು ಮಾಲೀಕರ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವುದನ್ನು ತಡೆಗಟ್ಟಲು ಪರಿಹಾರ ನೀಡಲಾಗುತ್ತಿದೆ. ಜಾನುವಾರುಗಳ ಮರಣದಿಂದ ರೈತ/ಜಾನುವಾರು ಮಾಲೀಕರಿಗೆ ನಷ್ಟವನ್ನು ಭರಿಸಲು 2022ರ ಆಗಸ್ಟ್ 1 ರಿಂದ ಅನ್ವಯ ಆಗುವಂತೆ ಪ್ರತಿ ಹಸುವಿಗೆ ಗರಿಷ್ಠ 20000 ರೂ. ಮತ್ತು ಎತ್ತಿಗೆ 30000 ರೂ. ಹಾಗೂ ಪ್ರತಿ ಕರುವಿಗೆ 5000 ರೂ. ಪರಿಹಾರ ನೀಡಲಾಗುತ್ತಿದೆ..

**ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ:**

ಕುರಿಗಾಹಿಗಳು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳು ಆರ್ಥಿಕ ಬಲವರ್ಧನೆ ಮಾಡುವ ದಿಸೆಯಲ್ಲಿ ಇದೇ ಅಕ್ಟೋಬರ್ 30 ರಂದು ಈ ಯೋಜನೆಯನ್ನು ಸರ್ಕಾರವು ಘೋಷಣೆ ಮಾಡಿದೆ. ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ 2000 ಕುರಿಗಾಹಿ ಫಲಾನುಭವಿಗಳಿಗೆ ತಲಾ 20 ಕುರಿ ಮತ್ತು ಒಂದು ಮೇಕೆ ನೀಡಲು 1,75,000 ಮೊತ್ತದಂತೆ ಒಟ್ಟು 354 ಕೋಟಿ ರೂಗಳ ಅನುದಾನಕ್ಕೆ ಆದೇಶ ನೀಡಲಾಗಿದೆ. ಈ ಯೋಜನೆಯ ಘಟಕ ವೆಚ್ಚವಾದ ರೂ 1.75 ಲಕ್ಷದಲ್ಲಿ ಶೇಕಡ 50 ರಷ್ಟು ಹಣವನ್ನು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಿಂದ ಸಾಲವಾಗಿ ನೀಡಲಾಗುತ್ತದೆ. ಶೇಕಡ 25 ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಸಹಾಯಧನ ರೂಪದಲ್ಲಿ ನೀಡುತ್ತದೆ. ಉಳಿದ ಶೇಕಡ 25 ರಷ್ಟು ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.

ರೈತರು ಮನೆಯಲ್ಲಿಯೇ ಕುಳಿತು ಪಶುಗಳ ಪಾಲನೆ ಹಾಗೂ ವಿವಿಧ ಯೋಜನೆಯ ಕುರಿತು ಮಾಹಿತಿ ಪಡೆಯಬಹುದು. ಇದಕ್ಕಾಗಿ ರೈತರು ಯಾವುದೇ ಶುಲ್ಕ ಪಾವತಿಸಬೇಕಿಲ್ಲ. ಎಲ್ಲವೂ ಉಚಿತವಾಗಿರುತ್ತದೆ. ರೈತರು 8277100200 ನಂಬರಿಗೆ ಕರೆ ಮಾಡಿದರೆ ಸಾಕು, ಅಗತ್ಯ ಮಾಹಿತಿಯನ್ನು ಪಡೆಯಬಹುದು. ಈ ಉಚಿತ ಸಹಾಯವಾಣಿಯು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದೆ. ಪಶುಸಂಗೋಪನಾ ಚಟುವಟಿಕೆಯಲ್ಲಿ ನಿರತರಾಗಿರುವ ರೈತರು ಯಾವುದೇ ಸಮಯದಲ್ಲಿ ಕರೆ ಮಾಡಿ ಸಹಾಯವಾಣಿಯಲ್ಲಿ ಕಾರ್ಯನಿರ್ವಹಿಸುವ ಪಶುವೈದ್ಯರು ಮತ್ತು ಇತರೆ ವಿಷಯ ತಜ್ಞರಿಂದ ಅಗತ್ಯ ಮಾಹಿತಿಗಳನ್ನು ಪಡೆಯಬಹುದು.



ಪಶುಸಂಗೋಪನಾ ಸಚಿವರು ಮುಖ್ಯಮಂತ್ರಿ ಅವರೊಂದಿಗೆ ಸಭೆಯಲ್ಲಿ ಭಾಗವಹಿಸಿರುವುದು.


Downloaded From: www.kpscvaani.com



# ಕುರಿ ಸಾಕಾಣಿಕೆಯಲ್ಲಿ ಬದುಕು ಕಂಡುಕೊಂಡ

# ಪದವೀಧರ ಮಹಿಳೆ

**ಶ್ವೇತಾ. ಜಿ**

**ಹೊಸದುರ್ಗ ತಾಲ್ಲೂಕಿನ ಸ್ನಾತಕೋತ್ತರ ಪದವೀಧರೆ ಶ್ವೇತಾ ಈಶ್ವರ್ ಅವರು ಕುರಿ ಸಾಕಾಣಿಕೆಯಲ್ಲಿ ಆರು ತಿಂಗಳಿಗೊಮ್ಮೆ ನಾಲ್ಕು ಲಕ್ಷ ರೂಗಳವರೆಗೆ ಆದಾಯಗಳಿಸುತ್ತಿದ್ದಾರೆ.**

ಆಕೆ ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯನ್ನು ಹೊಂದಿರುವಾಕೆ. ಆದರೆ ಆಕೆಗೆ ಓದಿಗೆ ತಕ್ಕ ಕೆಲಸ ಸಿಗಲಿಲ್ಲ. ನನ್ನ ಓದಿಗೆ ತಕ್ಕ ಕೆಲಸವನ್ನು ಮಾತ್ರ ಮಾಡೋದು ಎನ್ನುವವರ ಮಧ್ಯೆ ಈ ಸ್ವಾಭಿಮಾನಿ ಮಹಿಳೆ ಕುರಿ ಸಾಕಣೆಗೆ ಮುಂದಾದರು. ಈಗ ಅವರು ಕುರಿ ಸಾಕಣೆಯಿಂದ 6 ತಿಂಗಳಿಗೆ ಲಕ್ಷಗಟ್ಟಲೆ ಲಾಭ ಗಳಿಸುತ್ತಾ ಇತರರಿಗೆ ಸ್ಫೂರ್ತಿಯಾಗಿದ್ದಾರೆ. ಆ ಸ್ವಾಭಿಮಾನಿ ಮಹಿಳೆಯೇ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಐಲಾಪುರ ಗ್ರಾಮದ ಶ್ವೇತಾ ಈಶ್ವರ್.

ಇದಕ್ಕೂ ಮೊದಲು ಶ್ವೇತಾ ಈಶ್ವರ್ ಅವರು ಒಂದು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇವರಿಗೆ ಕೋವಿಡ್ ಸಮಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗೆ ಹೋಗುವ ಅನಿವಾರ್ಯತೆ ಎದುರಾಗಿತ್ತು. ಎರಡು ಮಕ್ಕಳನ್ನು ಸಾಕುತ್ತಾ, ಕೆಲಸ ನಿರ್ವಹಿಸುತ್ತಿದ್ದ ಇವರಿಗೆ ತಮ್ಮ ಕೆಲಸದಲ್ಲಿ ಒತ್ತಡ ಹೆಚ್ಚಾಯಿತು. ಹಾಗಾಗಿ ಕುಟುಂಬಸ್ಥರಿಗೆ ಸಮಯ ಕೊಡಲು ಆಗುತ್ತಿರಲಿಲ್ಲ. ಹಾಗಾಗಿ ಕೆಲಸಕ್ಕೆ ರಾಜಿನಾಮೆ ನೀಡಿದ ಅವರು, ಸ್ವಂತ ಉದ್ಯೋಗ ಮಾಡುವ ಆಲೋಚನೆಯಲ್ಲಿದ್ದರು.

ಪತಿಯ ಸಲಹೆ ಮೇರೆಗೆ ಚಿಕ್ಕದಾಗಿ ಕುರಿ ಸಾಕಾಣಿಕೆ ಮಾಡಲು ಆರಂಭಿಸಿದರು. ಮೊದಲಿಗೆ ಈ ಕೆಲಸಕ್ಕಾಗಿ ಕೂಲಿಕಾರ್ಮಿಕರನ್ನು ನೇಮಿಸಿಕೊಂಡಿದ್ದರು. ಸರಿಯಾದ ನಿರ್ವಹಣೆಯಿಲ್ಲದೆ ಒಂದೆರಡು ಕುರಿಗಳು ಸಾವನ್ನಪ್ಪಿದವು. ಆಗ ಇವರಿಗೆ ತಾವೇ ಇದರ ನಿರ್ವಹಣೆ ಮಾಡಿದರೆ ಒಳಿತು ಎಂದು ಅನಿಸಿತು. ಕೆಲಸಕ್ಕೆ ಇಟ್ಟುಕೊಂಡಿದ್ದವರನ್ನು ಬಿಡಿಸಿ ಪತಿಯ ಸಹಕಾರದಿಂದ ತಾವೇ ಕುರಿ ಸಾಕಾಣಿಕೆಯ



Downloaded From: www.kpscvaani.com

ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡರು. 2020 ರಲ್ಲಿ 115 ಕುರಿ ಸಾಕಾಣಿಕೆ ಮಾಡುವ ಮೂಲಕ ತಮ್ಮ ಕಾರ್ಯ ಆರಂಭಿಸಿದರು. ಮೊದಲ ಬಾರಿಗೆ ಈ ಕೆಲಸಕ್ಕೆ ಕೈ ಹಾಕಿದ್ದರಿಂದ ನಿರೀಕ್ಷೆಯಷ್ಟು ಲಾಭ ದೊರೆಯಲಿಲ್ಲ. ಆದರೂ ಛಲ ಬಿಡದೆ ಇದೇ ಕಾಯಕ ಮುಂದುವರೆಸಿದರು.

ಸುಮಾರು ರೂ. 13 ಲಕ್ಷ ಬಂಡವಾಳ ಹಾಕಿ, ಉತ್ತಮ ಶೆಡ್, ಕಟಾವು ಯಂತ್ರ, ಮೇವು ಸಂಗ್ರಹಣಾ ಕೋಣೆ ಹೀಗೆ ಹತ್ತು ಹಲವು ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುವುದರ ಮೂಲಕ ಕುರಿಗಳಿಗೆ ಸುಸಜ್ಜಿತ ವಾತಾವರಣ ನೀಡಲಾಯಿತು. ಕಳೆದ 6 ತಿಂಗಳ ಹಿಂದೆ 112 ಕುರಿ ಸಾಕಾಣಿಕೆಗಾಗಿ ಮೇವು, ಔಷಧಿ ಸೇರಿದಂತೆ ಅವರು ರೂ. 7.5 ಲಕ್ಷ ವೆಚ್ಚ ಮಾಡಿದ್ದರು. ಬೆಂಗಳೂರಿನ ವರ್ತಕರು ತೂಕದ ಲೆಕ್ಕದಲ್ಲಿ ಅಷ್ಟು ಕುರಿಗಳನ್ನು ರೂ. 11.5 ಲಕ್ಷ ಕ್ಕೆ ಖರೀದಿಸಿದರು. 6 ತಿಂಗಳಲ್ಲಿ 4 ಲಕ್ಷ ಲಾಭ ಗಳಿಸಲಾಯಿತು. ಯಾವುದೇ ಒತ್ತಡವಿಲ್ಲದೇ ಯಾರ ಹಂಗಿಗೂ ಒಳಗಾಗದೇ ಈ ಕಾಯಕ ಮಾಡುತ್ತಿರುವುದು ಮನಸ್ಸಿಗೆ ನೆಮ್ಮದಿ ನೀಡುತ್ತಿದೆ ಎನ್ನುತ್ತಾರೆ ಶ್ವೇತಾ ಈಶ್ವರ್.

ಆರು ತಿಂಗಳಿಗೊಮ್ಮೆ ಇವರು ಬಾಗಲಕೋಟೆ ಜಿಲ್ಲೆಯ ಅಮೀನಗಡ ಅಥವಾ ಕೆರೂರು ಸಂತೆಯಿಂದ ಯಳಗ ತಳಿಯ ಕುರಿಗಳನ್ನು ಖರೀದಿಸುತ್ತಾರೆ. ಈ ತಳಿ ಕುರಿಗಳು ಈ ಭಾಗದ ವಾತಾವರಣಕ್ಕೆ ಹೊಂದಿಕೊಳ್ಳುತ್ತವೆ. ಹೆಚ್ಚಾಗಿ ಟಗರುಗಳನ್ನೇ ಕೊಂಡುಕೊಳ್ಳೋದು. ಕುರಿಗಳನ್ನು ಸಾಕುವ ಆಧಾರದ ಮೇಲೆ ಕನಿಷ್ಟ ಒಂದು ಕುರಿಗೆ 5 ರಿಂದ 8 ಸಾವಿರ ರೂಗಳವರೆಗೆ ಬೆಲೆ ಸಿಗುತ್ತದೆ. ಆಸಕ್ತಿಯಿದ್ದರೆ ಎಲ್ಲಾ ಕೆಲಸಗಳೂ ಸಾಧ್ಯವಾಗುತ್ತದೆ ಎಂಬುದಕ್ಕೆ ಶ್ವೇತಾ ಅವರೇ ಉತ್ತಮ ಉದಾಹರಣೆ. ಶ್ವೇತಾ ಕೂಡ ಹೆಚ್ಚಿನ ಆಸಕ್ತಿಯಿಂದ ಕುರಿ ಸಾಕಣೆಯನ್ನು ಮಾಡುತ್ತಿದ್ದಾಳೆ, ಅದಕ್ಕೆ ಸಹಕಾರ ನೀಡುವುದಷ್ಟೇ ನನ್ನ ಕಾಯಕ ಎನ್ನುತ್ತಾರೆ ಶ್ವೇತಾ ಅವರ ಪತಿ ಈಶ್ವರ್.

ನಿತ್ಯ ಬೆಳಿಗ್ಗೆ ಕುರಿಗಳನ್ನು ಶೆಡ್‌ನಿಂದ ಹೊರಗೆ ಬಿಟ್ಟು ಶೆಡ್ ಸ್ವಚ್ಛತೆಯ ನಂತರ ಪುನಃ ಕುರಿಗಳನ್ನು ಒಳಗೆ ಬಿಡಲಾಗುತ್ತದೆ. ಅಲ್ಲೇ ಮೇವು ಮತ್ತು ನೀರಿನ ಸೌಲಭ್ಯವನ್ನು ಒದಗಿಸಲಾಗಿರುವುದರಿಂದ ಅವುಗಳು ಬೇಕಾದಾಗ ಮೇವನ್ನು ತಿನ್ನುತ್ತವೆ. ಕುರಿಗಳಿಗೆ ಸಾಮಾನ್ಯವಾಗಿ ಶೇಂಗಾ, ರಾಗಿ ಕಡ್ಡಿಗಳನ್ನು ಪುಡಿ ಮಾಡಿ ನೀಡಲಾಗುತ್ತದೆ. ಜೊತೆಗೆ ಗುಲ್ಬರ್ಗಾದಿಂದ ಎಲ್ಲಾ ಕಾಳುಗಳಿಂದ ಮಾಡಿರುವ ಮಿಶ್ರಿತ

**ಮಹಿಳೆಯರು ಸುಮ್ಮನೆ ಹರಟುತ್ತಾ ಕಾಲ ಕಳೆಯುವ ಬದಲು ಯಾವುದಾದರೊಂದು ಉದ್ಯೋಗ ಆರಂಭಿಸಿ, ಮನಸ್ಸಿಗೆ ನೆಮ್ಮದಿಯಾಗುವುದರ ಜೊತೆಗೆ ನಮ್ಮ ಆದಾಯದ ಮೂಲವನ್ನು ಕಂಡುಕೊಳ್ಳಬಹುದು. ಕುರಿ ಸಾಕಾಣಿಕೆಯಿಂದ ಲಾಭವೇ ಹೊರತು, ನಷ್ಟವಿಲ್ಲ. ಓದು ಬದುಕಿಗೆ ದಾರಿ ತೋರಿಸುತ್ತದೆ. ಓದಿಗೆ ಇಂತದ್ದೇ ಕೆಲಸ ಎಂಬುದಿಲ್ಲ. ಕಾಯಕ ಯಾವುದಾದರೇನು ನಿಷ್ಠೆಯಿಂದ ಮಾಡಬೇಕು.**

**–ಶ್ವೇತಾ ಈಶ್ವರ್**



ಮೇವನ್ನು ತರಿಸಿಕೊಂಡು ನಿತ್ಯವೂ ಕುರಿಗಳಿಗೆ ನೀಡಲಾಗುತ್ತದೆ. ಅಲ್ಲದೆ ತಮ್ಮ ಭೂಮಿಯಲ್ಲಿ ಕುರಿಗಳಿಗೆ ಸಾಕಾಗುವಷ್ಟು ಮೇವನ್ನು ಇವರು ಬೆಳೆದುಕೊಂಡಿದ್ದಾರೆ.


ಕುರಿಗಳು ಅನಾರೋಗ್ಯಕ್ಕೆ ಒಳಗಾದರೆ, ಅವು ಮೇವು ತ್ಯಜಿಸುತ್ತವೆ. ಕೂಡಲೇ ಸೂಕ್ತ ಚಿಕಿತ್ಸೆ ಕೊಡಿಸುವುದರಿಂದ ಅವು ಬೇಗನೇ ಚೇತರಿಸಿಕೊಳ್ಳುತ್ತವೆ. ಆರೋಗ್ಯ ಸರಿಯಿಲ್ಲದ ಕುರಿಗಳನ್ನು 15 ದಿನ ಪ್ರತ್ಯೇಕವಾಗಿಡಲಾಗುತ್ತದೆ. ವಾರಕ್ಕೊಮ್ಮೆ ಕುರಿಗಳನ್ನು ತೂಕ ಮಾಡಿ ಅವುಗಳ ತೂಕದ ಆಧಾರದ ಮೇರೆಗೆ ಮೇವು ನೀಡಲಾಗುತ್ತದೆ. ಕಡಿಮೆ ತೂಕವಿರುವ ಕುರಿಗಳಿಗೆ ಹೆಚ್ಚಿನ ಮೇವು ಒದಗಿಸಲಾಗುತ್ತದೆ. ಈ ಬಾರಿ 65 ಕುರಿಗಳನ್ನು ಸಾಕಾಣಿಕೆ ಮಾಡಲಾಗಿದ್ದು, ಫೆಬ್ರವರಿಗೆ ಮಾರಾಟ ಮಾಡಲಾಗುತ್ತದೆ. ಕುರಿಗಳು ಉತ್ಕೃಷ್ಟವಾಗಿ ಬೆಳೆದಿರುವುದರಿಂದ 4 ಲಕ್ಷ ರೂಗಳಷ್ಟು ಲಾಭ ಬರುವ ನಿರೀಕ್ಷೆಯಿದ್ದು, ಮುಂದೆ 200–250 ಕುರಿ ಸಾಕಾಣಿಕೆ ಮಾಡುವ ಆಸಕ್ತಿಯಿದೆ ಎನ್ನುತ್ತಾರೆ ಶ್ವೇತಾ ಈಶ್ವರ್.

ಕುರಿ ಗೊಬ್ಬರಕ್ಕೂ ಬೇಡಿಕೆ : ಕೇವಲ ಕುರಿಗೆ ಮಾತ್ರವಲ್ಲ, ಕುರಿ ಗೊಬ್ಬರಕ್ಕೂ ಅಪಾರ ಬೇಡಿಕೆಯಿದೆ. ಅಡಿಕೆ ತೋಟಕ್ಕೆ ಕುರಿಗೊಬ್ಬರವೇ ಯೋಗ್ಯವಾದುದು. ಹಾಗಾಗಿ ಗೊಬ್ಬರ ಖರೀದಿಸಲು ಚಿಕ್ಕಮಗಳೂರು ಜಿಲ್ಲೆಯಿಂದ ಇಲ್ಲಿಗೆ ಬರುತ್ತಾರೆ. ಜಿಲ್ಲೆಯಾದ್ಯಂತ ಹಲವಾರು ಜನ ಅಡಿಕೆ ತೋಟದತ್ತ ಮುಖಮಾಡಿರುವುದರಿಂದ ಇಲ್ಲೂ ಅಪಾರ ಬೇಡಿಕೆಯಿದೆ. ಈ ಬಾರಿ ತಮ್ಮ ಜಮೀನುಗಳಿಗೆ ಗೊಬ್ಬರ ಹಾಕಲಾಗಿದೆ. ಮುಂದಿನ ದಿನಗಳಲ್ಲಿ ಮಾರಾಟ ಮಾಡಲಾಗುತ್ತದೆ ಎನ್ನುತ್ತಾರೆ ಶ್ವೇತಾ ದಂಪತಿಗಳು.

ಒಟ್ಟಿನಲ್ಲಿ ಯಾರ ಹಂಗಿಗೂ ಒಳಗಾಗದೇ ಸ್ವಂತವಾಗಿ ಕುರಿ ಸಾಕಣಿಕೆ ಉದ್ಯೋಗ ಆರಂಭಿಸಿ, ಇತರರಿಗೆ ಸ್ಫೂರ್ತಿಯಾಗಿದ್ದಾರೆ ಶ್ವೇತಾ ಈಶ್ವರ್ ದಂಪತಿಗಳು.


Downloaded From: www.kpscvaani.com







# ಬಯಲುಸೀಮೆ ನಾಡಲ್ಲೊಂದು

# ಕಾಫಿ ತೋಟ

**ಮಲೆನಾಡಿನ ಪ್ರಮುಖ ಬೆಳೆಯಾದ ಕಾಫಿಯನ್ನು ಬಯಲುಸೀಮೆ ನಾಡಲ್ಲೂ ಬೆಳೆದು ಯಶಸ್ವಿಯಾಗಿರುವ ಹೂವಿನಹಡಗಲಿಯ ಸಿದ್ಧಲಿಂಗಪ್ಪ ಬಸಪ್ಪ.**

● ಜಿ. ಚಂದ್ರಕಾಂತ


ಕಾಫಿ ಪ್ರಪಂಚದ ಬಹುಪಾಲು ಜನರ ಅತ್ಯಂತ ಜನಪ್ರಿಯವಾದ ಪೇಯ ಎಂದರೆ ತಪ್ಪಾಗಲಾರದು. ಕಾಫಿ ಎಂದರೆ ನಮ್ಮ ಕರುನಾಡು ಜನರಿಗೆ ಮಲೆನಾಡು ನೆನಪಾಗುತ್ತದೆ. ಕಾಫಿ ಮಲೆನಾಡಿನ ಪ್ರಮುಖ ಬೆಳೆ. ಸಾಮಾನ್ಯವಾಗಿ ಕಾಫಿಯನ್ನು ಕರ್ನಾಟಕದ ಮಲೆನಾಡಿನಲ್ಲಿಯೇ ಬೆಳೆಯಲಾಗುತ್ತದೆ. ಆದರೆ ಕಾಫಿಯನ್ನು ಬಯಲುಸೀಮೆ ನಾಡಲ್ಲೂ ಬೆಳೆಯಬಹುದೆಂದು ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಕೊಂಬಳಿ ಗ್ರಾಮದ ದೊಡ್ಡ ರೈತ ಗಡ್ಡಿ ಸಿದ್ಧಲಿಂಗಪ್ಪ ಬಸಪ್ಪ ಅವರು  ಸಾಬೀತು ಪಡಿಸಿದ್ದಾರೆ.

ರೈತ ಸಿದ್ಧಲಿಂಗಪ್ಪ ಬಸಪ್ಪ ಅವರದು ಅವಿಭಕ್ತ ಕುಟುಂಬ. ಕೃಷಿಯನ್ನೇ ಮುಖ್ಯ ಕಸುಬಾಗಿಸಿಕೊಂಡಿರುವ ಇವರು ತಮ್ಮ ಸುಮಾರು 80 ಎಕರೆ ಜಮೀನಿನಲ್ಲಿ ಕೃಷಿ ಕಾರ್ಯದಲ್ಲಿ ತೊಡಗಿದ್ದಾರೆ. ವಯಸ್ಸು 83 ಆದರೂ ಉತ್ಸಾಹ ಮಾತ್ರ ಇನ್ನೂ ಹರೆಯದ ಹುಡುಗನಂತಿದೆ. ಇವರು ಅಡಿಕೆ ಸಸಿಗಳನ್ನು ಖರೀದಿಸಲು ಶಿವಮೊಗ್ಗದ ಕೃಷ್ಣ ನರ್ಸರಿಗೆ ಹೋದಾಗ ನರ್ಸರಿಯಲ್ಲಿ ಕಾಫಿ ಸಸಿಗಳನ್ನು ನೋಡಿದ್ದಾರೆ. ನರ್ಸರಿಯವರಿಂದ ಕಾಫಿ ಸಸಿಯ ಕುರಿತು ಮಾಹಿತಿ ಮತ್ತು ಪ್ರೇರಣೆ ಪಡೆದು ಮಲೆನಾಡಿನಲ್ಲಿ ಬೆಳೆಯುವ



Downloaded From: www.kpscvaani.com



ಕಾಫಿಯನ್ನು ಬಯಲುಸೀಮೆ ನಾಡಾದ ತಮ್ಮ ಊರಲ್ಲಿಯೂ ಬೆಳೆಸುವ ಎಂದು ನಿರ್ಧರಿಸಿದರು.

ಇದಕ್ಕಾಗಿ ಮೊದಲು ಅವರು ಒಟ್ಟು 8 ಎಕರೆ ಭೂಮಿಯನ್ನು ಚೆನ್ನಾಗಿ ಹದಗೊಳಿಸಿದರು. ನಂತರ ಶಿವಮೊಗ್ಗದ ಕೃಷ್ಣ ನರ್ಸರಿಯಿಂದ ರೋಬಸ್ಟ್ ತಳಿಯ 4000 ಕಾಫಿ ಸಸಿಗಳನ್ನು ತಲಾ 8ರೂ. ನಂತೆ ಖರೀದಿಸಿದರು. ಸಾವಯವ ಕೃಷಿ ಮತ್ತು ಕೊಳವೆಬಾವಿಯಿಂದ ಹನಿ ನೀರಾವರಿ ಅಳವಡಿಸಿಕೊಂಡು 2018ರ ಜುಲೈ ತಿಂಗಳಲ್ಲಿ ಸಸಿಯಿಂದ ಸಸಿಗೆ ಮತ್ತು ಸಾಲಿನಿಂದ ಸಾಲಿಗೆ 8 ಅಡಿ ಅಂತರದಲ್ಲಿ ನಾಟಿ ಮಾಡಿದರು.

ಕಾಫಿ ಬೆಳೆಗೆ ವಾರದಲ್ಲಿ 3 ದಿನ ನೀರುಣಿಸಿ, ಕಾಲಕಾಲಕ್ಕೆ ಜೈವಿಕ ಗೊಬ್ಬರ, ಔಷಧಿಗಳನ್ನು ಸಿಂಪಡಿಸುತ್ತಾ ಬೆಳೆಯ ಸಂರಕ್ಷಣೆ ಮಾಡುತ್ತಾ ಬಂದರು. ಮೂರು ವರ್ಷಗಳ ಸತತ ಪರಿಶ್ರಮದಿಂದಾಗಿ ಅವರ ಜಮೀನಿನಲ್ಲಿ ಇಂದು ಕಾಫಿ ತೋಟವು ಸೊಂಪಾಗಿ ಬೆಳೆದು ನಿಂತಿದೆ. ಅವರಿಗೆ 2021ರಲ್ಲಿ ಮೊದಲ ಬೆಳೆಯ ಇಳುವರಿ 11 ಕ್ವಿಂಟಲ್ ಬಂದಿದೆ. ಮೂಡಿಗೆರೆ, ಚಿಕ್ಕಮಗಳೂರು ಮಾರಾಟ ಕೇಂದ್ರಗಳಲ್ಲಿ ಪ್ರತಿ ಕ್ವಿಂಟಾಲ್‌ಗೆ 11000 ರೂ.ದಂತೆ ಕಾಫಿ ಬೀಜಗಳನ್ನು ಮಾರಾಟ ಮಾಡಿ 1.21 ಲಕ್ಷ ರೂ. ಪಡೆದಿದ್ದಾರೆ. ಆದರೆ ಅವರು ಈ ವರ್ಷ 15–20 ಕ್ವಿಂಟಲ್ ಕಾಫಿ ಬೀಜದ ಇಳುವರಿಯನ್ನು ನಿರೀಕ್ಷಿಸಿದ್ದಾರೆ.

ಸಾಮಾನ್ಯವಾಗಿ ಹೂವಿನಹಡಗಲಿ, ಹರಪನಹಳ್ಳಿ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನ ಕೂಲಿಕಾರ್ಮಿಕರು ಕೆಲಸ ಅರಸಿಕೊಂಡು ಕಾಫಿ ತೋಟ ಮತ್ತು ಕಬ್ಬು ಬೆಳೆಯುವ ಪ್ರದೇಶಗಳಿಗೆ ವಲಸೆ ಹೋಗುತಿದ್ದರು. ಅಂತಹ ಕೆಲವರಿಗೆ ಇವರ ಈ ತೋಟ ಒಂದು ವರದಾನವಾಯಿತು. ಸದ್ಯ ಇವರ ತೋಟದಲ್ಲಿ ಒಟ್ಟು 10 ಕಾರ್ಮಿಕರು ಖಾಯಂ ಆಗಿ ಕೆಲಸ ಮಾಡುತ್ತಿದ್ದಾರೆ. ರೋಬಸ್ಟ್ ತಳಿಯ ಜೊತೆಗೆ 5 ವರ್ಷದ ಬೆಳೆಯಾದ ತೀರ್ಥಹಳ್ಳಿ ತಳಿಯ 4000 ಅಡಿಕೆ ಸಸಿಗಳನ್ನು ಬೆಳೆಸುತ್ತಿದ್ದಾರೆ. ನೆರಳಿಗಾಗಿ ಕಾಫಿ ತೋಟದ ಸುತ್ತಲೂ 300 ಸಾಗುವಾನಿ ಗಿಡಗಳನ್ನು ಬೆಳೆಸಿದ್ದಾರೆ.

ಹನಿ ನೀರಾವರಿಯಿಂದ ಬೆಳೆಯ ಬುಡಕ್ಕಷ್ಟೇ ನೀರು ಹನಿಯುವುದರಿಂದ ಕಳೆ ಸಮಸ್ಯೆ ಕಂಡುಬಂದಿಲ್ಲ. ಹೂವಿನಹಡಗಲಿ ತಾಲೂಕಿನ ಹವಾಗುಣಕ್ಕೆ ಕಾಫಿ ಹೊಸ ಬೆಳೆಯಾಗಿದೆ. ನೆರಳು ಆಧಾರಿತ ಮತ್ತು ಶಾಶ್ವತ ನೀರಾವರಿ ಮೂಲವಿರುವ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯಬಹುದೆಂಬುದು ತೋಟಗಾರಿಕೆ ಅಧಿಕಾರಿಗಳ ಅಭಿಪ್ರಾಯವಾಗಿದೆ.

ಅವರು ತಮ್ಮ ಉಳಿದ ಭೂಮಿಯಲ್ಲಿ ಮಕ್ಕೆಜೋಳ, ಕಬ್ಬು, ಭತ್ತವನ್ನು ಬೆಳೆದು ವಾರ್ಷಿಕ 20–30 ಲಕ್ಷ ರೂ. ಆದಾಯವನ್ನು ಪಡೆಯುತ್ತಿದ್ದಾರೆ. ಇವರ ಪ್ರಯೋಗಶೀಲತೆಯ ಪರಿಣಾಮದಿಂದ ಬಯಲುಸೀಮೆಯ ನಾಡಾದ ಕೊಂಬಳಿಯಲ್ಲೇ ಮಲೆನಾಡಿನ ಕಾಫಿ ತೋಟ ಮಾಡುವ ಕನಸು ಸಾಕಾರಗೊಂಡಿದೆ. ಸಿದ್ಧಲಿಂಗಪ್ಪ ಅವರು ವಯೋಸಹಜದ ಕಾರಣ ಈಗ ಸಂಪೂರ್ಣವಾಗಿ ಕೃಷಿ ನಿರ್ವಹಣೆಯನ್ನು ತಮ್ಮ ಮಕ್ಕಳಾದ ಗುಡ್ಡಪ್ಪ, ಮಹೇಶ, ರಮೇಶ ಮತ್ತು ಬಸವರಾಜ ಅವರ ಹೆಗಲಿಗೆ ಹಸ್ತಾಂತರಿಸಿ, ಸಲಹೆ ಸೂಚನೆಗಳನ್ನು ನೀಡುತ್ತಾ ಕೂಡು ಕುಟುಂಬದಲ್ಲಿ ಆನಂದದಿಂದ ಜೀವನ ನಡೆಸುತ್ತಿದ್ದಾರೆ. ಇವರ ಸಂಪರ್ಕ ಸಂಖ್ಯೆ 9901225519.



Downloaded From: www.kpscvaani.com




# ಸ್ವಾವಲಂಬಿ ಕರ್ನಾಟಕಕ್ಕಾಗಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು

**ಕರ್ನಾಟಕಕ್ಕೆ ನುರಿತ ಕೌಶಲ್ಯಭರಿತ ಮಾನವ ಶಕ್ತಿ ಅಗತ್ಯವಿದೆ. ಜೀವನೋಪಾಯ ರೂಪಿಸುವ ಸರ್ಕಾರದ ಕಾರ್ಯಕ್ರಮಗಳು ದೇಶದ ಗಮನ ಸೆಳೆಯುತ್ತಿವೆ. ತಾಂತ್ರಿಕ ಜಗತ್ತಿನಲ್ಲಿ ಸ್ಪರ್ಧಾತ್ಮಕವಾಗಿ ಬೆಳೆಯಲು ಕೌಶಲ್ಯ ಅತ್ಯಂತ ಮಹತ್ವದ್ದಾಗಿದೆ. ಪ್ರಗತಿಗೆ ಕೌಶಲ್ಯ ಅಳತೆಗೋಲಷ್ಟೇ ಅಲ್ಲ, ಅಭ್ಯುದಯದ ದಿಕ್ಸೂಚಿಯೂ ಆಗಿದೆ. ಸ್ವಾವಲಂಬಿ ಬದುಕಿಗೆ ಕುಶಲತೆ ರಹದಾರಿ. ಕೌಶಲ್ಯ ಹಾಗೂ ಜ್ಞಾನ, ದೇಶದ ಆರ್ಥಿಕ ಬೆಳವಣಿಗೆಗೆ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಚಾಲನಾ ಶಕ್ತಿ. ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಯುವ ಸಮೂಹಕ್ಕೆ ಅಗತ್ಯ ತರಬೇತಿ ನೀಡಿ ಸೂಕ್ತ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ.**





ನಂಜುಂಡಪ್ಪ. ವಿ.

ಕೈಗಾರಿಕಾ ಕ್ಷೇತ್ರಕ್ಕೆ ಹೆಚ್ಚು ಮನ್ನಣೆ ನೀಡಿದ ರಾಜ್ಯ ಕರ್ನಾಟಕ. ಇಲ್ಲಿನ ಭೌಗೋಳಿಕ ಪರಿಸ್ಥಿತಿ, ನೈಸರ್ಗಿಕ ಸಂಪನ್ಮೂಲ, ನುರಿತ ಮಾನವ ಶಕ್ತಿ ಜತೆಗೆ ನೂತನ ಕೈಗಾರಿಕಾ ನೀತಿ ಕೈಗಾರಿಕಾ ಕ್ರಾಂತಿಗೆ ಪೂರಕವಾಗಿದೆ. ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ ಹಾಗೂ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಗಳ ಮೂಲಕ ಕೌಶಲ್ಯಾಧಾರಿತ ತರಬೇತಿ ನೀಡಲಾಗುತ್ತಿದೆ.

ಉದ್ಯಮ ಆಧಾರಿತ ಕೌಶಲ್ಯ ತರಬೇತಿ ಪಡೆಯಲು ಹಾಗೂ ಉತ್ತಮ ಜೀವನ ರೂಪಿಸಿಕೊಳ್ಳಲು ಪ್ರಧಾನಮಂತ್ರಿ ವಿಕಾಸ ಯೋಜನೆಯು ನೆರವಾಗುತ್ತದೆ. ಪೂರ್ವ ಕಲಿಕಾ ಅನುಭವ ಅಥವಾ ಕೌಶಲ್ಯ ಹೊಂದಿರುವವರನ್ನು ಗುರುತಿಸುವ, ಶಾಲಾ ಕಾಲೇಜುಗಳ ಹಂತದಲ್ಲೇ ಅಧ್ಯಯನದಿಂದ ದೂರವಾಗಿರುವ ನಿರುದ್ಯೋಗಿಗಳಿಗೆ ಅಲ್ಪಾವಧಿ ತರಬೇತಿ, ಮೃದು ಕೌಶಲ್ಯ, ಉದ್ಯಮ ಶೀಲತೆ, ಹಣಕಾಸು ಮತ್ತು ಡಿಜಿಟಲ್ ಸಾಕ್ಷರತೆ ವಲಯದಲ್ಲೂ ತರಬೇತಿ ನೀಡಲಾಗುತ್ತಿದೆ.



Downloaded From: www.kpscvaani.com

ಇನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯು ಅಸಂಖ್ಯಾತ ಯುವ ಸಮೂಹಕ್ಕೆ ಆಸರೆಯಾಗಿದೆ. ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳಿಗೆ 102 ರೀತಿಯ ಜಾಬ್ ರೋಲ್‌ಗಳಲ್ಲಿ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಮುಖಾಂತರ ತರಬೇತಿ ನೀಡಲಾಗಿದೆ.

ಕೌಶಲ್ಯ ಸಂಪರ್ಕ ಪೋರ್ಟಲ್ – ಸ್ಕಿಲ್ ಕನೆಕ್ಟ್ ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರ ನಡುವೆ ಸಂಪರ್ಕ ಸೇತುವಾಗಿದೆ. ಕೌಶಲ್ಯ ತರಬೇತಿ ಮತ್ತು ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ವಿವಿಧ ಪಾಲುದಾರರನ್ನು ಜೋಡಿಸಲು ಕೌಶಲ್ಯಾಭಿವೃದ್ಧಿ ನಿಗಮದಿಂದ ಕೌಶಲ್ಯ ಸಂಪರ್ಕ ವೇದಿಕೆಯನ್ನು ಸ್ಥಾಪಿಸಲಾಗಿದೆ. ಸ್ಕಿಲ್ ಕನೆಕ್ಟ್ ಪೋರ್ಟಲ್ ಮುಖಾಂತರ ಉದ್ಯೋಗದಾತರು ಹಾಗೂ ಉದ್ಯೋಗಾಕಾಂಕ್ಷಿಗಳನ್ನು ಒಂದೆಡೆ ಸೇರಿಸಿ ವರ್ಚುವಲ್ ಮೂಲಕವೂ ಉದ್ಯೋಗ ಮೇಳ ನಡೆಸಲಾಗುತ್ತಿದೆ. ಇಂಡಸ್ಟ್ರಿ ಕನೆಕ್ಟ್ ಎಂಬ ವಿನೂತನ ಕಾರ್ಯಕ್ರಮದಡಿ ಕೈಗಾರಿಕೆಗಳ ಬೇಡಿಕೆಗೆ ಅನುಸಾರ ಕೌಶಲ್ಯ ತರಬೇತಿ ನೀಡಿ ಮಾನವ ಸಂಪನ್ಮೂಲ ಒದಗಿಸಲಾಗುತ್ತಿದೆ. ಹೊರದೇಶ ಹಾಗೂ ಹೊರ ರಾಜ್ಯಗಳಿಂದ ಬಂದವರಿಗೆ ಕೌಶಲ್ಯ ತರಬೇತಿ ನೀಡಿ ಉದ್ಯೋಗ ಕಲ್ಪಿಸಲು migrantkar.kaushalkar.com ಪೋರ್ಟಲ್ ಅನ್ನು ಅಭಿವೃದ್ಧಿ ಪಡಿಸಲಾಗಿದೆ.

**ಅಂತಾರಾಷ್ಟ್ರೀಯ ವಲಸೆ ಕೇಂದ್ರ (ಐಎಂಸಿಕೆ)**

ವಿದೇಶದಲ್ಲಿ ಉದ್ಯೋಗ ಪಡೆಯುವ ಕನಸು ನನಸು ಮಾಡಿಕೊಳ್ಳಲು ಈ ಕೇಂದ್ರ ನೆರವಾಗುತ್ತಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ **"ಅಂತಾರಾಷ್ಟ್ರೀಯ ವಲಸೆ ಕೇಂದ್ರ – ಕರ್ನಾಟಕ"** ಎಂಬ ವೇದಿಕೆ ಸ್ಥಾಪಿಸಿ, ವಿದೇಶಗಳಲ್ಲಿ ಉದ್ಯೋಗ ಪಡೆಯಲು ಸುಸ್ಥಿರ ಮಾರ್ಗ ರೂಪಿಸಿದೆ.

ವಿದೇಶಗಳಲ್ಲಿ ಕೆಲಸ ಮಾಡುವಾಗ ಸಮಸ್ಯೆಗಳಿದ್ದರೆ ಯೋಗಕ್ಷೇಮ ವಿಚಾರಿಸುವುದಲ್ಲದೇ ಅಲ್ಲಿ ದೊರೆಯುವ ಕಾರ್ಯಕ್ರಮಗಳ ಸೌಲಭ್ಯ ದೊರಕಿಸಿಕೊಡುವ, ತೊಂದರೆ, ಕಿರುಕುಳ ಅನುಭವಿಸುತ್ತಿದ್ದರೆ ಅದಕ್ಕೂ ಪರಿಹಾರ ದೊರಕಿಸಿಕೊಡುವ ಪ್ರಯತ್ನದಲ್ಲಿ ಈ ಕೇಂದ್ರ ನಿರತವಾಗಿದೆ. ಇದಕ್ಕಾಗಿಯೇ ಮದದ್ ಮತ್ತು ಈ ಮೈಗ್ರೇಟ್ ಎಂಬ



ಮುಖ್ಯಮಂತ್ರಿ ಅವರು ಕೌಶಲ್ಯ ಶಿಕ್ಷಣ ನೀಡುವ ಸಂಚಾರಿ ಕೌಶಲ್ಯ ರಥಕ್ಕೆ ಚಾಲನೆ ನೀಡಿದ ಸಂದರ್ಭ.

**ಲಿಂಗತ್ವ ಅಲ್ಪ ಸಂಖ್ಯಾತರು ಸಹ ಸ್ವ ಸಹಾಯ ಸಂಘಗಳ ವಲಯಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಭಿಕ್ಷಾಟನೆ, ಮತ್ತಿತರ ಚಟುವಟಿಕೆಯಲ್ಲಿ ತೊಡಗಿದ್ದ ಮಂಗಳ ಮುಖಿಯರು ಇದೀಗ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಮುಂದಾಗಿರುವುದು ಮಹತ್ವದ ಬೆಳವಣಿಗೆ. ಶಿವಮೊಗ್ಗ ಮಹಾನಗರಪಾಲಿಕೆ ರಕ್ಷಾ ಸಮುದಾಯ ಸಂಘದ ಹೊಂಬೆಳಕು ಸಂಘ ಬದುಕಿನ ಹಾದಿಯಲ್ಲಿ ಹೊಸ ಹೆಜ್ಜೆ ಗುರುತುಗಳನ್ನು ಮೂಡಿಸಲು ಸಜ್ಜಾಗಿದೆ. ಬೆಂಗಳೂರು ನಗರಕ್ಕೆ ಸೀಮಿತವಾಗಿದ್ದ ಮಂಗಳ ಮುಖಿಯರ ಸಮಾಜ ಮುಖಿ ಕೆಲಸಗಳು ಇದೀಗ ಜಿಲ್ಲಾ ಮಟ್ಟಕ್ಕೂ ವ್ಯಾಪಿಸಿದೆ. ಶಿವಮೊಗ್ಗದಲ್ಲಿ ಇದೀಗ ಸ್ವಾವಲಂಬಿ ಬದುಕಿನ ಹೊಸ ಅಧ್ಯಾಯದ ಪುಟ ತೆರೆದಿರುವುದು ನಿಜಕ್ಕೂ ವಿಶೇಷ.**

ಎರಡು ಪೋರ್ಟಲ್‌ಗಳಿದ್ದು, ಇಲ್ಲಿ ತಮ್ಮ ತೊಂದರೆಗಳ ಬಗ್ಗೆ ಮಾಹಿತಿ ನೀಡಿದರೆ ಸಂಬಂಧಪಟ್ಟ ರಾಯಭಾರ ಕಚೇರಿಯನ್ನು ಸಂಪರ್ಕಿಸಿ ಇತ್ಯರ್ಥಗೊಳಿಸಲು ವಲಸೆ ಕೇಂದ್ರದ ಪರಿಣಿತರು ನೆರವಾಗಲಿದ್ದಾರೆ. ವಿದೇಶದಿಂದ ವಾಪಸ್ ಬಂದ ಮೇಲೆ ಸ್ವದೇಶದಲ್ಲಿ ಸೂಕ್ತ ಉದ್ಯೋಗ ಪಡೆಯಲು ಸಹ ಮಾರ್ಗದರ್ಶನವನ್ನು ಈ ಕೇಂದ್ರ ಮಾಡುತ್ತಿದೆ.

ವಿದೇಶಗಳಿಂದ ನಿರ್ದಿಷ್ಟ ಹುದ್ದೆಗಳಿಗೆ ಬೇಡಿಕೆ ಬಂದ ನಂತರ ಐಎಂಸಿ–ಕೆ ಪೋರ್ಟಲ್‌ನಲ್ಲಿ ಜಾಹೀರಾತು ನೀಡಲಾಗುತ್ತದೆ. ಬ್ರಿಟನ್‌ನಲ್ಲಿ ಇತ್ತೀಚೆಗೆ ದಾದಿಯರಿಗೆ ಬೇಡಿಕೆ ಇತ್ತು. ಇದಕ್ಕಾಗಿ ಐಲ್ಟ್ಸ್ ಎಂಬ ಪರೀಕ್ಷೆ ಬರೆಯಬೇಕಾಗುತ್ತದೆ. ಈ ಪರೀಕ್ಷೆಯನ್ನು ಬ್ರಿಟಿಷ್ ಕೌನ್ಸಿಲ್ ನಡೆಸುತ್ತದೆ. ಪರೀಕ್ಷೆ ಬರೆಯಲು ಇಂಟರ್ ನ್ಯಾಷನಲ್ ಸ್ಕಿಲ್ ಡೆವಲಪ್ಮೆಂಟ್ ಕಾರ್ಪೊರೇಷನ್‌ನಿಂದ ತರಬೇತಿ ನೀಡುವ ವ್ಯವಸ್ಥೆಯನ್ನು ಈ ಕೇಂದ್ರ ಮಾಡುತ್ತಿದೆ. ಜಪಾನ್‌ನಿಂದ ಹೋಟೆಲ್ ಮ್ಯಾನೇಜ್ಮೆಂಟ್, ಕೃಷಿ ಚಟುವಟಿಕೆ ಮಾಡುವವರಿಗೆ ಬೇಡಿಕೆಯಿದೆ. ಜಪಾನ್‌ಗೆ



ಸಂಜೀವಿನಿ ಯೋಜನೆಯ ಒಡಂಬಡಿಕೆಗೆ ಸಹಿ ಹಾಕಿದ ಸಂದರ್ಭ.


Downloaded From: www.kpscvaani.com

ಮೂಡಿಸಿವೆ. 2022 ರ ಡಿಸೆಂಬರ್ 8 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ನೀಡುವ ಯೋಜನೆಯಡಿ ನೋಂದಣಿ ಶುಲ್ಕ ರಿಯಾಯಿತಿಗೆ ಅನುಮತಿ ನೀಡಿರುವುದು ಸರ್ಕಾರದ ಮತ್ತೊಂದು ಮಹತ್ವದ ಬೆಳವಣಿಗೆಯಾಗಿದೆ.

ದೇಶದ ಅರ್ಥ ವ್ಯವಸ್ಥೆಗೆ ಸಣ್ಣ ವ್ಯಾಪಾರಿಗಳ ಪಾತ್ರ ಹಿರಿದು. ಜಿಡಿಪಿಗೆ ಇವರು ಅನನ್ಯ ಕೊಡುಗೆ ನೀಡುತ್ತಿದ್ದಾರೆ. ಇಂತಹ ಬೀದಿ ಬದಿ ವ್ಯಾಪಾರಿಗಳ ಶ್ರೇಯೋಭಿವೃದ್ಧಿಗಾಗಿ ದೀನ್ ದಯಾಳ್ ಅಂತ್ಯೋದಯ ಯೋಜನೆ– ಡೇನಲ್ಮ್‌ನಡಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಸಾಲ, ಸೌಲಭ್ಯ ವ್ಯಾಪಾರಕ್ಕೆ ಚಾಲನಾ ಶಕ್ತಿ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಧಾನಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ್ ನಿಧಿಯ ವಿಶೇಷ ಕಿರು ಸಾಲ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಕೋವಿಡ್–19 ಸಂಕಷ್ಟ ಸಮಯದಲ್ಲಿ ತೊಂದರೆಗೊಳಗಾದ ವ್ಯಾಪಾರಿಗಳ ಆರ್ಥಿಕ ಸಬಲೀಕರಣಕ್ಕಾಗಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ, 2020 ರ ಮೇ 14 ರಂದು ಬೀದಿ ವ್ಯಾಪಾರಿಗಳಿಗಾಗಿ ರಾಷ್ಟ್ರ ಮಟ್ಟದಲ್ಲಿ ಪ್ಯಾಕೇಜ್ ಘೋಷಿಸಲಾಯಿತು. ಇದೇ 'ಪ್ರಧಾನಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ್ ನಿಧಿ'ಯ 'ವಿಶೇಷ ಕಿರು ಸಾಲ ಸೌಲಭ್ಯ ಯೋಜನೆ'. ಇದು ರಾಜ್ಯದಲ್ಲಿ ಉತ್ತಮವಾಗಿ ಅನುಷ್ಠಾನಗೊಂಡಿದೆ. ಬೀದಿ ಬದಿ ವ್ಯಾಪಾರಸ್ಥರಿಗೆ ಮೊದಲ ಹಂತದಲ್ಲಿ 10 ಸಾವಿರ ರೂಪಾಯಿವರೆಗೆ ಸಾಲ ನೀಡುತ್ತಿದ್ದು, ಸದ್ಬಳಕೆ ಮಾಡಿಕೊಂಡು ನಿಯಮಿತವಾಗಿ ಸಾಲ ಮರುಪಾವತಿಗೆ ಉತ್ತೇಜಿಸಲಾಗುತ್ತಿದೆ. ಡಿಜಿಟಲ್ ವಹಿವಾಟಿಗೆ ಪ್ರೋತ್ಸಾಹ ಮತ್ತು ಬಹುಮಾನಗಳನ್ನೂ ಸಹ ನೀಡಲಾಗಿದೆ. ರಾಜ್ಯ ಸರ್ಕಾರ 277 ನಗರ ಸ್ಥಳೀಯ ಸಂಸ್ಥೆಗಳಲ್ಲಿ 1,21,620 ಕ್ಕೂ ಹೆಚ್ಚು ಬೀದಿ ವ್ಯಾಪಾರಸ್ಥರನ್ನು ಗುರುತಿಸಿ ಸೌಲಭ್ಯ ಕಲ್ಪಿಸಿದೆ.

ದೀನ್ ದಯಾಳ್ ಅಂತ್ಯೋದಯ ಯೋಜನೆಯಡಿ ಬರುವ ನಗರ ವಸತಿ ರಹಿತ ನಿರಾಶ್ರಿತರ ತಂಗುದಾಣ ಯೋಜನೆಗೆ ಮಾನವೀಯ ಮುಖ ಇದೆ.



ಕರ್ನಾಟಕ – ಜರ್ಮನ್ ಟೆಕ್ನಿಕಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ – ಕೆ.ಜಿ.ಟಿ.ಟಿ.ಐ ರಾಜ್ಯದ ಪ್ರತಿಷ್ಠಿತ ಕೌಶಲ್ಯ ತರಬೇತಿ ಕೇಂದ್ರ. ಬೆಳೆಯುತ್ತಿರುವ ತಂತ್ರಜ್ಞಾನ, ಆಧುನಿಕ ಪರಿಕರಗಳಿಗೆ ತಕ್ಕಂತೆ ಕೌಶಲ್ಯ ತರಬೇತಿ ನೀಡುವುದು ಈ ಸಂಸ್ಥೆಯ ಹೆಗ್ಗಳಿಕೆ. ಎಕ್ಸಲೆನ್ಸಿ ಥ್ರೂ ಸ್ಕಿಲ್ಸ್ – ಅಂದರೆ ಕೌಶಲ್ಯಗಳ ಮೂಲಕ ಶ್ರೇಷ್ಠತೆ ಎನ್ನುವುದು ಈ ಸಂಸ್ಥೆಯ ಘೋಷವಾಕ್ಯ. ಶಿಕ್ಷಣ ಇಂದು ಕೇವಲ ಜ್ಞಾನ ಗಳಿಕೆ ಮಾರ್ಗವಲ್ಲ. ಜ್ಞಾನದ ಜತೆಗೆ ವೃತ್ತಿ ಕೌಶಲ್ಯ, ನೈಪುಣ್ಯತೆಗೆ ಹೆಚ್ಚು ಒತ್ತು ನೀಡುವ ಕೆಲಸ ಇಲ್ಲಿ ನಡೆಯುತ್ತಿದೆ. ಹೀಗಾಗಿಯೇ ಇಲ್ಲಿ ಶೆ 85 ರಷ್ಟು ಕೌಶಲ್ಯ ತರಬೇತಿಗೆ ಆದ್ಯತೆ ಕೊಡಲಾಗುತ್ತಿದೆ. ತಂತ್ರಜ್ಞಾನ ತರಬೇತಿಯಲ್ಲಿ ಜಗತ್ಪ್ರಸಿದ್ಧವಾಗಿರುವ ಜರ್ಮನಿಯೊಂದಿಗೆ ಕೈಜೋಡಿಸಿ ಇಲ್ಲಿ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈವರೆಗೆ 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶವನ್ನು ಯಶಸ್ವಿಯಾಗಿ ಒದಗಿಸಿರುವುದು ಈ ಸಂಸ್ಥೆಯ ಸಾಧನೆಯಾಗಿದೆ.

ಮಾನವೀಯ ನೆಲೆ, ಮಾನವೀಯ ಆಯಾಮವೂ ಇದೆ. ಬೀದಿಯಲ್ಲಿ ಮಲಗುವ ಭಿಕ್ಷುಕರು, ನಗರ ನಿರಾಶ್ರಿತರು ಸೂಕ್ತ ಸೌಲಭ್ಯದೊಂದಿಗೆ ತಂಗಬೇಕು ಎನ್ನುವ ಉದ್ದೇಶದಿಂದ ಈ ಯೋಜನೆಯನ್ನು ಸರ್ಕಾರವು ಜಾರಿಗೊಳಿಸಿದೆ. ಬೀದಿಯಲ್ಲಿ ಮಲಗುವವರನ್ನು ಪತ್ತೆ ಮಾಡಿ ನಿರಾಶ್ರಿತರ ತಂಗುದಾಣಕ್ಕೆ ಸೇರಿಸಲಾಗುತ್ತಿದೆ. ಇಂತಹ ತಂಗುದಾಣಗಳು ಹಲವು ನಗರಗಳಲ್ಲಿ ತೆರೆಯಲಾಗಿದೆ. ಸಂವಿಧಾನ ಪ್ರತಿಯೊಬ್ಬರಿಗೂ ಘನತೆಯಿಂದ ಬದುಕುವ ಹಕ್ಕು ನೀಡಿದೆ. ಘನತೆ, ಗೌರವ ಕಾಪಾಡುವುದೇ ಈ ಯೋಜನೆಯ ಧ್ಯೇಯವಾಗಿದೆ. ಅಗತ್ಯವಿರುವವರಿಗೆ ವೃತ್ತಿ ತರಬೇತಿಯನ್ನು ಸಹ ನೀಡಲಾಗುತ್ತಿದೆ.

**ಮಹಿಳೆಯ ಸ್ವಾವಲಂಬಿ ಬದುಕು:**

ಮಹಿಳೆಯರು ಸ್ವಾವಲಂಬಿ ಬದುಕು ನಡೆಸಲು ಸರ್ಕಾರ ನೆರವಾಗುತ್ತಿದೆ. ರಾಜ್ಯದ ಸ್ತ್ರೀ ಶಕ್ತಿ ಸಂಘ ಇಡೀ ದೇಶಕ್ಕೆ ಮಾದರಿ. ಮಹಿಳಾ ಒಕ್ಕೂಟಗಳ ಮೂಲಕ ಇವರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಮಹಿಳೆಯರು ಉತ್ಪಾದಿಸುತ್ತಿರುವ ವಸ್ತುಗಳಿಗೆ ಅಮೆಜಾನ್,


Downloaded From: www.kpscvaani.com



ರಾಷ್ಟ್ರಮಟ್ಟದ ತಾಂತ್ರಿಕ ಕೇಂದ್ರಗಳಾಗಿ ಉನ್ನತೀಕರಿಸಲಾದ 150 ಐಟಿಐ ಗಳನ್ನು ಪ್ರಧಾನಮಂತ್ರಿ ಅವರು ಲೋಕಾರ್ಪಣೆ ಗೊಳಿಸಿದ ಸಂದರ್ಭ.

ತೆರಳಲು ಜಪಾನ್ ಭಾಷೆ ಕಲಿಕೆ ಕಡ್ಡಾಯ. ಇಲಾಖೆಯಿಂದಲೇ ಜಾಪನೀಸ್ ಕಲಿಸಲು ಸೂಕ್ತ ವೇದಿಕೆ ಸೃಷ್ಟಿಸಲಾಗಿದೆ. ಇಂಗ್ಲೆಂಡಿನಲ್ಲಿ ದಾದಿಯರು ಮತ್ತು ವೈದ್ಯರ ಸೇವೆ ಒದಗಿಸಲು ಇಂಗ್ಲೆಂಡ್ ನ ಎನ್.ಎಚ್.ಎಸ್ ಜೊತೆ ಒಪ್ಪಂದ ಏರ್ಪಟ್ಟಿದೆ. ಹೀಗೆ ಐಎಂಸಿ–ಕೆ ಕೇಂದ್ರ ವಿದೇಶಗಳಲ್ಲಿ ಉದ್ಯೋಗ ಬೇಡಿಕೆಯನ್ನು ಸೂಕ್ತ ರೀತಿಯಲ್ಲಿ ಪೂರೈಸಲು, ಅದಕ್ಕೆ ಬೇಕಾದ ಸಕಲ ವ್ಯವಸ್ಥೆಗಳನ್ನು ಕಲ್ಪಿಸುತ್ತಿದೆ.

ಸಾಮಾನ್ಯವಾಗಿ ವೈಟ್ ಕಾಲರ್ಸ್ ಜಾಬ್‌ಗಳು ಅಂದರೆ ಐಟಿ–ಬಿಟಿ, ಹೆಚ್ಚಿನ ಅಧ್ಯಯನ ಮಾಡಿರುವವರಿಗಷ್ಟೇ ವಿದೇಶಗಳಲ್ಲಿ ಉದ್ಯೋಗಾವಕಾಶಗಳಿವೆ ಎನ್ನುವ ಕಲ್ಪನೆಗಳಿವೆ. ಆದರೆ ಇದು ವಾಸ್ತವವಲ್ಲ. ಬ್ಲ್ಯೂ ಕಾಲರ್ಸ್ ಜಾಬ್ ಅಂದರೆ ಮನೆಗೆಲಸ, ಚಾಲಕರು, ಕಟ್ಟಡ, ರಸ್ತೆ, ಕಟ್ಟಡ ನಿರ್ಮಾಣ ಕಾರ್ಮಿಕರು, ಕೇರ್ ಟೇಕರ್ಸ್. ದಾದಿಯರು, ಎಲೆಕ್ಟ್ರೀಷಿಯನ್ಸ್, ಪ್ಲಂಬರ್ಸ್‌ಗಳಿಗೂ ಹೆಚ್ಚಿನ ಬೇಡಿಕೆಯಿದೆ.

ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ ಸಚಿವರಾದ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರನ್ನು ಬೆಸೆಯುವ ಸ್ಕಿಲ್ ಕನೆಕ್ಟ್ ಪೋರ್ಟಲ್ ಅನ್ನು ಇತ್ತೀಚೆಗಷ್ಟೇ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಟ್ಯಾಲೆನ್ಷೀಯಾ ಗ್ಲೋಬಲ್, ಇನ್ನೋವ್‌ಸೋರ್ಸ್, ಫ್ಯೂಯೆಲ್, ಎಐಎಸ್‌ಇಸಿಟಿ ಮತ್ತು ಇನ್ಫಿಕ್ಸಿಟಿ ಆಟೋ ಟೆಕ್ನಾಲಜೀಸ್ ಕಂಪನಿಗಳ ಮುಖ್ಯಸ್ಥರೊಂದಿಗೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರು ಸಚಿವರ ಸಮ್ಮುಖದಲ್ಲಿ ಹಲವು ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ.

ಕಟ್ಟಕಡೆಯ ವ್ಯಕ್ತಿಯ ಶ್ರೇಯೋಭಿವೃದ್ಧಿ ಸರ್ಕಾರದ ಗುರಿ. ಇದೇ ಆಶಯವನ್ನು ದೀನ್ ದಯಾಳ್ ಅಂತ್ಯೋದಯ ಯೋಜನೆ ಹೊಂದಿದೆ. ಬೀದಿ ಬದಿ ವ್ಯಾಪಾರಿಗಳಿರಬಹು, ಲಿಂಗತ್ವ ಅಲ್ಪ ಸಂಖ್ಯಾತರು, ನಗರ ಪ್ರದೇಶದ ನಿರಾಶ್ರಿತರು ಒಳಗೊಂಡಂತೆ ಸರ್ವರ ಏಳ್ಗೆ ಈ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ಮುಖ್ಯ ಗುರಿ. ಒಂದು ಕಾಲದಲ್ಲಿ ಬೀದಿಯಲ್ಲಿ ವ್ಯಾಪಾರ ಮಾಡುವುದನ್ನು ಅಪರಾಧದಂತೆ ನೋಡಲಾಗುತಿತ್ತು. ಅವರು ಕಿರುಕುಳ ಎದುರಿಸುತ್ತಿದ್ದರು. ಇದೀಗ ಇವರಿಗೂ ಕಾನೂನಿನ ಸುರಕ್ಷತೆ, ಮಳೆ, ಗಾಳಿಯಿಂದ ರಕ್ಷಣೆ, ವ್ಯಾಪಾರ ವಹಿವಾಟಿಗಾಗಿ ಪ್ರತ್ಯೇಕ ವ್ಯವಸ್ಥೆ, ಸಾಲ ಸೌಲಭ್ಯ, ಪರವಾನಗಿ ಹೀಗೆ ಹತ್ತು ಹಲವು ಕ್ರಮಗಳು ಇವರ ಬದುಕಿನಲ್ಲಿ ಹೊಸ ಆಶಾಕಿರಣ

**ಸರ್ಕಾರವು ರಾಜ್ಯದ 150 ಸರ್ಕಾರಿ ಐಟಿಐಗಳನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಅನುಗುಣವಾಗಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಂಡಿದೆ. ವೃತ್ತಿ ತರಬೇತಿ ವಲಯದಲ್ಲಿ ಇದೊಂದು ಮಹತ್ವದ ಮತ್ತು ಕ್ರಾಂತಿಕಾರಕ ಹೆಜ್ಜೆ. ಯುವ ಸಮೂಹಕ್ಕೆ ಉದ್ಯೋಗ ದೊರಕಿಸಿಕೊಡಲು ಮತ್ತು ಕೈಗಾರಿಕಾ ವಲಯಕ್ಕೆ ಅಗತ್ಯವಾಗಿರುವ ನುರಿತ ಮಾನವ ಸಂಪನ್ಮೂಲ ಒದಗಿಸಲು ಸರ್ಕಾರಿ ಐಟಿಐಗಳು ಮೇಲ್ದರ್ಜೆಗೇರುತ್ತಿವೆ. ಇದೇ ಮೊದಲ ಬಾರಿಗೆ ಟಾಟಾ ಕನ್ಸಲ್ಟೆನ್ಸಿ ಸಹಯೋಗದೊಂದಿಗೆ ಪ್ರತಿಯೊಂದು ಸರ್ಕಾರಿ ಐಟಿಐಗಳನ್ನು ಸರಾಸರಿ 30 ಕೋಟಿ ರೂಪಾಯಿ ವೆಚ್ಚದಲ್ಲಿ ತ್ವರಿತವಾಗಿ ಉನ್ನತೀಕರಣಗೊಳಿಸಲಾಗುತ್ತಿದೆ.**



Downloaded From: www.kpscvaani.com



**ರುಡ್ ಸೆಟ್‌ಗಳು ಸ್ವಂತ ವ್ಯಾಪಾರ, ವಹಿವಾಟು, ಸ್ವಯಂ ಉದ್ಯೋಗ ಹೊಂದಲು, ಉದ್ಯಮಿಯಾಗಲು, ಉದ್ಯಮಶೀಲತೆಯನ್ನು ರೂಪಿಸಿಕೊಳ್ಳಲು ನಿರ್ಣಾಯಕ ಪಾತ್ರವಹಿಸುತ್ತಿವೆ. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ನಿಂದ ಆರಂಭಿಸಲಾದ ರುಡ್ ಸೆಟ್ ಸಂಸ್ಥೆ 1982 ರಿಂದ ಜೀವನೋಪಾಯ ವಲಯದಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದು, ಅಸಂಖ್ಯಾತ ಕುಟುಂಬಗಳನ್ನು ಸ್ವಾವಲಂಬಿಯನ್ನಾಗಿ ಮಾಡಿವೆ.**

ಫ್ಲಿಪ್ ಕಾರ್ಟ್ ಮತ್ತಿತರ ಜಾಗತಿಕ ಮಾರಾಟ ಸಂಸ್ಥೆಗಳ ಮೂಲಕ ಮಾರಾಟ ಮಾಡಲು ಸರ್ಕಾರ ಒಪ್ಪಂದ ಮಾಡಿಕೊಂಡಿದೆ. ಇದೀಗ ಮಾರಾಟ ತಂತ್ರಗಳು ಬದಲಾಗುತ್ತಿವೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಉತ್ಪಾದನೆಯಾಗುತ್ತಿರುವ ವಸ್ತುಗಳನ್ನು ಖರೀದಿ, ಮಾರಾಟ ಮಾಡಬಹುದು. ಇಂಥಹ ಆನ್ ಲೈನ್ ವೇದಿಕೆಗಳನ್ನು ಮಹಿಳೆಯರು ಸಹ ಅಷ್ಟೇ ಜಾಣತನದಿಂದ ಬಳಸಿಕೊಳ್ಳುತ್ತಿದ್ದಾರೆ.

ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯಿಂದ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿಯಲ್ಲಿ ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಸಮುದಾಯ ಆಧಾರಿತ ಗುಂಪಿನ ಎಲ್ಲಾ ಬಡ ಕುಟುಂಬಗಳನ್ನು ಸ್ವ-ಸಹಾಯ ಸಂಘದ ವ್ಯಾಪ್ತಿಗೆ ತರಲಾಗಿದೆ. ಸಂಘ ರಚನೆಯಾದ 3 ತಿಂಗಳ ನಂತರ 10 ಸಾವಿರ ರೂಪಾಯಿ ಆವರ್ತಕ ನಿಧಿಯನ್ನು ಒದಗಿಸಲಾಗುತ್ತದೆ. ಇಲ್ಲಿ ವಿಕಲಚೇತನ ಪುರುಷರ ಗುಂಪುಗಳನ್ನು, ಬೀದಿ ಬದಿ ವ್ಯಾಪಾರಿಗಳ ಗುಂಪುಗಳು, ಶೌಚಾಲಯ ಸುಚಿಗೊಳಿಸುವ ಕಾರ್ಮಿಕರ ಸಂಘ ರಚಿಸಲು ಸಹ ಅವಕಾಶವಿದೆ. ಚಿಂದಿ ಆರಿಸುವವರು, ಆಟೋ ಚಾಲಕರು, ನೈರ್ಮಲ್ಯ ಕೆಲಸಗಾರರು, ಇತರೆ ಪುರುಷರನ್ನೊಳಗೊಂಡ ಸ್ವ-ಸಹಾಯ ಸಂಘಗಳ ರಚನೆಗೂ ಅವಕಾಶವಿದೆ. ಇಂತಹ ಸಂಘಗಳಿಗೆ ಮೊದಲ ಹಂತವಾಗಿ ಬ್ಯಾಂಕುಗಳಿಂದ ಒಂದು ಲಕ್ಷ ರೂಪಾಯಿವರೆಗೆ ನಂತರ 2ಲಕ್ಷ ರೂವರೆಗೆ ಸ್ವ-ಸಹಾಯ ಸಂಘಗಳಿಗೆ ಬ್ಯಾಂಕ್‌ಗಳು ಸಾಲ ನೀಡುತ್ತಿವೆ. ಶೇ.7ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನ ಹಾಗೂ ನಿಯಮಿತವಾಗಿ ಸಾಲ ಮರುಪಾವತಿಸುವ ಸಂಘಗಳಿಗೆ ಶೇಕಡ 3ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ಒದಗಿಸಲಾಗುತ್ತಿದೆ.

ಎನ್.ಆರ್.ಎಲ್.ಎಂ ಯೋಜನೆ : ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಪ್ರಾರಂಭಿಸಿದೆ. ಈ ಯೋಜನೆಯನ್ನು ರಾಜ್ಯದಲ್ಲಿ "ಸಂಜೀವಿನಿ" ಹೆಸರಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ ಮೂಲಕ ಜಾರಿಗೊಳಿಸಲಾಗಿದೆ. ಸ್ವ ಸಹಾಯ ಸಂಘದಿಂದ ಹೊರಗುಳಿದವರನ್ನು ಗುರುತಿಸಿ ಹೊಸ ಸಂಘಗಳನ್ನು ರಚಿಸುವುದು, ಸ್ವ ಸಹಾಯ ಸಂಘಗಳಿಗೆ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ರಚನೆ, ಸ್ವ ಸಹಾಯ ಗುಂಪುಗಳು, ಒಕ್ಕೂಟದ ಸದಸ್ಯರು ಮತ್ತು ಪದಾಧಿಕಾರಿಗಳಿಗೆ ಸಾಮರ್ಥ್ಯ ಬಲವರ್ಧನೆ, ಇದರ ಜೊತೆ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕೊಡಿಸಲಾಗುತ್ತಿದೆ.

ಸೆಂಟರ್ ಫಾರ್ ಆಂತ್ರಪ್ರೇನರ್ ಶಿಪ್ ಡೆವಲಪ್ಮೆಂಟ್ ಸೆಂಟರ್ ರಾಜ್ಯದ ಔದ್ಯಮಿಕ ವಲಯದಲ್ಲಿ ಚಿರಪರಿಚಿತ. ಧಾರವಾಡದಲ್ಲಿ ಸಂಸ್ಥೆಯ ಕೇಂದ್ರ ಸ್ಥಾನವಿದೆ. ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ ರಾಜ್ಯದಲ್ಲಿ ಉದ್ಯಮಶೀಲತೆ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮಹತ್ವದ ಮತ್ತು ನಿರ್ಣಾಯಕ ಪಾತ್ರ ವಹಿಸುತ್ತಿದೆ. ಕೋವಿಡ್ ನಂತರದ ಜಗತ್ತು ಹೊಸ ಸವಾಲುಗಳು, ಹೊಸ ಕೌಶಲ್ಯ, ಹೊಸ ಉದ್ಯಮವಲಯದತ್ತ ಮುಖ ಮಾಡುತ್ತಿದೆ. ಇದಕ್ಕೆ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯು ಕೌಶಲ್ಯಾಧಾರಿತ ತರಬೇತಿ ನೀಡುವ ಮೂಲಕ ಜನರನ್ನು ಸ್ವಾವಲಂಬಿಯನ್ನಾಗಿಸುತ್ತಿದೆ. ■



Downloaded From: www.kpscvaani.com



# ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಸರ್ಕಾರದ ಗುರಿ

ಬಿ. ಎಸ್. ಪಲ್ಲವಿ

ದೇಶದ ಸಹಕಾರ ಚಳವಳಿಗೆ 118 ವರ್ಷಗಳಿಗೂ ಮೀರಿದ ಇತಿಹಾಸವಿದ್ದು, ಕರ್ನಾಟಕ ಸಹಕಾರ ಚಳವಳಿಯ ಮೂಲ. 1905ರಲ್ಲಿ ರಾಷ್ಟ್ರದ ಪ್ರಥಮ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕರ್ನಾಟಕದ ಅವಿಭಜಿತ ಧಾರವಾಡ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಶಿದ್ದನಗೌಡ ಸಂಣರಾಮನಗೌಡ ಪಾಟೀಲರ ಮುಂದಾಳತ್ವದಲ್ಲಿ ಪ್ರಾರಂಭವಾಯಿತು. ಇತ್ತೀಚೆಗಷ್ಟೇ ರಾಜ್ಯದಲ್ಲಿ 69ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಆಚರಿಸಲಾಯಿತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಈ ಬಾರಿ **"ಭಾರತ 75–ಸಹಕಾರ ಸಂಸ್ಥೆಗಳ ಬೆಳವಣಿಗೆ ಮತ್ತು ಮುಂದಿನ ಭವಿಷ್ಯ"** ಎಂಬ ಘೋಷವಾಕ್ಯದಡಿ ಆಚರಿಸಲಾಯಿತು.

ದೇಶ ಸ್ವಾತಂತ್ರ್ಯದ ಶತಮಾನೋತ್ಸವತ್ತ ದಾಪುಗಾಲಿಟ್ಟಿದ್ದು, ಈ ಅಮೃತ ಕಾಲದಲ್ಲಿ ಸಹಕಾರ ಕ್ಷೇತ್ರ ಸಾಗಬೇಕಾಗಿರುವ ಹಾದಿಯ ಬಗ್ಗೆ ಪುನರಾವಲೋಕನ ಮಾಡಿಕೊಳ್ಳಲು ಇದು ಸಕಾಲ. ಕೃಷಿಕರ ನೆಮ್ಮದಿಯ ಬದುಕಿನ ರೂವಾರಿಯಾಗಿ, ಹೈನೋದ್ಯಮ, ಹಸಿರುಕ್ರಾಂತಿ ಹಾಗೂ ಶ್ವೇತಕ್ರಾಂತಿಯ ಮೂಲಕ "ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ತತ್ವದ ಮೂಲಕ ಕಾರ್ಯನಿರ್ವಹಿಸುತ್ತಿದೆ. ಜೀವನದ ಎಲ್ಲಾ ಆಯಾಮಗಳನ್ನು ಆವರಿಸಿಕೊಂಡು, ಬಡತನ ನಿವಾರಣೆ, ಉದ್ಯೋಗ ಸೃಷ್ಠಿ ಹಾಗೂ ಸಾಮಾಜಿಕ ನ್ಯಾಯ ರೂಪಿಸುವ ಮೂಲಕ ಜನಸಾಮಾನ್ಯರಿಗೆ ಸಹಕಾರಿ ಕ್ಷೇತ್ರ ನೆರವಾಗಿದೆ. ಭಾರತ ಹೈನುಗಾರಿಕೆಯಲ್ಲಿ ವಿಶ್ವದಲ್ಲೇ ಪ್ರಥಮ ಸ್ಥಾನದಲ್ಲಿದ್ದು, ಭಾರತೀಯರು ಹೆಮ್ಮೆಪಡುವ ವಿಚಾರ. ಸಹಕಾರ ವಲಯದಲ್ಲಿ ಹೈನುಗಾರಿಕೆ ಮಹತ್ವದ ಪಾತ್ರ ವಹಿಸಿದ್ದು, ಕರ್ನಾಟಕದ ಹಾಲು ಮಹಾಮಂಡಳಿ ನೇತೃತ್ವದಲ್ಲಿ ಪ್ರತಿನಿತ್ಯ 90 ಲಕ್ಷಕ್ಕೂ ಅಧಿಕ ಲೀಟರ್ ಹಾಲು ಶೇಖರಣೆಯಾಗುತ್ತಿದ್ದು, ದೇಶದ 2ನೇ ಅತಿ ದೊಡ್ಡ ಸಹಕಾರಿ ವಲಯವಾಗಿ ಹೈನುಗಾರಿಕೆ ಹೆಮ್ಮರವಾಗಿ ಬೆಳೆಯುತ್ತಿದೆ.

**ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಕರ್ನಾಟಕ ಸರ್ಕಾರವು ಮಾದರಿಯಾಗಿದ್ದು, ಸರ್ವರಿಗೂ ಸಮಬಾಳು ಸಮಪಾಲು ಎಂಬ ತತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ.**

ರಾಜ್ಯ ಸಹಕಾರ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದು, ಪ್ರಸ್ತುತ 45 ಸಾವಿರ ಸಹಕಾರ ಸಂಘ ಸಂಸ್ಥೆಗಳು 2.30 ಕೋಟಿ ಸದಸ್ಯರನ್ನು ಹೊಂದಿವೆ. ಕೃಷಿ, ಹಾಲು



Downloaded From: www.kpscvaani.com



ಸಹಕಾರ ಇಲಾಖೆಯ ಕಾರ್ಯಕ್ರಮವೊಂದರಲ್ಲಿ ಸಚಿವರು ಭಾಗವಹಿಸಿರುವುದು.

> **ಗೋ ಸಂರಕ್ಷಣೆ, ವರ್ಧನೆ ಮತ್ತು ಸಹಕಾರ ವಲಯದಲ್ಲಿರುವ ಹಾಲು ಉತ್ಪಾದಕರಿಗೆ ನೆರವಾಗುವ ಉದ್ದೇಶದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಿದ್ದ "ಕ್ಷೀರ ಸಮೃದ್ಧಿ ಸಹಕಾರಿ ಬ್ಯಾಂಕ್" ಸ್ಥಾಪನೆಗೆ ಸಹಕಾರ ಇಲಾಖೆ ಸಚಿವರಾದ ಎಸ್.ಟಿ. ಸೋಮಶೇಖರ್ ನಿರಂತರ ಪ್ರಯತ್ನದಲ್ಲಿ ತೊಡಗಿದ್ದು, ಕೇಂದ್ರ ಹಣಕಾಸು ಸಚಿವರು ಮತ್ತು ಆರ್.ಬಿ.ಐ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ.**

ಉತ್ಪಾದನೆ, ಪತ್ತಿನ ವಲಯ ಹಾಗೂ ಪಟ್ಟಣ ಸಹಕಾರ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿ ಹೊಂದುತ್ತಿದೆ. ರಾಜ್ಯದ ಸಹಕಾರ ಚಳವಳಿಯ ಮಾತೃ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಸಹಕಾರ ಚಳವಳಿಯ ಪರಿಣಾಮಕಾರಿ ಬೆಳವಣಿಗೆಗೆ ಅಗತ್ಯವಾಗಿರುವ ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರವನ್ನು 98 ವರ್ಷಗಳಿಂದಲೂ ನಿರಂತರವಾಗಿ ನಡೆಸುತ್ತಿದೆ.

ಮಹಾಮಂಡಳ ಇದೀಗ 8 ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ-ಆಪ್ ಮ್ಯಾನೇಜ್ಮೆಂಟ್ ಸಂಸ್ಥೆಗಳನ್ನು ನಡೆಸುತ್ತಿದ್ದು, ಸಹಕಾರ ಇಲಾಖೆ, ಲೆಕ್ಕ ಪರಿಶೋಧನಾ ಇಲಾಖೆ ಮತ್ತು ಸಹಕಾರ ಸಂಸ್ಥೆಗಳ ಸಿಬ್ಬಂದಿಗೆ ಹಾಗೂ ನಿರುದ್ಯೋಗಿ ಯುವಜನರಿಗೆ, ಪ.ಜ/ಪ.ಶಿ ವರ್ಗಗಳ ಜನರಿಗೆ 6 ತಿಂಗಳ ಡಿಪ್ಲೋಮ ತರಬೇತಿ ನೀಡುತ್ತಿದೆ. ಸಹಕಾರ ಶಿಕ್ಷಣ, ತರಬೇತಿ ಪ್ರಚಾರದ ಹೊಣೆ ಹೊತ್ತಿರುವ ಮಹಾಮಂಡಳ ಕಳೆದ ವರ್ಷ ರಾಜ್ಯದ 40 ಸಾವಿರ ಜನರಿಗೆ ಸಹಕಾರ ಶಿಕ್ಷಣ ಹಾಗೂ 5 ಸಾವಿರ ಜನರಿಗೆ ಸಹಕಾರ ತರಬೇತಿ ನೀಡಿದೆ. ಇತ್ತೀಚೆಗೆ ದೂರ ಶಿಕ್ಷಣದ ವ್ಯವಸ್ಥೆಯಡಿ ಈ ತರಬೇತಿಯನ್ನು ಸಹಕಾರ ಸಂಘ/ಸಂಸ್ಥೆಗಳ ಸಿಬ್ಬಂದಿಗೆ ನೀಡಲಾಗುತ್ತಿದ್ದು, ವಾರ್ಷಿಕ 3000 ಜನ ತರಬೇತಿ ಪಡೆಯುತ್ತಿದ್ದಾರೆ.

ಈ ಕ್ಷೇತ್ರದಲ್ಲಿ ಅಸಹಕಾರವಿದ್ದರೆ ಏನನ್ನೂ ಸಾಧಿಸಲಾಗದು ಎಂದು ಸಚಿವ ಎಸ್.ಟಿ. ಸೋಮಶೇಖರ್ ಹೇಳುತ್ತಾರೆ. "ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ" ಎಂಬಂತೆ ಪರಸ್ಪರ ಸಹಕಾರದಿಂದ ಕೆಲಸ ಮಾಡುವಂತೆ ಕರೆ ನೀಡಿದ್ದಾರೆ. ಆಹಾರ ಭದ್ರತೆಗೆ ಪೂರಕವಾಗಿ ರಾಜ್ಯದಲ್ಲಿರುವ ಅಪೆಕ್ಸ್ ಬ್ಯಾಂಕ್, 21 ಡಿಸಿಸಿ ಬ್ಯಾಂಕ್ ಮತ್ತು ವ್ಯವಸಾಯ ಸೇವಾ ಸಹಕಾರ ಸಂಘಗಳ ಸ್ಥಿತಿಗತಿಗಳನ್ನು ಅರಿತುಕೊಳ್ಳುವುದು ಮುಖ್ಯವಾಗಿತ್ತು.

ಹೀಗಾಗಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಆಗಾಗ ಸಮಾಲೋಚನೆ ನಡೆಸುತ್ತಾ, ಅವರ ಮಾರ್ಗದರ್ಶನದಲ್ಲಿ ಜಿಲ್ಲೆಗಳಿಗೆ ಭೇಟಿ ನೀಡಿ ಡಿಸಿಸಿ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸುತ್ತಿದ್ದಾರೆ. ಅವುಗಳ ಸಮಗ್ರ ವ್ಯವಹಾರಗಳನ್ನು ಪರಿಶೀಲಿಸುತ್ತಿದ್ದಾರೆ. ಇಷ್ಟೇ ಅಲ್ಲದೆ, ಬೆಂಗಳೂರಿನಲ್ಲಿ ವಲಯವಾರು ಡಿಸಿಸಿ ಬ್ಯಾಂಕ್‌ಗಳ ಸಂಬಂಧಪಟ್ಟವರನ್ನು ಕರೆಸಿಕೊಂಡು ಸಭೆ ನಡೆಸಿ ಸೂಕ್ತ ಸಲಹೆ-ಸೂಚನೆಗಳನ್ನು ನೀಡುತ್ತಿದ್ದಾರೆ. ಲೋಪವೆಸಗುವ ಸಹಕಾರ ಸಂಘ, ಬ್ಯಾಂಕ್‌ಗಳ ಆಡಳಿತ ಮಂಡಳಿಗಳಿಗೆ ಚುರುಕು ಮುಟ್ಟಿಸುವ ಕೆಲಸದಲ್ಲೂ ನಿರತರಾಗಿದ್ದಾರೆ.

ಸಹಕಾರ ವಲಯ ಹಾಗೂ ಇದರಿಂದ ಇತರೆ ಕ್ಷೇತ್ರಗಳ ಅಭಿವೃದ್ಧಿಯನ್ನು ಮಾಡುವ ಬಗ್ಗೆ ಸದಾ ಒಂದಿಲ್ಲೊಂದು ಕ್ರಿಯಾಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದು, ಒಂದೊಂದಾಗಿ ಅನುಷ್ಠಾನಗೊಳಿಸುತ್ತಿದ್ದಾರೆ. ಸರ್ಕಾರದ ಸಂಪೂರ್ಣ ಸಹಕಾರದ ಫಲವಾಗಿ ಸಹಕಾರ ಇಲಾಖೆ ವರ್ಷದಿಂದ ವರ್ಷಕ್ಕೆ ಬೆಳವಣಿಗೆಯತ್ತ ಸಾಗುತ್ತಿದೆ. ಸಕ್ಕರೆ, ಹೈನುಗಾರಿಕೆ, ವಸತಿ, ರೇಷ್ಮೆ ಕೈಗಾರಿಕೆಗಳು, ಮೀನುಗಾರಿಕೆ ಹೀಗೆ ಹಲವು ಕ್ಷೇತ್ರಗಳಲ್ಲಿ ಪ್ರಗತಿಪಥದಲ್ಲಿದೆ. ರಾಜ್ಯದ ಸಹಕಾರ ಸಂಘಗಳು 1,42,603 ಕೋಟಿ ರೂ. ಬಂಡವಾಳ ಮತ್ತು 1,77,620 ಕೋಟಿ ರೂ. ಠೇವಣಿಯೊಂದಿಗೆ ಕಾರ್ಯನಿರ್ವಹಿಸುತ್ತಿವೆ.

ಎಲ್ಲಾ ಅರ್ಹ ರೈತರಿಗೂ ಸಾಲ ಸಿಗಬೇಕೆಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಶಯದಂತೆ 2021-22ನೇ ಸಾಲಿನಲ್ಲಿ ನಬಾರ್ಡ್ ಸಹಯೋಗದೊಂದಿಗೆ ರಾಜ್ಯದಲ್ಲಿ 20,810 ಕೋಟಿ ರೂ. ಕೃಷಿ ಸಾಲವನ್ನು 30.85 ಲಕ್ಷ ರೈತರಿಗೆ ವಿತರಿಸುವ ಮತ್ತು ಮೂರು ಲಕ್ಷ ಹೊಸ ರೈತರಿಗೆ ಸಾಲ ವಿತರಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಸಾಲ ವಿತರಣೆಯಲ್ಲಿ ಶೇ 100 ರಷ್ಟು ಸಾಧನೆ ಜೊತೆಗೆ 1022.90 ಕೋಟಿ ರೂ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಿರುವುದು ಸಹ ಮತ್ತೊಂದು ದಾಖಲೆಯಾಗಿದೆ.

2019-20ರಲ್ಲಿ 22.58 ಲಕ್ಷ ರೈತರಿಗೆ 13,577 ಕೋಟಿ ರೂ. ಕೃಷಿ ಸಾಲ ವಿತರಿಸಲಾಗಿತ್ತು. 2020-21ರಲ್ಲಿ 17,901.21 ಕೋಟಿ ರೂ. ಬೆಳೆ ಸಾಲವನ್ನು



Downloaded From: www.kpscvaani.com

26.19 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗಿದೆ. ಈ ಪೈಕಿ ಪಶು ಸಂಗೋಪನೆಗೆ ದುಡಿಯುವ ಬಂಡವಾಳ ಸಾಲವಾಗಿ 57 ಸಾವಿರ ರೈತರಿಗೆ 105.64 ಕೋಟಿ ರೂ. ಸಾಲ ವಿತರಿಸಲಾಗಿದೆ. ಇದರ ಜೊತೆಗೆ 1,260.21 ಕೋಟಿ ರೂ. ದೀರ್ಘಾವಧಿ ಕೃಷಿ ಸಾಲವನ್ನು 52,015 ರೈತರಿಗೆ ಶೇಕಡ 3 ಬಡ್ಡಿ ದರದಲ್ಲಿ ವಿತರಿಸಲಾಗಿದೆ. 2021ರ ಡಿಸೆಂಬರ್ ವೇಳೆಗೆ 11,601 ಕೋಟಿ ರೂ. ಕೃಷಿ ಸಾಲವನ್ನು 15.83 ಲಕ್ಷ ರೈತರಿಗೆ ವಿತರಿಸಲಾಗಿದೆ. ಕರ್ನಾಟಕದಲ್ಲಿ 1.6 ಲಕ್ಷಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳು ರಚನೆಯಾಗಿದ್ದು, 76,379 ಗುಂಪುಗಳಿಗೆ 1,634 ಕೋಟಿ ರೂ. ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ನೀಡಲಾಗಿದೆ.

ರಾಜ್ಯದಲ್ಲಿ 160 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಆಧುನೀಕರಣಕಗೊಳಿಸಿ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ತರಲು ಸುಸಜ್ಜಿತ ರಸ್ತೆಗಳು ಹಾಗೂ ಕೃಷಿ ಬೆಲೆ ಇಳಿಕೆಯಾದಾಗ ರೈತರು ತಮ್ಮ ಉತ್ಪನ್ನಗಳನ್ನು ಶೀಥಲ ಗೋದಾಮುಗಳನ್ನು ನಿರ್ಮಿಸಲು ಕರ್ನಾಟಕಕ್ಕೆ 5 ಸಾವಿರ ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡುವಂತೆ ಸಚಿವ ಸೋಮಶೇಖರ್ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಶೀಥಲ ಗೋದಾಮುಗಳಿಗೆ ಮನವಿ ಸಲ್ಲಿಸಿದ 2–3 ದಿನಗಳೊಳಗೆ ಮಂಜೂರು ಮಾಡಿಕೊಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಅಲ್ಲದೇ, ಕೋಲ್ಡ್ ಸ್ಟೋರೇಜ್ ಅಗತ್ಯವಿರುವ ಜಿಲ್ಲಾ ಸಮಿತಿಗಳು ಬೇಡಿಕೆಗಳನ್ನು ಸಲ್ಲಿಸಿದರೆ ನೂರಕ್ಕೆ ನೂರರಷ್ಟು ಮಂಜೂರು ಮಾಡಿಕೊಡಲಾಗುತ್ತಿದೆ. ಶಿವಮೊಗ್ಗ, ಚಿಕ್ಕಮಗಳೂರು, ಹಾವೇರಿ, ಮೈಸೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಚಾಮರಾಜನಗರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಶೀಥಲಗೃಹ ನಿರ್ಮಾಣಕ್ಕೆ ವ್ಯವಸ್ಥೆ ಮಾಡಲಾಗಿದೆ.

ಕೃಷಿ ಉತ್ಪನ್ನಗಳನ್ನು ಖರೀದಿಸಲು ಇ-ರಾಮ್ಸ್ ಎಂಬ ವ್ಯವಸ್ಥೆಯನ್ನು ದೇಶದಲ್ಲೇ ಮೊದಲು ಪರಿಚಯಿಸಿದ ರಾಜ್ಯ ಕರ್ನಾಟಕ. ನಂತರದಲ್ಲಿ ಭಾರತ ಸರ್ಕಾರ ಇ-ನಾಮ್ ಪೋರ್ಟಲ್ ಅಳವಡಿಸಿಕೊಂಡಿತು. ಸಹಕಾರ ಸಂಸ್ಥೆಗಳಲ್ಲಿ ಮಾರುಕಟ್ಟೆ ಮಾಹಿತಿ ಪಡೆಯಲು ತಂತ್ರಜ್ಞಾನದ ಕೊರತೆಯಿದ್ದು ಐಟಿ ಬೆಂಬಲದ ಅವಶ್ಯಕತೆಯಿದೆ.

ಕೋವಿಡ್-19ರ ಲಾಕ್‌ಡೌನ್ ಹಂತದಲ್ಲಿ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನೆರವಿಗೆ ಧಾವಿಸಿ, ತೊಂದರೆಗೊಳಗಾದ ಕೊಳಗೇರಿ ನಿವಾಸಿಗಳು, ನಿರ್ಗತಿಕರು, ಕೂಲಿ ಕಾರ್ಮಿಕರು, ವಲಸೆ ಕಾರ್ಮಿಕರು ಹಾಗೂ ಪರಿಹಾರ ಕೇಂದ್ರದಲ್ಲಿ ಉಳಿದಿದ್ದ ಬಡ ಜನತೆಗೆ ಪ್ರತಿ ದಿನ 7.75 ಲಕ್ಷ ಲೀ. ಹಾಲನ್ನು ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿಯಿಂದ ಖರೀದಿಸಿ ಉಚಿತವಾಗಿ ವಿತರಿಸಿತು. ರಾಜ್ಯದ ಎಲ್ಲಾ 160 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದೆ. ಕೇಂದ್ರ ಸರ್ಕಾರದ ಇ-ನ್ಯಾಮ್ ಪೋರ್ಟಲ್‌ಗೆ ಕಲಬುರಗಿ ಹಾಗೂ ಚಿಂಚೋಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಜೋಡಣೆ ಮಾಡಲಾಗಿದೆ. ಇದರ ಜೊತೆಗೆ ಹೆಚ್ಚುವರಿಯಾಗಿ ಇನ್ನೂ 3 ಸಮಿತಿಗಳನ್ನು ಇ-ನ್ಯಾಮ್ ವೇದಿಕೆಯಡಿ ಜೋಡಿಸಲು ಕ್ರಮ ವಹಿಸಲಾಗುತ್ತಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣದಲ್ಲಿನ ನಿವೇಶನ, ಗೋದಾಮು, ಅಂಗಡಿಗಳ ಹಂಚಿಕೆಯಲ್ಲಿ ರೈತ ಉತ್ಪಾದಕರ ಸಂಸ್ಥೆಗೆ ಶೇ.10 ರಷ್ಟು ಮೀಸಲಾತಿ ನೀಡಲು ಹಾಗೂ ಶೇ.50ರ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಆದೇಶ ಹೊರಡಿಸಲಾಗಿದೆ.

ರಾಜ್ಯದಲ್ಲಿ ಮತ್ತೊಮ್ಮೆ ಯಶಸ್ವಿನಿ ಆರೋಗ್ಯ ವಿಮಾ ಯೋಜನೆ ಜಾರಿಯಾಗಿದೆ. ಹಿಂದಿನ ಯೋಜನೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ 2022 ರ ನವೆಂಬರ್ 1 ರಿಂದ ಯೋಜನೆಯನ್ನು ಮರು ಜಾರಿಗೊಳಿಸಲಾಗಿದೆ. ಇದು ಅತ್ಯಂತ ಮಹತ್ವದ ಯೋಜನೆಯಾಗಿದ್ದು, 2003 ರಲ್ಲಿ ಮೊದಲ ಬಾರಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿತ್ತು.

2017 – 18 ರ ವರೆಗೆ ಯೋಜನೆ ಅಸ್ತಿತ್ವದಲ್ಲಿತ್ತು. ಇದೀಗ ಯೋಜನೆ ಜಾರಿಗೆ ಬಜೆಟ್‌ನಲ್ಲಿ 300 ಕೋಟಿ ರೂಪಾಯಿ ನಿಗದಿ ಮಾಡಲಾಗಿದೆ. ಸಹಕಾರ ಸಂಘ ಸಂಸ್ಥೆಗಳ ಸದಸ್ಯರ ಅನುಕೂಲಕ್ಕೆ ಈ ಯೋಜನೆ ಜಾರಿ ಮಾಡಿದ್ದು, ಫಲಾನುಭವಿ ಕುಟುಂಬಕ್ಕೆ ವಾರ್ಷಿಕ 5 ಲಕ್ಷ ರೂಪಾಯಿವರೆಗೆ ವೈದ್ಯಕೀಯ ವೆಚ್ಚ ಮರುಪಾವತಿಗೆ ಅವಕಾಶವಿದೆ. ಯಶಸ್ವಿನಿ ಸಂಪರ್ಕ ವ್ಯವಸ್ಥೆಯಲ್ಲಿರುವ ಆಸ್ಪತ್ರೆಗಳಲ್ಲಿ ನಗದುರಹಿತ ಚಿಕಿತ್ಸೆ ಪಡೆಯಬಹುದಾಗಿದೆ. ಇದಕ್ಕಾಗಿ ಸಹಕಾರ ಇಲಾಖೆ ವಿಸ್ತೃತ ಮಾರ್ಗಸೂಚಿ ಹೊರಡಿಸಿದ್ದು, ಸಹಕಾರ ಸಂಸ್ಥೆಗಳಲ್ಲಿ ಆರೋಗ್ಯ ಯೋಜನೆಗೆ ನೋಂದಣಿ ಪ್ರಕ್ರಿಯೆ ತೀವ್ರಗತಿಯಲ್ಲಿ ಸಾಗಿದೆ.




ಕರಡು ಸಮಿತಿ ಅಧ್ಯಕ್ಷರಾದ ಸುರೇಶ್ ಪ್ರಭಾಕರ್ ಅವರು ಹೊಸ ರಾಷ್ಟ್ರೀಯ ಸಹಕಾರ ನೀತಿ ರಚನೆ ಕುರಿತ ಸಭೆ ನಡೆಸಿರುವುದು.


Downloaded From: www.kpscvaani.com



ಸೇಡಂನಲ್ಲಿ ಆಯೋಜಿಸಲಾಗಿದ್ದ ಅಖಿಲ ಭಾರತ ಸಹಕಾರ ಸಪ್ತಾಹ–2022 ಉದ್ಘಾಟಿಸಿದ ಸಂದರ್ಭ.

2020–21ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ, ಉಂಡೆ ಕೊಬ್ಬರಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.10,300/– ಗಳ ಜೊತೆಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನವಾಗಿ ಪ್ರತಿ ಕ್ವಿಂಟಾಲ್‌ಗೆ ರೂ.1,000/– ಘೋಷಿಸಿ, ಖರೀದಿಸಲಾಗಿದೆ. 2020–21ನೇ ಸಾಲಿನಲ್ಲಿ, ಶೇಂಗಾ, ಕೊಬ್ಬರಿ, ತೊಗರಿ, ಹತ್ತಿ, ಕಡಲೇಕಾಳು, ಭತ್ತ, ರಾಗಿ ಹಾಗೂ ಜೋಳ ಉತ್ಪನ್ನಗಳ ಒಟ್ಟು 86,13,182 ಕ್ವಿಂಟಾಲ್ ಪ್ರಮಾಣವನ್ನು, ರೂ.2763.87 ಕೋಟಿ ವೆಚ್ಚದಲ್ಲಿ, ಅಂದಾಜು 3,22,359 ರೈತರಿಂದ ಖರೀದಿಸಲಾಗಿದೆ. 2021–22ನೇ ಸಾಲಿನಲ್ಲಿ, ಹೆಸರುಕಾಳು ಹಾಗೂ ಉದ್ದಿನಕಾಳು ಉತ್ಪನ್ನಗಳನ್ನು ಖರೀದಿಸಲು ಕ್ರಮ ವಹಿಸಲಾಯಿತು. ಈ ಯೋಜನೆಯಡಿ 1,39,790 ಕ್ವಿಂಟಾಲ್ ಹೆಸರುಕಾಳು ಉತ್ಪನ್ನವನ್ನು 24942 ರೈತರಿಂದ ಖರೀದಿಸಲಾಗಿದೆ.

ರಾಜ್ಯದ ರೈತರ ಮೇಲೆ ಪರೋಕ್ಷವಾಗಿ ಆಗುತ್ತಿದ್ದ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ಹಿತದೃಷ್ಟಿಯಿಂದ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಈ ಹಿಂದೆ ವಿಧಿಸುತ್ತಿದ್ದ ಮಾರುಕಟ್ಟೆ ಶುಲ್ಕವನ್ನು ಶೇ.1.5 ರಿಂದ ಶೇ.0.60ಕ್ಕೆ ಇಳಿಕೆ ಮಾಡಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಲೈಸನ್ಸ್ ಪಡೆದು ಕಾರ್ಯನಿರ್ವಹಿಸುವ ಮಹಿಳಾ ಪೇಟೆ ಕಾರ್ಯಕರ್ತರಿಗೆ ಪ್ರಾಂಗಣದಲ್ಲಿನ ನಿವೇಶನ, ಗೋದಾಮು, ಅಂಗಡಿ ಹಂಚಿಕೆಯಲ್ಲಿ ಶೇ.10ರಷ್ಟು ಮೀಸಲಾತಿ ಕಲ್ಪಿಸಲು ಕ್ರಮ ವಹಿಸಲಾಗಿದೆ.

ಬೆಂಗಳೂರಿನ ಸಿಂಗೇನ ಅಗ್ರಹಾರದ ಹಣ್ಣು ಮಾರುಕಟ್ಟೆಗೆ ಹೊಂದಿಕೊಂಡಿರುವ ಗೂಳಿಮಂಗಳ ಗ್ರಾಮದ 42 ಎಕರೆ 31 ಗುಂಟೆ ಜಾಗವನ್ನು ಸಮಿತಿಯ ವಶಕ್ಕೆ ಪಡೆದಿದ್ದು, ಸದರಿ ಪ್ರದೇಶದಲ್ಲಿ ಅತ್ಯಾಧುನಿಕ ತರಕಾರಿ ಮಾರುಕಟ್ಟೆಯನ್ನು ನಿರ್ಮಿಸಲು ಕ್ರಮ ವಹಿಸಲಾಗಿದೆ. ರೈತಸಂಜೀವಿನಿ ಯೋಜನೆಯಡಿ ರೈತರು ಕೃಷಿ ಹಾಗೂ ಕೃಷಿ ಮಾರಾಟ ಚಟುವಟಿಕೆಗಳಲ್ಲಿ ತೊಡಗಿದ್ದಾಗ ಆಕಸ್ಮಿಕವಾಗಿ ಮೃತಪಟ್ಟ ಅಥವಾ ಅಂಗವೈಕಲ್ಯಕ್ಕೆ ಒಳಗಾದ ಸಂದರ್ಭದಲ್ಲಿ ಈ ಯೋಜನೆಯಡಿ ಪರಿಹಾರ ನೀಡಲಾಗುತ್ತಿದೆ. ಮೆಣಸಿನಕಾಯಿ ಬೆಳೆಯುವ ರೈತರಿಗೆ ಸ್ಪರ್ಧಾತ್ಮಕ ದರ ಒದಗಿಸಲು ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಆಧುನಿಕ ಗುಣವಿಶ್ಲೇಷಣಾ ಘಟಕವನ್ನು ಸ್ಥಾಪಿಸಲು ಕ್ರಮ ವಹಿಸಲಾಗಿದೆ.

ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ನಿಯಮಾವಳಿ 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ 1997 ಹಾಗೂ ನಿಯಮಗಳು 2004ರಲ್ಲಿನ ಕೆಲವು ಕಲಂಗಳಲ್ಲಿ ಹಾಗೂ ನಿಯಮಗಳಲ್ಲಿ ಇದ್ದ ಗೊಂದಲಗಳನ್ನು ನಿವಾರಿಸಿ ಸ್ಪಷ್ಟತೆಯನ್ನು ತರುವ ಉದ್ದೇಶದಿಂದ ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ–2021ಕ್ಕೆ ವಿಧಾನಮಂಡಲದಲ್ಲಿ ಅನುಮೋದನೆ ಪಡೆದು 07/10/2021 ರಿಂದ ತಿದ್ದುಪಡಿಯನ್ನು ಜಾರಿ ಮಾಡಲಾಗಿದೆ. ಸಹಕಾರ ಸಂಘದಲ್ಲಿ ಕುಟುಂಬದ ಹಿಡಿತ ತಪ್ಪಿಸುವ, ಒಕ್ಕೂಟ ಹಾಗೂ ಮಹಾಮಂಡಳದ ನೌಕರರು ವೇತನ ಪಡೆಯುವ ಉದ್ಯೋಗಿಗಳಾಗಿರುವ ಕಾರಣ ಸಹಕಾರ ಸಂಘದ ಸದಸ್ಯರಾಗಲು ಪ್ರವೇಶ ನಿರ್ಬಂಧಿಸುವ, ಒಂದೇ ವ್ಯವಹಾರ ನಡೆಸುತ್ತಿರುವ ಎರಡಕ್ಕಿಂತ ಹೆಚ್ಚಿನ ಸಂಘಗಳಲ್ಲಿ ಸದಸ್ಯತ್ವ ಪಡೆದಿದ್ದರೆ, ಈ ಅಧಿನಿಯಮದ ತಿದ್ದುಪಡಿ ತರುವಾಯ 90 ದಿನಗಳ ಅವಧಿಯೊಳಗೆ ಒಂದು ಸಂಘದಲ್ಲಿ ಮುಂದುವರೆಯಲು ಅವಕಾಶ ನೀಡಲಾಗಿದೆ. ಯಾವ ಸಂಘದಲ್ಲಿ ಉಳಿಯಬೇಕು ಎಂಬುದನ್ನು ಆಯ್ಕೆ ಮಾಡಲು ವಿಫಲನಾದರೆ ಹೊಸದಾಗಿ ಸದಸ್ಯತ್ವ ಪಡೆದ ಸಂಘದಲ್ಲಿ ಸದಸ್ಯತ್ವ ಸ್ಥಗಿತಗೊಳ್ಳಲಿದೆ.

ಮೂರು ಸಾಮಾನ್ಯ ಸಭೆಗೆ ಗೈರಾದಲ್ಲಿ ಮತದಾನದ ಹಕ್ಕು ಕಳೆದುಕೊಳ್ಳುವುದು ಎಂಬುದರ ಬದಲಾಗಿ ಯಾವುದೇ ಎರಡು ಸಾಮಾನ್ಯ ಸಭೆಗೆ ಎಂಬುದನ್ನು ತಿದ್ದುಪಡಿಯಲ್ಲಿ ಪ್ರಸ್ತಾಪಿಸಿದ್ದು, ಸದಸ್ಯರ ಭಾಗವಹಿಸುವಿಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ■

> **ಕಾಯಕನಿಧಿ ಯೋಜನೆಯಡಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ಶ್ರಮಿಕರಿಗೆ ವೈದ್ಯಕೀಯ ವೆಚ್ಚ ಹಾಗೂ ಶವಸಂಸ್ಕಾರಕ್ಕೆ ಸಹಾಯಧನ ನೀಡಲಾಗುತ್ತಿದೆ.**



Downloaded From: www.kpscvaani.com




# ಶತಮಾನ ವರ್ಷಾಚರಣೆಗೆ ಸಜ್ಜಾದ ಬೆಳಗಾವಿಯ ಹಿಂಡಲಗಾ ಕಾರಾಗೃಹ !

ಡಿ. ಪಿ. ಮುರಳೀಧರ್

ಒಂದು ನೂರು ವರ್ಷದ ಅಸ್ತಿತ್ವ ಎಂಬುದು ವ್ಯಕ್ತಿಗಾಗಲೀ ಅಥವಾ ಸಂಸ್ಥೆಗಾಗಲೀ ಒಂದು ದಾಖಲೆಯೇ. ಓರ್ವ ವ್ಯಕ್ತಿ ಶತಾಯುಷಿಯಾದಾಗ ಆ ವ್ಯಕ್ತಿಗಿಂತಲೂ ಅವರ ಸಂಗಾತಿ ಮತ್ತು ಜೊತೆಗಾರರು ಸಂಭ್ರಮಿಸುವುದು ಸಹಜ. ಅಂತೆಯೇ, ಒಂದು ಸಂಸ್ಥೆಯು ಒಂದು ಶತಮಾನವನ್ನು ಕಂಡಾಗಲೂ ಅದರ ಅಸ್ತಿತ್ವವನ್ನು ಸ್ಮರಿಸುವುದು ಅವಶ್ಯಕ. ಒಂದು ಶತಮಾನವನ್ನು ಕಂಡ ಶಾಲೆಗಳು, ಮಹಾವಿದ್ಯಾಲಯಗಳು, ವಿಶ್ವವಿದ್ಯಾಲಯಗಳು, ವಿದ್ಯಾರ್ಥಿ ನಿಲಯಗಳು, ಅಷ್ಟೇ ಏಕೆ ? ದೇವಾಲಯಗಳು, ಪ್ರಾರ್ಥನಾ ಮಂದಿರಗಳು, ತಿನಿಸು ಧಾಮಗಳು, ವಿಹಾರ ಧಾಮಗಳು ಏನೇ ಇದ್ದರೂ ಅವುಗಳನ್ನು ಕಂಡು ಸಂಭ್ರಮಿಸುತ್ತೇವೆ. ಆದರೆ, ಆರಕ್ಷಕ ಠಾಣೆಗಳು ಮತ್ತು ಕಾರಾಗೃಹಗಳು ಶತಮಾನವನ್ನು ಸಾಗಿ ಬಂದಾಗ, ಕಂಡೂ ಕಾಣದಂತೆ ಮೌನಕ್ಕೆ ಶರಣಾಗುತ್ತೇವೆ. ಏಕೆ ? ಬಹುಶಃ ಇವುಗಳ ಮಹತ್ವವನ್ನು ನಾವು ಅರಿಯದೇ ಇರುವುದೇ ಇದಕ್ಕೆ ಕಾರಣ ಇರಬಹುದು.

ಅಪರಾಧಗಳನ್ನು ಎಸಗಿರುವವರನ್ನು ಬಂಧಿಸಲು ಆರಕ್ಷಕ ಠಾಣೆಗಳು, ಅಪರಾಧ ಸಾಬೀತಾದಾಗ ಶಿಕ್ಷೆ ಪ್ರಕಟಿಸುವ ನ್ಯಾಯಾಲಯಗಳು ಹಾಗೂ ಅಪರಾಧಿಗಳಿಗೆ ಸೆರೆವಾಸ ನೀಡುವ ಕಾರಾಗೃಹಗಳ ವ್ಯವಸ್ಥೆ ಇಲ್ಲದಾಗ, ಸಮಾಜ ಹೇಗಿರುತ್ತದೆ ? ಎಂಬುದನ್ನು ಊಹಿಸಲೂ ಅಸಾಧ್ಯ. ನೆಮ್ಮದಿಯ ಸಮಾಜಕ್ಕೆ ಆರಕ್ಷಕ ಠಾಣೆಗಳು, ನ್ಯಾಯಾಲಯಗಳು ಹಾಗೂ ಕಾರಾಗೃಹಗಳ ಅಧಿಕಾರಿ ಮತ್ತು ಸಿಬ್ಬಂದಿಯ ಪಾತ್ರ ಮತ್ತು ಪಾಲು ಅತೀ ಮುಖ್ಯ ಎಂಬುದನ್ನು ನಾವು ಮನಗಾಣಬೇಕಿದೆ.

ತಪ್ಪು ಮಾಡಿದವರಿಗೆ ಶಿಕ್ಷೆ ನೀಡಿ, ಆ ತಪ್ಪನ್ನು ಮತ್ತೊಬ್ಬರು ಮಾಡದಂತೆ ನೋಡಿಕೊಳ್ಳಬೇಕೆಂಬ ಪರಿಕಲ್ಪನೆ ಇಂದು ನಿನ್ನೆಯದಲ್ಲ. ಸಹಸ್ರಾರು ವರ್ಷಗಳಿಂದ ಜಗತ್ತಿನಾದ್ಯಂತ ಈ ನೀತಿಯನ್ನು ಪಾಲಿಸಿಕೊಂಡು ಬರಲಾಗುತ್ತಿದೆ. ಅರೇಬಿಯಾದ ಇತಿಹಾಸದಲ್ಲೂ, ಪಾಶ್ಚಿಮಾತ್ಯ ದೇಶಗಳ ಚರಿತ್ರೆಗಳಲ್ಲೂ ಹಾಗೂ ಭಾರತದ ಹಲವು ಕಥೆಗಳಲ್ಲೂ ಕಾರಾಗೃಹದ ಉಲ್ಲೇಖಗಳನ್ನು ನಾವು ಕಾಣಬಹುದು.


Downloaded From: www.kpscvaani.com



ಗಾರ್ಮೆಂಟ್ಸ್ ಕೆಲಸದಲ್ಲಿ ನಿರತರಾಗಿರುವ ಖೈದಿಗಳು.

ತ್ರೇತಾಯುಗದಲ್ಲಿ ತನ್ನ ತಂದೆ ವಸುದೇವ ಮತ್ತು ತಾಯಿ ದೇವಕಿ ಕಾರಾಗೃಹದಲ್ಲಿ ಸೆರೆವಾಸ ಅನುಭವಿಸುತ್ತಿದ್ದಾಗಲೇ ಶ್ರೀ ಕೃಷ್ಣ ಪರಮಾತ್ಮನು ಜನಿಸಿದನು ಎಂಬ ರೋಚಕ ಸಂಗತಿ ಕಾರಾಗೃಹಗಳಿಗೆ ಸಹಸ್ರಾರು ವರ್ಷಗಳ ಅಸ್ತಿತ್ವ ಇದೆ ಎಂಬುದನ್ನು ಸಾಬೀತುಪಡಿಸುತ್ತದೆ.

**ಅಪರಾಧಕ್ಕೆ ಕಾರಣಗಳೇನು ?**

ಅರಿಷಡ್ವರ್ಗಗಳು ಎನಿಸಿದ ಕಾಮ (ಲಸ್ಟ್ : ಡಿಸೈರ್), ಕ್ರೋಧ (ಆಂಗರ್), ಲೋಭ (ಗ್ರೀಡ್), ಮದ (ಆರೋಗೆನ್ಸ್ ), ಮೋಹ (ಡಿಲೂಷನ್ : ಇನ್‌ಫ್ಯಾಟ್ಯೇಷನ್) ಮತ್ತು ಮಾತ್ಸರ್ಯ (ಜೆಲ ) ಗಳು ಮಾನಸಿಕ ನಿಯಂತ್ರಣದಲ್ಲಿ ಇಲ್ಲದಾಗ ಅಪರಾಧಗಳು ಸಂಭವಿಸುತ್ತವೆ. ಬಹುತೇಕ ಅಪರಾಧಗಳಿಗೆ ವೈನ್, ವುಮೆನ್ ಅಂಡ್ ವೆಲ್ತ್ (ಹೆಂಡ, ಹೆಣ್ಣು ಮತ್ತು ಹಣ) ಕಾರಣ ಎಂಬುದು ಪಾಶ್ಚಿಮಾತ್ಯರ ತರ್ಕ. ಕ್ಷಣ ಮಾತ್ರದಲ್ಲಿ ಸ್ಫೋಟಗೊಳ್ಳುವ ಕೋಪ ಕೊಲೆ, ಕಗ್ಗೊಲೆಗಳಿಗೆ ಎಡೆಮಾಡಿಕೊಟ್ಟಿದೆ ಎಂಬುದಕ್ಕೆ ಸಾವಿರಾರು ನಿದರ್ಶನಗಳುಂಟು.

**ಅಪರಾಧ ಜಗತ್ತು : ಒಂದು ಪರಿಚಯ**

ಕಾರಾಗೃಹದಲ್ಲಿ ಇರುವವರೆಲ್ಲರೂ ಖೈದಿಗಳಲ್ಲ. ವಿಚಾರಣಾಧೀನ ಖೈದಿಗಳೂ ಇರುತ್ತಾರೆ. ಹಾಗಾದರೆ ವಿಚಾರಣಾಧೀನ ಖೈದಿಗಳು ಎಂದರೇನು ? ಎಂಬ ತಮ್ಮ ಪ್ರಶ್ನೆಗೆ ಇಲ್ಲಿದೆ ಉತ್ತರ.

**ಆರೋಪಿ !**

ಕಳ್ಳತನ, ಸುಲಿಗೆ, ದರೋಡೆ, ಡಕಾಯಿತಿ, ಕೊಲೆ, ಕಗ್ಗೊಲೆ, ಅತ್ಯಾಚಾರ ಒಳಗೊಂಡಂತೆ ಲೈಂಗಿಕ ಅಪರಾಧಗಳು ಹೀಗೆ ವಿವಿಧ ಅಪರಾಧಗಳನ್ನು ಎಸಗಿದ ಅಥವಾ ಎಸಗಿದವರೆನ್ನಲಾದ ವ್ಯಕ್ತಿಗಳನ್ನು ಪೊಲೀಸರು ಬಂಧಿಸುತ್ತಾರೆ. ಅಂತಹವರು ಆರೋಪಿ ಎನಿಸುತ್ತಾರೆ.

**ವಿಚಾರಣಾಧೀನ ಖೈದಿ !**

ಪ್ರಕರಣದಲ್ಲಿ ಭಾಗಿಯಾದವರ ಕುರಿತು ಪೊಲೀಸರು ಪ್ರಥಮ ಮಾಹಿತಿ ವರದಿ : ಪ್ರಥಮ ವರ್ತಮಾನ ವರದಿ (ಫಸ್ಟ್ ಇನ್‌ಫರ್‌ಮೇಷನ್ ರಿಪೋರ್ಟ್) ಸಿದ್ಧಪಡಿಸುತ್ತಾರೆ. ನಂತರ, ಅಂತಹವರ ವಿರುದ್ಧ ಸ್ಥಳೀಯ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ (ಚಾರ್ಜ್ ಶೀಟ್) ಸಲ್ಲಿಸುತ್ತಾರೆ. ನ್ಯಾಯಾಲಯವು ಆರೋಪಿಯನ್ನು ಕೆಲವೊಮ್ಮೆ ಗರಿಷ್ಠ 14 ದಿನಗಳ ಪೊಲೀಸ್ ವಶಕ್ಕೆ ನೀಡುತ್ತದೆ ಅಥವಾ ನ್ಯಾಯಾಂಗ ಬಂಧನಕ್ಕೆ ಒಳಪಡಿಸುತ್ತದೆ. ಆಗ ಆ ಆರೋಪಿ ವಿಚಾರಣಾಧೀನ ಖೈದಿಯಾಗುತ್ತಾನೆ.

**ಅಪರಾಧಿ !**

ಸುದೀರ್ಘ ವಿಚಾರಣೆಯ ನಂತರ ವಿಚಾರಣಾಧೀನ ಖೈದಿಯಾಗಿ ಜೈಲು ಸೇರಿರುವ ಆರೋಪಿ ಕುರಿತು ಪೊಲೀಸರು ಮತ್ತು ಅಭಿಯೋಜಕರು ಆಧಾರ, ಪುರಾವೆ ಹಾಗೂ ಸಾಕ್ಷಿ ಸಮೇತ ಸಾಬೀತುಪಡಿಸಲು ವಿಫಲರಾದಲ್ಲಿ ನ್ಯಾಯಾಲಯವು ಆರೋಪಿಯನ್ನು ಖುಲಾಸೆಗೊಳಿಸುತ್ತದೆ. ಆಧಾರ, ಪುರಾವೆ ಹಾಗೂ ಸಾಕ್ಷಿ ಸಮೇತ ಸಾಬೀತುಪಡಿಸಲು ಸಫಲರಾದಲ್ಲಿ ಶಿಕ್ಷೆ ಪ್ರಕಟಿಸುತ್ತದೆ. ನ್ಯಾಯಾಲಯವು ಆರೋಪಿಯನ್ನು ಖುಲಾಸೆಗೊಳಿಸಿದರೆ, ಸ್ವತಂತ್ರ ಹಕ್ಕಿಯಾಗುತ್ತಾನೆ. ಶಿಕ್ಷೆ ಪ್ರಕಟಿಸಿದರೆ, ಆತ ಅಪರಾಧಿಯಾಗುತ್ತಾನೆ.

**ಖೈದಿ !**

ಅಪರಾಧಿ ಎಂದು ಶಿಕ್ಷೆ ಪ್ರಕಟಿಸಿದ ಕೂಡಲೇ, ಆತನನ್ನು ಕಾರಾಗೃಹಕ್ಕೆ ಕರೆದೊಯ್ಯಲಾಗುತ್ತದೆ. ಆಗ ಆತ ಖೈದಿಯಾಗುತ್ತಾನೆ.

**ಬೇಲ್ ಮತ್ತು ಪೆರೋಲ್ !**

ಜೈಲಿನಲ್ಲಿ ವಿಚಾರಣಾಧೀನ ಖೈದಿಯಾಗಿರುವ ಸಂದರ್ಭದಲ್ಲಿ, ನ್ಯಾಯಾಲಯದ ಮೂಲಕ ಜಾಮೀನು (ಬೇಲ್) ಪಡೆಯಬಹುದು. ಅಂತೆಯೇ, ಖೈದಿಯಾಗಿರುವಾಗ ಕೆಲದಿನಗಳ ಮಟ್ಟಿಗೆ ಮನೆಗೆ ಮರಳಲು ನ್ಯಾಯಾಲಯವು ಪೆರೋಲ್ ಮಂಜೂರು ಮಾಡಲೂಬಹುದು. ಉದಾಹರಣೆಗೆ : ಮಕ್ಕಳ ಮದುವೆ, ತಂದೆ-ತಾಯಿಯ ಸಾವು ಇದ್ದಲ್ಲಿ ಸಚ್ಚಾರಿತ್ರ ಹೊಂದಿರುವ ಖೈದಿಗಳಿಗೆ



ಯೋಗಾಭ್ಯಾಸದಲ್ಲಿ ನಿರತರಾಗಿರುವ ಖೈದಿಗಳು.



Downloaded From: www.kpscvaani.com

### ಕಾರಾಗೃಹ ಪ್ರವಾಸೋದ್ಯಮ ?

ಐದು ನೂರು ರೂಪಾಯಿ ನೀಡಿ. ಒಂದು ದಿನದ ಮಟ್ಟಿಗೆ ಜೈಲಿನ ಸುಖ ಅನುಭವಿಸಿ! ಹೌದು ! ಕಳೆದ ವರ್ಷ ಮಾಧ್ಯಮದಲ್ಲಿ ಹರಿದಾಡಿದ ಸುದ್ದಿ ಇದು.

ಐದು ನೂರು ರೂಪಾಯಿ ಕೊಟ್ಟು ಕಾರಾಗೃಹದೊಳಗೆ ಸೇರಬಹುದು. ಖೈದಿಗಳು ತೊಡುವ ಉಡುಪನ್ನೇ ತೊಡಬಹುದು. ಖೈದಿಗಳು ತಯಾರಿಸುವ ಆಹಾರವನ್ನೇ ತಿನ್ನಬಹುದು. ಖೈದಿಗಳೊಂದಿಗೆ ಒಂದು ರಾತ್ರಿ ಮಲಗಬಹುದು. ಖೈದಿಗಳ ಕಷ್ಟವನ್ನು ಅರಿಯಬಹುದು.

ಹಿಂಡಲಗಾದ ಕಾರಾಗೃಹ ಅಧಿಕಾರಿಗಳು ಇಂತಹ ಪರಿಕಲ್ಪನೆಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಈ ಪ್ರಸ್ತಾವನೆಯನ್ನು ಸರ್ಕಾರ ಅನುಮೋದಿಸಿ ಅಂಗೀಕರಿಸಿದಲ್ಲಿ ಪ್ರವಾಸೋದ್ಯಮದಲ್ಲಿ ಕಾರಾಗೃಹ ಪ್ರವಾಸೋದ್ಯಮ ಎಂಬ ಹೊಸ ಆಯಾಮ ಪ್ರಾರಂಭವಾಗಲಿದೆ. ಕಾರಾಗೃಹಕ್ಕೆ ಆದಾಯ ಹರಿದು ಬರುವುದಲ್ಲದೆ, ಕಾರಾಗೃಹ ಸೇರುವಂತಹ ಕೆಲಸಗಳಲ್ಲಿ ತೊಡಗಬಾರದು ಎಂಬ ಸಾಮಾಜಿಕ ಪ್ರಜ್ಞೆ ಜನಸಾಮಾನ್ಯರಲ್ಲಿ ಮೂಡುತ್ತದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಆದರೆ, ಈ ಸುದ್ದಿ ಆಧಾರ–ರಹಿತ ಮಾತ್ರವಲ್ಲ, ಸತ್ಯಕ್ಕೆ ದೂರವಾದದ್ದು. ಜೈಲು ಕೈಪಿಡಿಯಲ್ಲಿ ನ್ಯಾಯಾಲಯದ ಆದೇಶವಿಲ್ಲದೆ ಯಾರನ್ನೂ ಒಳಬಿಡುವಂತಿಲ್ಲ. ಹೀಗಿರುವಾಗ ಇಂತಹ ಸುದ್ದಿ ಹೇಗೆ ಜನ್ಮ ತಾಳಿತೋ ಗೊತ್ತಿಲ್ಲ ಎಂದು ಹಿಂಡಲಗಾ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಕೃಷ್ಣ ಕುಮಾರ್ ಅವರು ಅಚ್ಚರಿ ವ್ಯಕ್ತಪಡಿಸುತ್ತಾರೆ.

ನ್ಯಾಯಾಲಯಗಳು ಕೆಲದಿನಗಳ ಮಟ್ಟಿಗೆ ಪೆರೋಲ್ ಮಂಜೂರು ಮಾಡಲು ಅವಕಾಶವಿದೆ. ಪೆರೋಲ್ ಅಂದರೆ ಒಂದು ರೀತಿ ರಜೆ ಮೇಲೆ ಜೈಲಿನಿಂದ ಹೊರಗೆ ಕಳುಹಿಸುವುದು.

### ಜೈಲು ಚರಿತ್ರೆ

ಒಂದು ವರದಿಯ ಪ್ರಕಾರ 2020 ರ ಡಿಸೆಂಬರ್ 31 ಕ್ಕೆ, ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಜೈಲುಗಳ ಸಂಖ್ಯೆ 1306. ಈ ಎಲ್ಲಾ ಜೈಲುಗಳಲ್ಲಿ ಇರಿಸಬಹುದಾದ ವ್ಯಕ್ತಿಗಳ ಸಂಖ್ಯೆ 4,14,033 ಇದ್ದರೂ, ಈ ಜೈಲುಗಳಲ್ಲಿದ್ದವರ ಸಂಖ್ಯೆ 4,88,511 ಇತ್ತು ಎಂಬುದು ಸಾಮರ್ಥ್ಯಕ್ಕಿಂತಲೂ ಹೆಚ್ಚು ಬಂಧಿಗಳನ್ನು ಜೈಲಿನಲ್ಲಿ ಇರಿಸಬೇಕಾದ ಪ್ರಸಂಗಗಳು ಉದ್ಭವಿಸುತ್ತಿವೆ ಎಂಬುದಕ್ಕೆ ಸಾಕ್ಷಿ.

ಭಾರತದಲ್ಲಿರುವ 1306 ಜೈಲುಗಳಲ್ಲಿ 145 ಕೇಂದ್ರೀಯ ಕಾರಾಗೃಹಗಳು, 413 ಜಿಲ್ಲಾ ಕಾರಾಗೃಹಗಳು, 565 ಉಪ ಕಾರಾಗೃಹಗಳು, 44 ವಿಶೇಷ ಕಾರಾಗೃಹಗಳು, 29 ಮಹಿಳಾ ಕಾರಾಗೃಹಗಳು, 19 ಯುವ ಅಪರಾಧಿ ಸುಧಾರಣಾ ಶಾಲೆಗಳು ( ಬೋರ್ಸ್ಟಲ್ ಸ್ಕೂಲ್ಸ್ ) ಹಾಗೂ ಇತರೆ ಮೂರು ಕಾರಾಗೃಹಗಳಿವೆ.

ದೆಹಲಿಯಲ್ಲಿ ಅತೀ ಹೆಚ್ಚು ಕೇಂದ್ರೀಯ ಕಾರಾಗೃಹಗಳಿವೆ. ಉತ್ತರ ಪ್ರದೇಶದಲ್ಲಿ ಅತೀ ಹೆಚ್ಚು ಜಿಲ್ಲಾ ಕಾರಾಗೃಹಗಳಿವೆ. ಅಂತೆಯೇ, ರಾಜಾಸ್ಥಾನದಲ್ಲಿ ಅತೀ ಹೆಚ್ಚು ಸಂಖ್ಯೆಯ ಕಾರಾಗೃಹಗಳಿವೆ ಎಂದೂ ಈ ವರದಿ ತಿಳಿಸುತ್ತದೆ.

ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು, ಬೆಳಗಾವಿ, ಬಳ್ಳಾರಿ, ವಿಜಯಪುರ (ಬಿಜಾಪುರ), ಕಲಬುರಗಿ (ಗುಲಬರ್ಗಾ), ಮೈಸೂರು, ಧಾರವಾಡ ಮತ್ತು ತುಮಕೂರಿನಲ್ಲಿ ಕೇಂದ್ರ ಕಾರಾಗೃಹಗಳಿವೆ. ಅಲ್ಲದೆ, 19 ಜಿಲ್ಲಾ ಕಾರಾಗೃಹಗಳು, 70 ಉಪ ಕಾರಾಗೃಹಗಳು, ಧಾರವಾಡದಲ್ಲಿ ಒಂದು ಯುವ ಅಪರಾಧಿ ಸುಧಾರಣಾ ಶಾಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕೋರಮಂಗಲದಲ್ಲಿ ಒಂದು ಬಯಲು ಕಾರಾಗೃಹ (ಓಪನ್ ಜೈಲ್), ಎರಡು ವಿಶೇಷ ಕಾರಾಗೃಹಗಳು ಹಾಗೂ ಒಂದು ಇತರೆ ಅಂದರೆ ಬಾಲಾಪರಾಧಿ ಕಾರಾಗೃಹ (ಜುವೆನೈಲ್ ಜೈಲ್) ಇದೆ.

ರಾಜ್ಯದಲ್ಲಿ 1862 ರಲ್ಲಿ ಸ್ಥಾಪಿತವಾದ ಮೈಸೂರಿನ ಕೇಂದ್ರ ಕಾರಾಗೃಹವು ಅತ್ಯಂತ ಹಳೆಯ ಕಾರಾಗ್ರಹ ಎನಿಸಿದೆ. ನಂತರದ ಸ್ಥಾನದಲ್ಲಿ 1884 ರಲ್ಲಿ ಸ್ಥಾಪಿತವಾದ ಬಳ್ಳಾರಿಯ ಕೇಂದ್ರ ಕಾರಾಗೃಹ, ತದ ನಂತರದ ಸ್ಥಾನದಲ್ಲಿ 1888 ರಲ್ಲಿ ಸ್ಥಾಪಿತವಾದ ಬಿಜಾಪುರದ (ಇಂದಿನ ವಿಜಯಪುರ) ಕೇಂದ್ರ ಕಾರಾಗೃಹ, ಇವೆಲ್ಲದರ ನಂತರ 1923 ರಲ್ಲಿ ಸ್ಥಾಪಿತವಾದ ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹ ಇದೀಗ ಒಂದು ನೂರು ವರ್ಷಗಳು ಸಾಗಿ ಬಂದು ಶತಮಾನದ ಅಸ್ತಿತ್ವವನ್ನು ಕಂಡಿದೆ.

### ಶತಮಾನ ಕಂಡ ಹಿಂಡಲಗಾ ಕೇಂದ್ರ ಕಾರಾಗೃಹ !

ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹ ಇದೀಗ ಶತಮಾನ ವರ್ಷಾಚರಣೆಗೆ ಸಜ್ಜಾಗಿದೆ. ಸುಮಾರು ಒಂದು ನೂರು ಎಕರೆ ವಿಸ್ತೀರ್ಣದ ಈ ಕಾರಾಗೃಹ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದ್ದು 1908 ರಲ್ಲಿ. ಹದಿನಾಲ್ಕು ವರ್ಷಗಳ ನಂತರ ಅಂದರೆ 1922 ರಲ್ಲಿ ಕಾರಾಗೃಹದ ನಿರ್ಮಾಣ ಕಾಮಗಾರಿಗಳು ಪೂರ್ಣಗೊಳ್ಳುತ್ತವೆ. ಅಂತೆಯೇ, 1923 ರಲ್ಲಿ ಈ ಕಾರಾಗೃಹವು ತನ್ನ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸುತ್ತದೆ.

ಕಾರಾಗೃಹದ ಒಳಭಾಗದ ತಪಾಸಣಾ ಗೋಡೆಯ ಮೇಲೆ 19 ವರ್ಣ ಚಿತ್ರಗಳು ಹಾಗೂ ಮಹಾದ್ವಾರದ ಮೇಲೆ ಕೆತ್ತಿರುವ 23 ಚಿತ್ರಗಳು ಈ ಕಾರಾಗೃಹದ ಸ್ಥಾಪನಾ ವರ್ಷವನ್ನು ಸ್ಮರಣೀಯವಾಗಿಸಿದೆ. ಇದು ಅಂದಿನ ತಂತ್ರಜ್ಞರ ದೂರದೃಷ್ಟಿಗೆ ಒಂದು ಉದಾಹರಣೆ.

ಈ ಕಾರಾಗೃಹದಲ್ಲಿ ವಿಚಾರಣಾಧೀನ ಖೈದಿಗಳು ಮತ್ತು ಖೈದಿಗಳು ಮಾತ್ರವಲ್ಲ, ಸ್ವಾತಂತ್ರ್ಯ ಯೋಧರು, ರಾಜಕೀಯ ಬಂಧಿಗಳು ಹಾಗೂ ಕೆಲವು ಪ್ರಮುಖರು ಇದ್ದರು ಎಂಬುದು ಗಮನಾರ್ಹ.

ನರಬಲಿ ಎಂಬ ಶೀರ್ಷಿಕೆಯಲ್ಲಿ ಪ್ರಚೋದನಾ ಕವಿತೆ ಬರೆದ ಆರೋಪ ಹೊತ್ತ ವರಕವಿ ದ ರಾ ಬೇಂದ್ರೆ (ಅಂಬಿಕಾತನಯ ದತ್ತ ಕಾವ್ಯನಾಮದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ) ಅವರು 1932 ರ ಜೂನ್ ತಿಂಗಳಲ್ಲಿ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಸೆರೆವಾಸ ಅನುಭವಿಸಿದ್ದರು. ಅಂತೆಯೇ, 1942 ರಲ್ಲಿ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ಚಳುವಳಿಯಲ್ಲಿ ಪಾಲ್ಗೊಂಡಿದ್ದ ಹಾಗೂ


Downloaded From: www.kpscvaani.com

ನಂತರ ಭಾರತದ ಪ್ರಧಾನ ಮಂತ್ರಿ ಸ್ಥಾನ ಅಲಂಕರಿಸಿದ ಗುಲ್‌ಜಾರಿ ಲಾಲ್ ನಂದಾ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ವಾನರ ಸೇನೆಯಲ್ಲಿ ಮುಂಚೂಣಿಯಲ್ಲಿದ್ದ ಮೃದುಲಾ ಸಾರಾಬಾಯಿ, ಸರ್ದಾರ್ ವಲ್ಲಭ್ ಭಾಯಿ ಪಟೇಲ್ ಅವರ ಪುತ್ರಿ ಮಣಿಬೆನ್ ಪಟೇಲ್ ಒಳಗೊಂಡಂತೆ ಹಲವು ಸ್ವಾತಂತ್ರ್ಯ ಹೋರಾಟಗಾರರು ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿದ್ದರು.

ಸ್ವಾತಂತ್ರ್ಯಾ ಪೂರ್ವದಲ್ಲಿ ಬ್ರಿಟೀಷರ ಆಡಳಿತದಲ್ಲಿ ಹಲವು ಕಾರಾಗೃಹಗಳಲ್ಲಿ ಬಂಧಿಯಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ವೀರ್ ಸಾವರ್ಕರ್ ಎಂದೇ ಹೆಸರಾದ ವಿನಾಯಕ್ ದಾಮೋದರ್ ಸಾವರ್ಕರ್ ಅವರೂ ಕೂಡಾ ಸ್ವಾತಂತ್ರ್ಯಾ ನಂತರದಲ್ಲಿ 1950 ರ ಏಪ್ರಿಲ್ 4 ರಿಂದ ಜುಲೈ 13 ರ ವರೆಗೆ ಬೆಳಗಾವಿಯ ಹಿಂಡಲಗಾ ಕಾರಾಗೃದದಲ್ಲಿ ಸೆರೆವಾಸ ಅನುಭವಿಸಿದ್ದರು ಎಂಬುದು ಇದೀಗ ಇತಿಹಾಸ.

ರಾಜ್ಯದಲ್ಲಿಯೇ ಬೆಳಗಾವಿಯ ಹಿಂಡಲಗಾ ಕಾರಾಗೃಹದಲ್ಲಿ ಏಕ ಕಾಲಕ್ಕೆ ಮೂವರಿಗೆ ಕುಣಿಕೆ ಹಾಕಿ ಗಲ್ಲು ಶಿಕ್ಷೆಗೆ ಒಳಪಡಿಸಲು ಅವಕಾಶವಿರುವ ವಧಾ ಸ್ಥಳ ಇದೆ ಎಂಬುದು ಗಮನಾರ್ಹ. ಸ್ವಾತಂತ್ರ್ಯಾ ನಂತರದಲ್ಲಿ ಅಂದರೆ 1947 ರ ಡಿಸೆಂಬರ್ 30 ರಿಂದ ಈ ಕಾರಾಗೃಹದಲ್ಲಿ 1983 ರ ನವೆಂಬರ್ 9 ರವರೆಗೆ ನ್ಯಾಯಾಲಯ ಶಿಕ್ಷೆ ಪ್ರಕಟಿಸಿರುವ 39 ಖೈದಿಗಳಿಗೆ ಗಲ್ಲು ಶಿಕ್ಷೆ ವಿಧಿಸಲಾಗಿದೆ. ಅಂತೆಯೇ, 1983 ರ ನವೆಂಬರ್ 9 ರ ನಂತರ ಈವರೆಗೆ ಯಾರನ್ನೂ ಗಲ್ಲಿಗೇರಿಸುವ ಪ್ರಮೇಯ ಉದ್ಭವಿಸಿರುವುದಿಲ್ಲ.


ಸಣ್ಣ ಅಪರಾಧಿಗಳಿಂದ ನರಹಂತಕನ ಸಹಚರರೂ, ಸೈಯನೈಡ್ ಕೊಲೆಗಡುಕಿ, ವಿಕೃತ ಕಾಮಿ, ಅತ್ಯಾಚಾರಿಗಳು, ದರೋಡೆಕೋರರು, ಕೊಲೆಗಡುಕರು ಎಲ್ಲರೂ ಇರುವ ಈ ಕಾರಾಗೃಹದಲ್ಲಿ 1611 ಬಂಧಿಗಳನ್ನು ಇರಿಸಲು ಅವಕಾಶವಿದೆ. ರಾಷ್ಟ್ರದ ಹಾಗೂ ರಾಜ್ಯದ ಬಹುತೇಕ ಕಾರಾಗೃಹಗಳು ತಮ್ಮ ಸಾಮರ್ಥ್ಯಕ್ಕಿಂತಲೂ ಹೆಚ್ಚಿನ ಬಂಧಿಗಳಿಗೆ ನೆಲೆ ಕಲ್ಪಿಸಿದೆ. ಆದರೆ, ಹಿಂಡಲಗಾದ ಈ ಕೇಂದ್ರೀಯ ಕಾರಾಗೃಹದಲ್ಲಿ ಸಾಮರ್ಥ್ಯಕ್ಕಿಂತಲೂ ಕಡಿಮೆ ಸಂಖ್ಯೆಯ ಬಂಧಿಗಳು ಇದ್ದಾರೆ ಎಂಬುದೇ ವಿಶೇಷ.

**ಶಿಕ್ಷೆಯಲ್ಲ ! ಶಿಕ್ಷಣ !**

ಒಂದು ಕಾಲದಲ್ಲಿ ಜೈಲು ಎಂದರೆ ಶಿಕ್ಷೆಯ ತಾಣವಾಗಿತ್ತು. ಆದರೆ, ಶಿಕ್ಷೆಯ ಅವಧಿಯ ನಂತರ, ಅಪರಾಧಿಗಳು ಮತ್ತೆ ಅಪರಾಧ ಜಗತ್ತಿನಲ್ಲಿ ಸುಳಿಯಬಾರದು ಎಂಬ ಸದುದ್ದೇಶದೊಂದಿಗೆ ಕರ್ನಾಟಕದಲ್ಲಿ ಗೃಹ ಸಚಿವಾಲಯದ ಒಂದು ಭಾಗವಾಗಿದ್ದ ಬಂಧೀಖಾನೆ ಇಲಾಖೆ, ಇದೀಗ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯಾಗಿ ಪರಿವರ್ತಿತಗೊಂಡಿದೆ. ಖೈದಿಗಳ ಮನಃಪರಿವರ್ತನೆಗೆ ಹಲವಾರು ಕ್ರಮಗಳನ್ನು ಜಾರಿಗೊಳಿಸಿದೆ. ಅದರಲ್ಲಿ ಪ್ರಮುಖವಾಗಿ ಕಾರಾಗೃಹಗಳಲ್ಲಿ ಯೋಗ ಮತ್ತು ಧ್ಯಾನಕ್ಕೆ ಅವಕಾಶ ಕಲ್ಪಿಸಿದೆ.

ಅಷ್ಟೇ ಅಲ್ಲ, ಕಾರಾಗೃಹ ವಾಸ ಮುಗಿದ ನಂತರ, ಕಾರಾಗೃಹದಿಂದ ಹೊರ ಬರುವವರು ಹೊಸ ಬದುಕು ಕಟ್ಟಿಕೊಳ್ಳಲು ಅನುಕೂಲವಾಗಲಿ ಎಂಬ ಸದುದ್ದೇಶದ ಹಿನ್ನೆಲೆಯಲ್ಲಿ ಜೈಲು ಅವಧಿಯಲ್ಲಿ ಬಂಧಿಗಳಿಗೆ ನೇಕಾರಿಕೆ, ಮರಗೆಲಸ, ಜಮಖಾನೆ, ಕಮ್ಮಾರಿಕೆ, ಹೊಲಿಗೆ, ಬಣ್ಣ ಮತ್ತು ಬ್ಲೀಚಿಂಗ್, ಪಾದರಕ್ಷೆ, ಶಾಮಿಯಾನ, ಸಿದ್ಧ ಉಡುಪು ಮತ್ತು ಬೇಕರಿ ಪದಾರ್ಥಗಳ ತಯಾರಿಕೆ ಮಾತ್ರವಲ್ಲದೆ, ಬಟ್ಟೆ ಶುಚಿಗೊಳಿಸಿ ಇಸ್ತ್ರಿ ಮಾಡುವ ಹಾಗೂ ಸಾಬೂನು ಸಿದ್ಧಪಡಿಸುವಿಕೆಯಲ್ಲೂ ತರಬೇತಿ ನೀಡಲಾಗುತ್ತಿದೆ.

ಅದೇ ರೀತಿ, ಅಡುಗೆ ಕೆಲಸದಲ್ಲಿ ಆಸಕ್ತಿ ಹೊಂದಿರುವ ಖೈದಿಗಳಿಗೆ ಪಾಕ ಶಾಲೆಯಲ್ಲಿ, ಕೃಷಿ ಚಟುವಟಿಕೆಯಲ್ಲಿ ಆಸಕ್ತಿ ಇರುವ ಬಂಧಿಗಳಿಗೆ ಕಾರಾಗೃಹದೊಳಗಿನ ಜಮೀನಿನಲ್ಲಿ ಹಾಗೂ ಹೈನುಗಾರಿಕೆಯಲ್ಲಿ ಪ್ರೀತಿ ಇರುವ ಜೈಲು ವಾಸಿಗಳಿಗೆ ಕಾರಾಗೃಹದೊಳಗಿನ ಗೋಶಾಲೆಯಲ್ಲಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡಲಾಗುತ್ತಿದೆ. ಇದರಿಂದ ಖೈದಿಗಳಿಗೆ ಕಲಿಕೆಯ ಜೊತೆಗೆ ಗಳಿಕೆಯೂ ಆಗುತ್ತಿದೆ. ಜೈಲಿನಿಂದ ಹೊರಬಂದು ಸಮಾಜದಲ್ಲಿ ಸ್ವತಂತ್ರರಾಗಿ ಸಂತೃಪ್ತ ಬದುಕು ಕಟ್ಟಿಕೊಳ್ಳಲು ಸುವರ್ಣಾವಕಾಶ ದೊರೆಯಲಿದೆ.



ಅಪರಾಧಿ ವಿಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಾಲಯ ವಿಚಾರಯಲ್ಲಿ ಭಾಗವಹಿಸಿರುವುದು.

ಹಿಂಡಲಗಾ ಕಾರಾಗೃಹದಲ್ಲಿ ಅನಾರೋಗ್ಯಕ್ಕೆ ಒಳಗಾಗುವ ಖೈದಿಗಳಿಗೆ ಚಿಕಿತ್ಸೆ ನೀಡಿ ಅವರ ಆರೋಗ್ಯ ಕಾಯ್ದುಕೊಳ್ಳಲು ಟೆಲಿ ಮೆಡಿಸಿನ್ ಸೌಲಭ್ಯವುಳ್ಳ ಒಂದು ಸುಸಜ್ಜಿತ ಆಸ್ಪತ್ರೆ ಇದೆ. ಅಂತೆಯೇ, ಖೈದಿಗಳ ಜ್ಞಾನರ್ಜನೆಗಾಗಿ ವಾಚನಾಲಯವನ್ನು ಒಳಗೊಂಡ ಒಂದು ಗ್ರಂಥಾಲಯವೂ ಇದೆ. ಅವಿದ್ಯಾವಂತರಾಗಿ ಈ ಕಾರಾಗೃಹವನ್ನು ಪ್ರವೇಶಿಸಿದ ಹಲವರು ಕಲಾ ಪದವಿ ಮತ್ತು ವಾಣಿಜ್ಯ ಪದವಿಯನ್ನು ಗಳಿಸಿದ್ದಾರೆ. ಓರ್ವ ಚಾರ್ಟೆಡ್ ಅಕೌಂಟೆಂಟ್ ಮತ್ತೋರ್ವ ಕಾನೂನು ವಿಷಯದಲ್ಲಿ ಸ್ನಾತಕ ಪದವಿ ಪಡೆದು ಹೊರ ಜಗತ್ತು ಪ್ರವೇಶಿಸಿರುವುದು ಅಭಿಮಾನದ ವಿಚಾರವಾಗಿದೆ.

ಜೈಲು ಪ್ರವೇಶಿಸಿದ ಸಂದರ್ಭದಲ್ಲಿ ಮೃಗೀಯ ವರ್ತನೆ ತೋರುತ್ತಿದ್ದವರನ್ನು ಮಾನವೀಯತೆ ತೋರಿ, ಮನುಷ್ಯತ್ವವನ್ನು ತುಂಬಿ, ಮನುಷ್ಯರನ್ನಾಗಿ ಸಮಾಜಕ್ಕೆ ಕಳುಹಿಸುವ ಕಾಯಕದಲ್ಲಿ ತೊಡಗಿರುವ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಸದಾ ಕಾಲ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಾರೆ.

ಶತಮಾನ ವರ್ಷಾಚರಣೆಯ ಸುಸಂದರ್ಭದಲ್ಲಿ ಕಾರಾಗೃಹದಲ್ಲಿನ ಸವಲತ್ತು ಮತ್ತು ಸೌಲಭ್ಯಗಳನ್ನು ಮತ್ತಷ್ಟು ಉತ್ತಮಪಡಿಸಬೇಕು. ಈ ನಿಟ್ಟಿನಲ್ಲಿ ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕಾರಾಗೃಹವನ್ನು ನವೀಕರಿಸಬೇಕು. ಒಂದು ಬ್ರಾಂಡ್ ಹೆಸರಿನಲ್ಲಿ ಕಾರಾಗೃಹ ಉತ್ಪನ್ನಗಳಿಗೆ ಅತ್ಯುತ್ತಮ ಮಾರುಕಟ್ಟೆ ದೊರಕಿಸಿಕೊಡಬೇಕು ಎಂಬುದು ಹಿಂಡಲಗಾ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಕೃಷ್ಣ ಕುಮಾರ್ ಅವರ ಸದಾಶಯವಾಗಿದೆ.



Downloaded From: www.kpscvaani.com



# ಮೆದುಳು ಸೋಂಕು ನಿವಾರಣೆಗೆ ಅಗತ್ಯ ಕ್ರಮ



**ಡಾ. ಎಂ. ನೇತ್ರಾವತಿ**
ಪ್ರೊಫೆಸರ್, ನರವಿಜ್ಞಾನ ವಿಭಾಗ,
ನಿಮ್ಹಾನ್ಸ್, ಬೆಂಗಳೂರು

**ರೋಗ ಗುರುತಿಸುವಿಕೆ ಮತ್ತು ಸೂಕ್ತ ನಿರ್ವಹಣೆಯಿಂದ ಮೆದುಳು ಸೋಂಕು ಉಂಟಾಗುವುದನ್ನು ತಡೆಯಬಹುದು ಎಂದು ಹೇಳುವ ನಿಮ್ಹಾನ್ಸ್‌ನ ನರವಿಜ್ಞಾನ ವಿಭಾಗದ ಪ್ರೊಫೆಸರ್ ಡಾ. ಎಂ ನೇತ್ರಾವತಿ ಅವರು ಈ ರೋಗದ ನಿವಾರಣೆಯ ಅಗತ್ಯ ಕ್ರಮಗಳ ಮೇಲೆ ಬೆಳಕು ಚೆಲ್ಲಿದ್ದಾರೆ.**

ಆರಂಭಿಕ ಹಂತದಲ್ಲೇ ರೋಗ ಗುರುತಿಸುವಿಕೆ ಮತ್ತು ಸೂಕ್ತ ನಿರ್ವಹಣೆಯಿಂದ ಮೆದುಳು ಸೋಂಕನ್ನು ನಿವಾರಣೆ ಮಾಡಲು ಸಾಧ್ಯ. ಮೆದುಳು ಬೆನ್ನುಹುರಿ (inflammation) ಮತ್ತು ಮೆದುಳಿನ ಸಮೀಪದ ಅಂಗಾಂಶವನ್ನು (brain tissue) ಆವರಿಸುವ ಮೆದುಳಿನ ಒಳಪದರದ (ಮೆನಿಂಜಿಸ್) ಉರಿಯೂತನವನ್ನು ನ್ಯೂರೋ ಇನ್ಫೆಕ್ಷನ್ (ಮೆದುಳು ಸೋಂಕು) ಎನ್ನುತ್ತೇವೆ.

ಮೆದುಳಿನ ಒಳಪದರದ ಮೇಲೆ ಮಾತ್ರ ಪರಿಣಾಮ ಬೀರಿದಾಗ ಇದನ್ನು ಮೆನಿಂಜೈಟಿಸ್ ಎಂದು ಕರೆಯಲಾಗುತ್ತದೆ ಮತ್ತು ಮೆದುಳಿನ ಸಮೀಪದ ಅಂಗಾಂಶದ ಮೇಲೆ ಪರಿಣಾಮ ಬೇರಿದಾಗ ಅದನ್ನು ಎನ್ಸಫೆಲೈಟಿಸ್ ಎಂದು ಕರೆಯಲಾಗುತ್ತದೆ. ಇದು ಇದ್ದಕ್ಕಿದ್ದಂತೆ (acute) ಸಂಭವಿಸಬಹುದು ಅಥವಾ ಹಂತಹಂತವಾಗಿ (chronic) ಹೆಚ್ಚಾಗಬಹುದು. ಇದು ತುರ್ತುಪರಿಸ್ಥಿತಿಗಳಲ್ಲಿ ಒಂದಾಗಿದ್ದು, ಗುರುತಿಸಲಾಗದೆ ಇದ್ದಾಗ ಗಮನಾರ್ಹವಾದ ಅನಾರೋಗ್ಯಕ್ಕೆ ಮತ್ತು ಮರಣಕ್ಕೆ ಕಾರಣವಾಗುತ್ತದೆ.

ನ್ಯೂರೋ ಇನ್ಫೆಕ್ಷನ್ ಅನ್ನು ವ್ಯಾಪಕವಾಗಿ ಸೋಂಕಿನ ನಂಟು (ಬ್ಯಾಕ್ಟೀರಿಯಾ, ವೈರಸ್, ಕ್ಷಯ, ಪರಾವಲಂಬಿ, ಶಿಲೀಂಧ್ರ) ಇರುವ ಮತ್ತು ಸೋಂಕು-ರಹಿತ ನಂಟಿರುವ (ಮಾರಣಾಂತಿಕತೆ, ಆಘಾತ, ಕೆಲವು ಔಷಧಗಳು, ಮೆದುಳಿನ



Downloaded From: www.kpscvaani.com

ಶಸ್ತ್ರಚಿಕಿತ್ಸೆ, ಆಟೋಇಮ್ಯೂನ್) ರೋಗವೆಂದು ವರ್ಗೀಕರಿಸಲಾಗಿದೆ. ಬ್ಯಾಕ್ಟೀರಿಯಾ ಮತ್ತು ವೈರಲ್ ಏಜೆಂಟ್‌ಗಳು ಇದ್ದಕ್ಕಿದ್ದಂತೆ ಸಂಭವಿಸಬಹುದು. ನ್ಯೂರೋ ಇನ್ಫೆಕ್ಷನ್ ಗಳಿಗೆ ಕ್ಷಯರೋಗವು ಭಾರತದಲ್ಲಿ ನ್ಯೂರೋ ಇನ್‌ಫೆಕ್ಷನ್‌ಗಳ ತೀವ್ರತೆಗೆ ಪ್ರಮುಖ ಕಾರಣವಾಗಿದೆ. ಭಾರತದಲ್ಲಿ ನ್ಯೂರೋ ಇನ್‌ಫೆಕ್ಷನ್‌ಗಳು ಒಂದು ಪ್ರಮುಖ ಸಾಂಕ್ರಾಮಿಕ ರೋಗವಾಗಿದ್ದು ಇದು ಸಾಮಾಜಿಕ ಮತ್ತು ಆರ್ಥಿಕ ಸವಾಲಾಗಿದೆ. ಆರಂಭಿಕ ಹಂತದಲ್ಲೇ ರೋಗ ಗುರುತಿಸುವಿಕೆ ಮತ್ತು ನಿರ್ವಹಣೆಯು ನ್ಯೂರೋ ಇನ್ಫೆಕ್ಷನ್ ನಿವಾರಣೆಯ ಹಾದಿಯಾಗಿದೆ.

ನ್ಯೂರೋ ಇನ್ಫೆಕ್ಷನ್‌ನ ಒಟ್ಟಾರೆ ದತ್ತಾಂಶ ಸಿಗುವುದು ವಿರಳ. 2021 ರಲ್ಲಿ ಪ್ರಕಟವಾದ ನರವೈಜ್ಞಾನಿಕ ಅಸ್ವಸ್ಥತೆಗಳ ಜಾಗತಿಕ ತೀವ್ರತೆ ಅಧ್ಯಯನದ ವರದಿ ಪ್ರಕಾರ ನ್ಯೂರೋ ಸೋಂಕು ಒಟ್ಟು ಜನಸಂಖ್ಯೆಯ ಶೇ. 11.2% ಜನರಿಗಾಗುತ್ತದೆ. ಇದು ತಲೆನೋವು, ಅಪಸ್ಮಾರ (stroke), ಫಿಟ್ಸ್‌ಗಿಂತ ಹೆಚ್ಚು. 2019ರಲ್ಲಿ ಎನ್ಸಫೆಲೈಟಿಸ್‌ನ ಸಂಭವನೀಯತೆಯು 610000 ಆಗಿದ್ದು, ವರ್ಷಕ್ಕೆ ಅಂದಾಜು 51900 ಸಾವುಗಳು ಸಂಭವಿಸಿದರೆ, ಮೆನಿಂಜೈಟಿಸ್‌ನ ಪ್ರಮಾಣವು 552000 ಪ್ರಕರಣಗಳು ಮತ್ತು ವರ್ಷಕ್ಕೆ 34700 ಸಾವುಗಳಾಗಿದ್ದವು. ಎನ್ಸೆಫಾಲಿಟಿಸ್ ಸಾಮಾನ್ಯವಾಗಿ ತಮಿಳುನಾಡಿನಲ್ಲಿ ಕಂಡುಬರುತ್ತಿದ್ದು ನಂತರ ಒಡಿಶಾ ಮತ್ತು ಆಂಧ್ರ ಪ್ರದೇಶದಲ್ಲಿ ಕಂಡುಬರುತ್ತಿತ್ತು. ಆದರೆ ಮೆನಿಂಜೈಟಿಸ್ ಸಾಮಾನ್ಯವಾಗಿ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಕಾಣಿಸುತ್ತದೆ.

ಜ್ವರ, ತಲೆನೋವು, ವಾಕರಿಕೆ, ವಾಂತಿ, ಕುತ್ತಿಗೆಯ ಬಿಗಿತ (ಕುತ್ತಿಗೆ ಮುಂದಕ್ಕೆ ಬಾಗಿಸಲು ಅಸಮರ್ಥತೆ), ಮಚ್ಚೆ ಚರ್ಮವು ನ್ಯೂರೋ ಇನ್ಫೆಕ್ಷನ್‌ಗಳ ಸಾಮಾನ್ಯ ಲಕ್ಷಣಗಳಾಗಿವೆ. ನಂತರ ಗೊಂದಲ, ಮಂಪರು, ಫಿಟ್ಸ್ (ಅಥವಾ ಸೆಳೆತಗಳು) ಕಾಣಿಸಬಹುದು. ಇದಕ್ಕೆಲ್ಲ ಚಿಕಿತ್ಸೆ ನೀಡದಿದ್ದಾಗ ಅಂತಿಮವಾಗಿ ಕೋಮಾಗೆ ಜಾರಬಹುದು. ರೋಗನಿರ್ಣಯ ಹೇಗೆ ಮಾಡಲಾಗುತ್ತದೆ ಎಂಬುದನ್ನು ನೋಡೋಣ: 1) ರಕ್ತ ಪರೀಕ್ಷೆಗಳು – ಸೋಂಕಿನ ತೀವ್ರತೆ ಮತ್ತು ರೋಗಕಾರಕ ಜೀವಿಯನ್ನು ಪರೀಕ್ಷಿಸಲು, (2) ಸೊಂಟದ ಪಂಕ್ಚರ್ (lumbar puncture)– ರೋಗಲಕ್ಷಣ ರೋಗಿಯನ್ನು ಪರೀಕ್ಷಿಸಲು ಸಿಎಸ್‌ಎಫ್ (ಸೆರೆಬ್ರೊಸ್ಪಿನಲ್ ದ್ರವ) ನ ಮಾದರಿಯನ್ನು ಹೊರತೆಗೆಯಲಾಗುತ್ತದೆ, ಮತ್ತು (3) ನ್ಯೂರೋ ಇಮೇಜಿಂಗ್ (ಸಿಟಿ ಅಥವಾ ಎಂಆರ್‌ಐ ಬ್ರೇನ್) – ಮೆದುಳಿಗೆ ಹಾನಿಯ ಪ್ರಮಾಣವನ್ನು ನಿರ್ಣಯಿಸಲು ಈ ಪರೀಕ್ಷೆಯನ್ನು ಮಾಡಲಾಗುತ್ತದೆ. ನ್ಯೂರೋ ಇನ್ಫೆಕ್ಷನ್‌ಗೆ ತುರ್ತಾಗಿ ಚಿಕಿತ್ಸೆ ನೀಡಬೇಕೆಂದು ಪರಿಗಣಿಸಬೇಕು. ಏಕೆಂದರೆ ಇದು ಮಾರಣಾಂತಿಕ ರೋಗಗಳಾಗಬಹುದು. ಚಿಕಿತ್ಸೆ ನೀಡದಿದ್ದಾಗ ಹೆಚ್ಚಿನ ಸಾವು ಮತ್ತು ಅಸ್ವಸ್ಥತೆಗಳಿಗೆ ಕಾರಣವಾಗುತ್ತದೆ. ಫಿಟ್ಸ್, ನೆನಪಿಟ್ಟುಕೊಳ್ಳುವಲ್ಲಿ ತೊಂದರೆ, ಏಕಾಗ್ರತೆ, ನಡವಳಿಕೆಯಲ್ಲಿ ಬದಲಾವಣೆಗಳು, ನಡೆಯುವುದರಲ್ಲಿ ತೊಂದರೆ, ಸಮತೋಲನ, ದೃಷ್ಟಿ, ಮಾತು ಮತ್ತು ಶ್ರವಣ ತೊಂದರೆಗಳಿಗೆ ಕಾರಣವಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ ತನ್ನ ಜಾಗತಿಕ ಪಾಲುದಾರರು ಮತ್ತು ತಜ್ಞರೊಂದಿಗೆ ಸೇರಿ 2030 ರ ವೇಳೆಗೆ ಮೆನಿಂಜೈಟಿಸ್ ಅನ್ನು ನಿವಾರಿಸುವ ದೃಷ್ಟಿಯಿಂದ ಜಾಗತಿಕ ಮಾರ್ಗಸೂಚಿಯನ್ನು ಅನಾವರಣಗೊಳಿಸಿತು. ಅದರ ದೃಷ್ಟಿಕೋನದಂತೆ: (1) ಬ್ಯಾಕ್ಟೀರಿಯಾದ ಮೆನಿಂಜೈಟಿಸ್‌ನ ಸಾಂಕ್ರಾಮಿಕ ರೋಗಗಳನ್ನು ನಿವಾರಿಸುವುದು, (2) ಬ್ಯಾಕ್ಟೀರಿಯಾದ ಮೆನಿಂಜೈಟಿಸ್‌ನ ಲಸಿಕೆ – ತಡೆಗಟ್ಟಬಹುದಾದ ಶೇ. 50 ರಷ್ಟು ಪ್ರಕರಣಗಳನ್ನು ಮತ್ತು ಶೇ. 70 ರಷ್ಟು ಸಾವುಗಳನ್ನು ಕಡಿಮೆ ಮಾಡುವುದು, ಮತ್ತು (3) ಅಂಗವೈಕಲ್ಯವನ್ನು ಕಡಿಮೆ ಮಾಡಲು, ಮೆನಿಂಜೈಟಿಸ್ ನಂತರ ಜೀವನದ ಗುಣಮಟ್ಟ ಸುಧಾರಿಸುವುದು. ಭಾರತದಲ್ಲಿ ಎನ್ಸೆಫಾಲಿಟಿಸ್ ಮತ್ತು ಮೆನಿಂಜೈಟಿಸ್ ಅನ್ನು ವ್ಯಾಕ್ಸಿನೇಷನ್ ವ್ಯಾಪ್ತಿಯನ್ನು ಉತ್ತೇಜಿಸುವ ಮೂಲಕ, ನೈರ್ಮಲ್ಯ, ಪೌಷ್ಠಿಕಾಂಶವನ್ನು ಸುಧಾರಿಸುವ ಮೂಲಕ ಮತ್ತು ವಿಶೇಷವಾಗಿ ನರ ಸೋಂಕಿಗೆ ಒಳಗಾದ ಹೆಚ್ಚಿನ ಸ್ಥಳೀಯ ಸ್ಥಳಗಳಲ್ಲಿ ಜಾಗೃತಿಯನ್ನು ಉತ್ತೇಜಿಸುವ ಪ್ರಯತ್ನದಲ್ಲಿ ಅನೇಕ ಕಾರ್ಯತಂತ್ರಗಳನ್ನು ಪ್ರತಿಪಾದಿಸಲಾಗಿದೆ.

ಈ ನಿಟ್ಟಿನಲ್ಲಿ, ಜನನಿ ಸುರಕ್ಷಾ ಯೋಜನೆ (2005) ಮತ್ತು ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (2011) ಸರ್ಕಾರದ ಉಪಕ್ರಮಗಳು ತಾಯಿ ಮತ್ತು ನವಜಾತ ಶಿಶುಗಳ ನಿಯಂತ್ರಣಕ್ಕೆ ಇದ್ದವು. ಮಿಷನ್ ಇಂದ್ರ ಧನುಷ್ (2014) ಯುನಿವರ್ಸಲ್ ಇಮ್ಯುನೈಜೇಶನ್ ಪ್ರೋಗ್ರಾಂ (ಯುಐಪಿ) ಮೂಲಕ ಎಲ್ಲಾ ಮಕ್ಕಳಿಗೆ ಲಸಿಕೆಗಳನ್ನು ಉಚಿತವಾಗಿ ಒದಗಿಸುವುದು. ಸ್ವಚ್ಛ ಭಾರತ ಅಭಿಯಾನ (2014) ಉತ್ತಮ ನೈರ್ಮಲ್ಯ ಅಭ್ಯಾಸಗಳು, ಶುದ್ಧ ಕುಡಿಯುವ ನೀರು ಮತ್ತು ಬಯಲು ಬಹಿರ್ದೆಸೆಯನ್ನು ತಪ್ಪಿಸಲು ಜನರಿಗೆ ಅರಿವು ಮೂಡಿಸುವುದು.

ಯುನಿಸೆಫ್ ಮತ್ತು ಉತ್ತರ ಪ್ರದೇಶ (ಯುಪಿ) ರಾಜ್ಯ ಸರ್ಕಾರ ಒಟ್ಟಾಗಿ






Downloaded From: www.kpscvaani.com

ಜಪಾನಿನ ಎನ್ಸೆಫಾಲಿಟಿಸ್ (ಜೆಇ), ತೀವ್ರ ಎನ್ಸೆಫಾಲಿಟಿಕ್ ಸಿಂಡ್ರೋಮ್ (ಎಇಎಸ್) ಮತ್ತು ಇತರ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿಯನ್ನು ಉತ್ತೇಜಿಸಲು ಸಾಮಾಜಿಕ ಮತ್ತು ನಡವಳಿಕೆಯ ಬದಲಾವಣೆಗಳನ್ನು ಸುಧಾರಿಸಲು "ದಸ್ತಕ್ ಅಭಿಯಾನ"ವನ್ನು ಪ್ರಾರಂಭಿಸಿತು, ತರಬೇತಿ ಪಡೆದ ಸಮುದಾಯ ಆರೋಗ್ಯ ಕಾರ್ಯಕರ್ತರು, ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ (ಆಶಾ) ಅಥವಾ ಸಹಾಯಕ ನರ್ಸ್, ಸೂಲಗಿತ್ತಿ ಮತ್ತು ಅಂಗನವಾಡಿ ಕಾರ್ಯಕರ್ತರು ಮನೆಮನೆಗೆ ತೆರಳಿ ಅಭಿಯಾನ ನಡೆಸಿದರು. ಮಕ್ಕಳು, ಹದಿಹರೆಯದವರು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ಪೌಷ್ಠಿಕಾಂಶದ ಸ್ಥಿತಿಯನ್ನು ಸುಧಾರಿಸಲು 'ಪೋಷಣ್ ಅಭಿಯಾನ್' (ರಾಷ್ಟ್ರೀಯ ಪೌಷ್ಠಿಕಾಂಶ ಮಿಷನ್, 2018). "ಜಲ ಜೀವನ್ ಮಿಷನ್" (2019) ಎಇಎಸ್ ಪೀಡಿತ ಪ್ರದೇಶಗಳ ಪ್ರತಿ ಮನೆಗೂ ಶುದ್ಧ ನಲ್ಲಿ ನೀರನ್ನು ಒದಗಿಸುವ ಗುರಿಯನ್ನು ಹೊಂದಿದೆ.

ದಕ್ಷಿಣ ಭಾರತದ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋಸೈನ್ಸ್ (ನಿಮ್ಹಾನ್ಸ್), ವಿವಿಧ ಸೋಂಕುಗಳ ರೋಗ ನಿರ್ಣಯದಲ್ಲಿ ಪ್ರಮುಖ ಕೇಂದ್ರವಾಗಿದೆ. ಇದು ರೋಗ ನಿರ್ಣಯದಲ್ಲಿ ಮುಂಚೂಣಿಯಲ್ಲಿದ್ದು, ರೋಗನಿರ್ಣಯ ಪ್ರಯೋಗಾಲಯಗಳಿಗೆ ನೋಡಲ್ ಕೇಂದ್ರಗಳನ್ನು ಸ್ಥಾಪಿಸಿದೆ. ಇದು ಚಿಕೂನ್ ಗುನ್ಯಾ, ಎಚ್ 1 ಎನ್ 1 ಮತ್ತು ಇತ್ತೀಚಿನ ಕೋವಿಡ್ ನಂತಹ ಅನೇಕ ನರ ಸೋಂಕಿನ ರೋಗಗಳ ತೀವ್ರತೆಯನ್ನು ತಗ್ಗಿಸುವಲ್ಲಿ ತನ್ನ ಪಾತ್ರವನ್ನು ಸಂಶಯಕ್ಕೆಡೆ ಇಲ್ಲದಂತೆ ಸಾಬೀತು ಪಡಿಸಿದೆ. 2019 ರಿಂದ 2022 ರವರೆಗೆ ಶಂಕಿತ ತೀವ್ರ ಮೆದುಳಿನ ಸೋಂಕನ್ನು ಹೊಂದಿರುವ ರೋಗಿಗಳ ರೋಗ ಪತ್ತೆ ಮತ್ತು ಆರಂಭಿಕ ಆಸ್ಪತ್ರೆ ನಿರ್ವಹಣೆಯನ್ನು ಸುಧಾರಿಸಲು ಪ್ರಮಾಣಿತ ಆರೈಕೆ ಪ್ಯಾಕೇಜ್ ಯೋಜನೆಯನ್ನು ಸ್ಥಾಪಿಸಲು ಪ್ರಯತ್ನಿಸುವಲ್ಲಿ ನಿಮ್ಹಾನ್ಸ್ ಮತ್ತು ಲಿವರ್ಪೂಲ್ ವಿಶ್ವವಿದ್ಯಾಲಯವು ಪ್ರಮುಖ ಪಾತ್ರ ವಹಿಸಿವೆ. ಬ್ರೆಜಿಲ್, ಭಾರತ ಮತ್ತು ಮಾಲವಿಗಳಲ್ಲಿ ಶಂಕಿತ ತೀವ್ರ ಮೆದುಳಿನ ಸೋಂಕುಗಳ ಆರಂಭಿಕ ನಿರ್ವಹಣೆ ಮತ್ತು ರೋಗ ಕಂಡು ಹಿಡಿಯುವ ಕ್ರಮಗಳನ್ನು



ಸುಧಾರಿಸುವುದು ಈ ಯೋಜನೆಯ ಒಟ್ಟಾರೆ ಗುರಿಯಾಗಿತ್ತು. ಚಿಕಿತ್ಸೆಗೆ ಮಾರ್ಗದರ್ಶನ ನೀಡಲು ಮತ್ತು ತಜ್ಞರು ಮಧ್ಯಸ್ಥಿಕೆಗೆ ಮಾಹಿತಿ ನೀಡುವ ಸಲುವಾಗಿ ಯೋಜನೆಯ ವಿವಿಧ ವಿಷಯಗಳು ಹೀಗಿವೆ:

**ವಿಷಯವಸ್ತು 1:** ಶಂಕಿತ ಮೆದುಳಿನ ಸೋಂಕಿಗೆ ಸಂಬಂಧಿಸಿದಂತೆ ರೋಗಿಗಳು, ಆರೈಕೆದಾರರು ಮತ್ತು ಆರೋಗ್ಯ ಕಾರ್ಯಕರ್ತರ ನಡವಳಿಕೆಯನ್ನು ತಿಳಿಸುವ ಸಾಮಾಜಿಕ ಮತ್ತು ರಚನಾತ್ಮಕ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವುದು.

**ವಿಷಯವಸ್ತು 2:** ಸಂಕೀರ್ಣ ಹಸ್ತಕ್ಷೇಪದ ಅಭಿವೃದ್ಧಿ ಮತ್ತು ವಿತರಣೆಯ ಮೂಲಕ ಆರಂಭಿಕ ನಿರ್ವಹಣೆಯನ್ನು ಸುಧಾರಿಸುವುದು.

**ವಿಷಯವಸ್ತು 3:** ಶಂಕಿತ ತೀವ್ರ ಮೆದುಳಿನ ಸೋಂಕಿನ ರೋಗನಿರ್ಣಯ.

**ವಿಷಯವಸ್ತು 4:** ನೀತಿ, ಆರೋಗ್ಯ ಅರ್ಥಶಾಸ್ತ್ರ ಮತ್ತು ಅನುಷ್ಠಾನ.

**ವಿಷಯವಸ್ತು 5:** ತರಬೇತಿ, ಸಾಮರ್ಥ್ಯ ವರ್ಧನೆ ಮತ್ತು ದೀರ್ಘಕಾಲೀನ ಸುಸ್ಥಿರತೆ.

ಭಾರತದಲ್ಲಿ ನ್ಯೂರೋ ಇನ್ಫೆಕ್ಷನ್‌ನ ಮೌಲ್ಯಮಾಪನ ಮತ್ತು ನಿರ್ವಹಣೆಯಲ್ಲಿ ಹಲವಾರು ಸವಾಲುಗಳಿವೆ. ರೋಗ ನಿರ್ಣಯದಲ್ಲಿ ತೊಂದರೆ, ಅನಾರೋಗ್ಯದ ಕಾಲೋಚಿತ ಸ್ವರೂಪ, ಏಕಾಏಕಿ ಸಂಭವಿಸುವ ನ್ಯೂರೋ ಇಮೇಜಿಂಗ್ ಮತ್ತು ರೋಗ ನಿರ್ಣಯ ಸೌಲಭ್ಯಗಳ ಕೊರತೆ, ನರ ಸೋಂಕಿನ ತೀವ್ರ ಸ್ವರೂಪವು ರೋಗ ನಿರ್ಣಯ ಮತ್ತು ನಿರ್ವಹಣೆಯಲ್ಲಿ ತ್ವರಿತ ಮತ್ತು ತುರ್ತು ಕ್ರಮದ ಅಗತ್ಯವಿರುತ್ತದೆ. ಆದರೆ ಸಿಬ್ಬಂದಿಗಳ ಕೊರತೆ, ನ್ಯುರೋ ಇನ್ಫೆಕ್ಷನ್‌ಗಳ ಕುರಿತು ಕೆಲವೇ ಕೆಲವು ಔಪಚಾರಿಕ ತರಬೇತಿ ಕಾರ್ಯಕ್ರಮಗಳು ಇವೆ. ಜಾಗತೀಕರಣ ಮತ್ತು ಪ್ರಯಾಣದೊಂದಿಗೆ, ಇತ್ತೀಚಿನ ಕೋವಿಡ್‌ನಿಂದ ರುಜುವಾತಾಗಿರುವಂತೆ ಯಾವುದೇ ದಾಖಲೆಯ ಸಮಯದಲ್ಲಿ ಅನೇಕ ಸೋಂಕುಗಳು ವಿಶ್ವದಾದ್ಯಂತ ಹರಡಬಹುದು.

ನ್ಯೂರೋ ಇನ್ಫೆಕ್ಷನ್ ನಿರ್ವಹಣೆಯಲ್ಲಿ ಮುಂದಿರುವ ಮಾರ್ಗವೆಂದರೆ ಲಸಿಕೆ, ನೈರ್ಮಲ್ಯ, ವೆಕ್ಟರ್-ಕಂಟ್ರೋಲ್ ಕ್ರಮಗಳು. ರೋಗ ಕಣ್ಗಾವಲು, ಆರಂಭಿಕ ಗುರುತಿಸುವಿಕೆ, ಸುಧಾರಿತ ಆರೈಕೆ, ಸಮುದಾಯ ಜಾಗೃತಿ, ಪ್ರಕರಣ ಆಧಾರಿತ ಕಣ್ಗಾವಲುಗಳ ಮೂಲಕ ಈ ರೋಗವನ್ನು ತಡೆಗಟ್ಟಬಹುದು. ಇದರ ಹೊರತಾಗಿ ಇತರ ವಿಧಾನಗಳೆಂದರೆ, ನ್ಯೂರೋ ಇನ್ಫೆಕ್ಷನ್ ಪತ್ತೆಹಚ್ಚುವುದು ಮತ್ತು ಆಂಟಿವೈರಲ್ ಔಷಧಿಗಳ ತಡೆಗಟ್ಟುವಿಕೆಯಲ್ಲಿ ಹೊಸ ಸಂಶೋಧನೆಯನ್ನು ಮುನ್ನಡೆಸುವುದು. ಏಕೆಂದರೆ ಕೆಲವೇ ಸೀಮಿತ ಆಂಟಿವೈರಲ್ ಏಜೆಂಟ್‌ಗಳು ಇರುವುದರಿಂದ ಸಂಶೋಧನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕಾಗುತ್ತದೆ.

ಮೆದುಳಿನ ಸೋಂಕು ಮಾರಣಾಂತಿಕವಾಗಬಹುದಾದ್ದರಿಂದ ಜ್ವರ, ತಲೆನೋವು, ವಾಕರಿಕೆ, ವಾಂತಿ, ಕುತ್ತಿಗೆಯ ಬಿಗಿತ, ಮಚ್ಚೆ ಚರ್ಮ, ಮರೆವು, ನಡೆಯುವಾಗ ಸಮತೋಲನ ತಪ್ಪುವುದು, ಮಂಪರು, ಫಿಟ್ಸ್ ಮುಂತಾದ ರೋಗ ಲಕ್ಷಣಗಳು ಕಂಡುಬಂದರೆ ಕೂಡಲೇ ವೈದರ ಬಳಿ ಹೋಗಿ ಪರೀಕ್ಷಿಸಿಕೊಳ್ಳಬೇಕು. ಯಾವುದೇ ಕಾಯಿಲೆಯನ್ನು ಸಣ್ಣದೆಂದು ನಿರ್ಲಕ್ಷ್ಯಿಸಿದರೆ ರೋಗವು ಉಲ್ಬಣಗೊಳ್ಳುತ್ತದೆ. ಆರಂಭಿಕ ಹಂತದಲ್ಲೇ ಚಿಕಿತ್ಸೆ ದೊರೆತರೆ ಮೆದುಳು ಸೋಂಕಿನಿಂದ ಪಾರಾಗಬಹುದು.

**(ಕನ್ನಡಕ್ಕೆ ತರ್ಜುಮೆ : ಡಾ. ಬಿ.ಎಸ್. ಪ್ರದೀಪ್ ಸಾಂಕ್ರಾಮಿಕ ರೋಗಶಾಸ್ತ್ರ ವಿಭಾಗದ (epidemiology) ಮುಖ್ಯಸ್ಥರು, ನಿಮ್ಹಾನ್ಸ್ ಹಾಗೂ ಎಂ. ಎನ್. ಪ್ರಶಾಂತ್ ಕುಮಾರ್)**



Downloaded From: www.kpscvaani.com








# ಸ್ವಾಸ್ಥ್ಯ ಕರ್ನಾಟಕ ; ಸುಸ್ಥಿರ ಕರ್ನಾಟಕ

**ಕೆ. ರೋಹಿಣಿ**

**ತಾಯಿ ಮತ್ತು ಶಿಶು ಮರಣಕ್ಕೆ ಕಾರಣವಾಗಿರುವ ರಕ್ತ ಹೀನತೆ ಮತ್ತು ಅಪೌಷ್ಟಿಕತೆ ನಿವಾರಣೆಗೆ ಅಗತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರವು ರಾಜ್ಯ ಮಟ್ಟದ ಅಪೌಷ್ಟಿಕತೆ ಮತ್ತು ಅನೀಮಿಯಾ ಮುಕ್ತ ಕರ್ನಾಟಕ ಕುರಿತ ಕಾರ್ಯಗಾರವನ್ನು ಏರ್ಪಡಿಸಿತ್ತು.**

ದೇಶ ಅಭಿವೃದ್ಧಿ ಪಥದತ್ತ ಮುನ್ನಡೆದಿದೆ. ಅಭಿವೃದ್ಧಿಯತ್ತ ಗುರಿಯನ್ನು ಸಾಧಿಸಲು ಮಾನದಂಡಗಳು ಹಲವು. ಅದರಲ್ಲೂ ಅಪೌಷ್ಟಿಕತೆ ಮತ್ತು ರಕ್ತಹೀನತೆ ಸೂಚ್ಯಂಕಗಳು ನಮ್ಮ ಅಭಿವೃದ್ಧಿಯ ಸೂಚ್ಯಂಕವನ್ನು ಕೆಳಗಿಳಿಸಿರುವುದು ರಾಜ್ಯದ ಅಭಿವೃದ್ಧಿಗೆ ತೊಡಕು.

ಈ ಸಂಬಂಧ ಅಭಿವೃದ್ಧಿಯ ಸೂಚ್ಯಂಕವನ್ನು ಕಾಯ್ದುಕೊಳ್ಳುವ ಜೊತೆಗೆ ಮಹಿಳೆ ಮತ್ತು ಮಕ್ಕಳ ಆರೋಗ್ಯ ವ್ಯವಸ್ಥೆಗೆ ಆರೋಗ್ಯಕ್ಕೆ ಪೂರಕವೂ ಹೌದು. ಈ ನಿಟ್ಟಿನಲ್ಲಿ ನೀತಿ ಆಯೋಗದ ಮಾರ್ಗದರ್ಶನದಲ್ಲಿ ರಾಜ್ಯದ ಎಲ್ಲ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಆರೋಗ್ಯಾಧಿಕಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜಿಲ್ಲಾ ಮುಖ್ಯಸ್ಥರಿಗೆ ರಾಜ್ಯದ ರಾಜಧಾನಿಯಲ್ಲಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿದ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ.ಸುಧಾಕರ್ ಅವರು, ರಾಜ್ಯ ಕೋವಿಡ್‌ನಂತಹ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಿದ ಮಾದರಿಯಲ್ಲೇ ಅಪೌಷ್ಟಿಕತೆ ಮತ್ತು ರಕ್ತ ಹೀನತೆಯ ಸವಾಲನ್ನು ತಡೆಯಲು ಸಾಧ್ಯವಿದೆ. ಕರ್ನಾಟಕವು ಜನ ಕಲ್ಯಾಣ ಕಾರ್ಯಕ್ರಮ ಅನುಷ್ಠಾನದಲ್ಲಿ ಯಾವಾಗಲೂ ಮುಂಚೂಣಿಯಲ್ಲಿದ್ದು, ಇತರ ರಾಜ್ಯಗಳಿಗೆ 'ಉತ್ತಮ ಅಭಿವೃದ್ಧಿ ಮಾದರಿ' ರಾಜ್ಯವಾಗಿದೆ ಎಂದರು.

ಆರೋಗ್ಯ ಕ್ಷೇತ್ರದಲ್ಲಿ ಅದರಲ್ಲೂ ಮುಖ್ಯವಾಗಿ ತಾಯಿ ಮರಣ, ಶಿಶು ಮರಣ ತಡೆ ಮತ್ತು ಇದಕ್ಕೆ ಮೂಲ ಕಾರಣವಾಗಿರುವ ರಕ್ತ ಹೀನತೆ ಮತ್ತು ಅಪೌಷ್ಟಿಕತೆ ತಡೆಗೆ ರಾಜ್ಯದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜಕೀಯ ಇಚ್ಛಾಶಕ್ತಿಯನ್ನು ಹೊಂದಿದೆ. ಐಇಸಿ (ಮಾಹಿತಿಯೇ ಶಕ್ತಿ) ಕಾರ್ಯಕ್ರಮಗಳನ್ನು


Downloaded From: www.kpscvaani.com

ಬಹುಮಾಧ್ಯಮಗಳ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿಸಲು ಹಾಗೂ ತನ್ಮೂಲಕ ಸಮಸ್ಯೆ ಪರಿಹರಿಸಲು ಇಲಾಖೆ ಸನ್ನದ್ಧವಾಗಿದೆ ಎಂದು ತಿಳಿಸಿದರು.

ರಕ್ತ ಹೀನತೆ ಮತ್ತು ಅಪೌಷ್ಟಿಕತೆಗೆ ಕೇವಲ ಬಡತನ ಕಾರಣವಲ್ಲ. ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಮೂಢನಂಬಿಕೆಗಳಿಂದ ಹಿಡಿದು, ನಾವು ಅಸಂಪ್ರದಾಯಿಕವಾಗಿ ತಿನ್ನುತ್ತಿರುವ ಆಹಾರಗಳು, ಜೀವನ ರೀತಿಗಳು ಕಾರಣ. ಇದಕ್ಕಾಗಿ ಆರೋಗ್ಯ ಇಲಾಖೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಸಮನ್ವಯದೊಂದಿಗೆ ಅನೀಮಿಯಾ ಮುಕ್ತ ಕರ್ನಾಟಕ ನಿರ್ಮಾಣಕ್ಕೆ ಮುಂದಾಗಿದೆ. ಇದು ಎಲ್ಲಾ ರೀತಿಯ ಪೂರಕ ನೆರವನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ.

ಮಾಹಿತಿ ಪ್ರಚಾರಗಳ ಜೊತೆಗೆ ಗರ್ಭಿಣಿ ಮತ್ತು ಮಕ್ಕಳ ವೈದ್ಯಕೀಯ ತಪಾಸಣೆಗೆ ಆದ್ಯತೆ ನೀಡಲು ಈಗಾಗಲೇ ಕೇಂದ್ರದ ನೀತಿ ಆಯೋಗದೊಂದಿಗೆ ಕರಡು ನೀತಿ ರಚಿಸಲಾಗಿದ್ದು, ಯೋಜನೆ ರೂಪಿಸಲು ಸ್ಥಳೀಯವಾಗಿ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯಲು ಕಾರ್ಯಾಗಾರ ಆಯೋಜಿಸಲಾಗಿದ್ದು,' ಕರಡು ನೀತಿಯನ್ನು ಅಂತಿಮಗೊಳಿಸಲು ಮುಖ್ಯ ಕಾರ್ಯದರ್ಶಿಗಳು ಕ್ರಮಕೈಗೊಳ್ಳಲಿದ್ದಾರೆ.

'ಈಟ್ ರೈಟ್ ಕ್ಯಾಂಪ್ಯಾನ್' ಆರೋಗ್ಯ ಇಲಾಖೆಯ ಹೊಸ ಘೋಷವಾಕ್ಯವಾಗಲಿದ್ದು, ಸ್ವಾಸ್ಥ್ಯ ಕರ್ನಾಟಕ ನಮ್ಮ ಧ್ಯೇಯವಾಗಲಿದೆ.

ದಿನಪೂರ್ತಿ ನಡೆದ ಕಾರ್ಯಾಗಾರದಲ್ಲಿ ನೀತಿ ಆಯೋಗದ ಅಧಿಕಾರಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಂದ ಹಿಡಿದು ಜಿಲ್ಲಾ ಮಟ್ಟದ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಮತ್ತು ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ನಡೆಸಿದ ಚಿಂತನ ಮಂಥನಗಳಿಂದ ಮುಂದಿನ ಎರಡು ವರ್ಷಗಳೊಳಗಾಗಿ ಕರ್ನಾಟಕ ಅಪೌಷ್ಟಿಕ ಮತ್ತು ರಕ್ತಹೀನತೆ ಮುಕ್ತ ರಾಜ್ಯವಾಗುವ ಕನಸು ನನಸಾಗುವ ಆಶಾ ಭಾವನೆ ಮೂಡಿತು.

ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಟಿ.ಕೆ. ಅನಿಲ್ ಕುಮಾರ್ ಅವರು, ಕರ್ನಾಟಕವನ್ನು ಅಪೌಷ್ಟಿಕ ಮತ್ತು ಅನೀಮಿಯಾ ಮುಕ್ತವಾಗಿಸಲು ಬಹು ವಲಯಗಳಲ್ಲಿರುವ ಭಾಗೀದಾರರು ಅವರವರ ಪಾತ್ರಗಳ ಪ್ರಾಮುಖ್ಯತೆಯನ್ನು ಮತ್ತು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕು. ಮಗು ಜನಿಸಿದ 1000 ದಿನಗಳು ಅಂದರೆ ಮೊದಲ ಎರಡು ವರ್ಷ ಮಗುವಿನ ಮೆದುಳು ವಿಕಸನಕ್ಕೆ ಅತೀ ಅಗತ್ಯ ದಿನಗಳು. ಈ ಸಂದರ್ಭದಲ್ಲಿ ಮಗುವಿನ ಕಡಿಮೆ ತೂಕ, ಕಾಯಿಲೆಗಳು, ಎದೆ ಹಾಲು ಕುಡಿಸದಿರುವಿಕೆ, ಸಮಗ್ರ ಶಿಶು ಆಹಾರದ ಕೊರತೆಗಳು ಮುಂದೆ ಜೀವನದ ಉದ್ದಕ್ಕೂ ಕಾಡಲಿವೆ ಎಂಬುದರ ಬಗ್ಗೆ ಪ್ರತಿಯೊಬ್ಬರಿಗೂ ಮಾಹಿತಿ ದೊರಕಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ಹೊಣೆ ನಮಗಿದೆ ಎಂದರು.

ಕೊಪ್ಪಳ ಸಿಇಒ ಬಿ.ಫೌಜಿಯಾ ತರನಮ್ ಅವರು ತಮ್ಮ ಜಿಲ್ಲೆಯಲ್ಲಿ ಯೋಜನೆಗಳ ಜಾರಿ ಮತ್ತು ಪರಿಣಾಮಕಾರಿ ಅನುಷ್ಠಾನದಿಂದಾಗಿರುವ ಲಾಭಗಳ ಬಗ್ಗೆ ಕಾರ್ಯಾಗಾರದಲ್ಲಿ ಅನುಭವ ಹಂಚಿಕೊಂಡರು.

ಡಾ.ಅರುಂಧತಿ ಚಂದ್ರಶೇಖರ್ ಅವರು ಕರಡು ನೀತಿ ನಿರೂಪಣೆ ಕುರಿತು ಅಭಿಪ್ರಾಯ ಹಂಚಿಕೊಂಡರು. ವಿವಿಧ ಜಿಲ್ಲೆಯ ಅಧಿಕಾರಿಗಳು ಮತ್ತು ಆರೋಗ್ಯಾಧಿಕಾರಿಗಳು ತಾವು ಕ್ಷೇತ್ರ ಭೇಟಿ ವೇಳೆ ಅನುಭವಿಸಿರುವ ಸವಾಲುಗಳನ್ನು ಮತ್ತು ಸಾಧನೆಗಳನ್ನು ಈ ಸಂದರ್ಭದಲ್ಲಿ ವಿವರಿಸಿದರು.



ಸಚಿವರು ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಅಭಿಪ್ರಾಯ ಮಂಡಿಸುತ್ತಾ, ಹಳ್ಳಿಗಳಿಗಿಂತ ಸವಾಲು ಪಟ್ಟಣಗಳದ್ದು. ಇಲ್ಲೇ ವಲಸೆ ಕಾರ್ಮಿಕರು ಹೆಚ್ಚಾಗಿದ್ದು, ಇವರ ಮೇಲೆ ನಿಗಾ ಇರಿಸುವಿಕೆಗೆ ಇಲಾಖೆಗಳು ಈ ಕುರಿತು ಯೋಜನೆಗಳನ್ನು ರೂಪಿಸಿಕೊಳ್ಳುವಂತೆ ತಿಳಿಸಿದರು.

ಯೋಜನೆಗಳು ಮೇಲಿನಿಂದ ರೂಪುಗೊಳ್ಳದೆ ತಳಮಟ್ಟದಿಂದ ರೂಪುಗೊಳ್ಳಬೇಕು. ಜನರು, ಫಲಾನುಭವಿಗಳು ಏನನ್ನು ಬಯಸುತ್ತಾರೆ ಅದನ್ನು ಅವರಿಗೆ ನೀಡುವಂತೆ, ಹಾಗೂ ಅಪೌಷ್ಟಿಕತೆಯ ಸವಾಲಿಗೆ ಸ್ಥಳೀಯ ಸಮಗ್ರ ಪೌಷ್ಟಿಕ ಆಹಾರವನ್ನು ಲಭ್ಯವಾಗಿಸಿಕೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯಕ್ಕೆ ಅರಿವೇ ಔಷಧಿಯಾಗುವುದರಿಂದ ಬಹಳಷ್ಟು ಅರಿವು ಮೂಡಿಸುವ ಕಾರ್ಯಕ್ರಮಗಳ ಜೊತೆಗೆ ನಿರಂತರ ಪ್ರಯತ್ನಗಳು ಸುಸ್ಥಿರ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಅಗತ್ಯ ಎಂಬ ನಿಲುವಿನೊಂದಿಗೆ ಸ್ಥಳೀಯ ನೀತಿ ನಿರೂಪಣೆಗೆ ಒತ್ತು ನೀಡಿ ಅಪೌಷ್ಟಿಕ ಮತ್ತು ಅನೀಮಿಯಾ ಮುಕ್ತ ಕರ್ನಾಟಕ ನಿರ್ಮಾಣಕ್ಕೆ ನಿರ್ಧರಿಸಲಾಯಿತು.

ಅಭಿವೃದ್ಧಿ ಪಥದಲ್ಲಿ ಮುಂದುವರಿಯುತ್ತಿರುವ ಇಂದಿನ ದಿನಗಳಲ್ಲಿ ಶಿಶು ಮರಣ ಮತ್ತು ತಾಯಿ ಮರಣದ ಬಗ್ಗೆ ಅಪೌಷ್ಟಿಕತೆಯ ಬಗ್ಗೆ ಅರಿತು ನಿವಾರಿಸಲು ಎಲ್ಲ ಇಲಾಖೆಗಳು ಸಮನ್ವಯದಿಂದ ಕ್ರಮಕೈಗೊಳ್ಳಬೇಕು. ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ನಮ್ಮ ಪರಂಪರೆಯಾಗಬೇಕು. ರಾಜ್ಯ ಬಜೆಟ್‌ನಲ್ಲಿ ಶೇಕಡ 8ರಷ್ಟು ಪಾಲನ್ನು ಆರೋಗ್ಯ ವಲಯಕ್ಕೆ ಮೀಸಲಿಡಬೇಕೆಂಬುದು ತಜ್ಞರ ಅಭಿಪ್ರಾಯ. ಈಗಾಗಲೇ ಕೋವಿಡ್ ಅವಧಿಯಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಅನುದಾನ ಹಾಗೂ ಮೂಲಸೌಕರ್ಯ ಹೆಚ್ಚಿಸಲಾಗಿದ್ದು ಇತರೆ ಅಂಶಗಳಾದ ಪೌಷ್ಟಿಕ ಆಹಾರ, ಶುದ್ಧ ಕುಡಿಯುವ ನೀರು ಪೂರೈಕೆ, ಲಸಿಕಾಕರಣಗಳಿಗೆ ಒತ್ತು ನೀಡಲಾಗಿದೆ.


Downloaded From: www.kpscvaani.com



# ಪ್ರಜಾರಾಜ್ಯದಲ್ಲಿ ಪ್ರಜೆಗಳೇ ಪ್ರಭುಗಳು

**ಪ್ರಜೆಗಳಿಗಾಗಿ, ಪ್ರಜೆಗಳಿಂದ, ಆಯ್ಕೆಯಾದ ಪ್ರಜಾ ಪ್ರತಿನಿಧಿಗಳು ಆಡಳಿತ ನಡೆಸುವ ಪ್ರಜಾಪ್ರಭುತ್ವದ ವ್ಯವಸ್ಥೆಯಡಿಯಲ್ಲಿ ಬದುಕಿ ಬಾಳುವ ಪ್ರಜೆಗಳು ಸರ್ವತಂತ್ರ ಸ್ವತಂತ್ರರು.**

ವೆಂಕಟೇಶ ಕೆ. ಜನಾದ್ರಿ,

ಈ ಪ್ರಜಾಪ್ರಭುತ್ವ ವ್ಯವಸ್ಥೆಯಡಿಯಲ್ಲಿ ಪ್ರಜೆಗಳಿಗೆ ಮುಕ್ತವಾದ ಅವಕಾಶವುಳ್ಳ ಹಕ್ಕುಗಳಿವೆ. ಹಕ್ಕುಗಳ ಜತೆಜತೆಯಲ್ಲಿ ಅವರವರದೇ ಆದಂತಹ ಕೆಲವು ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ನಿರ್ವಹಿಸುವ ಮೂಲಕ ಆ ದೇಶದ ಪ್ರಜೆಗಳನ್ನು ಆ ದೇಶದ ಪ್ರಜೆಗಳೇ ಆರಿಸಿದ ಪ್ರಭುಗಳಿಂದ ನಿಯಂತ್ರಣದ ಕಡಿವಾಣ ಹಾಕಲಾಗಿರುತ್ತದೆ. ಪ್ರತಿಯೊಬ್ಬರೂ ಅವರವರಿಗಿರುವ ಸ್ವತಂತ್ರ್ಯದ ಪರಿವ್ಯಾಪ್ತಿಯಲ್ಲಿಯೇ ಮುಕ್ತ ಪರಿಸರದಲ್ಲಿ ವ್ಯವಸ್ಥಿತವಾಗಿ ಬದುಕಬಹುದಾಗಿದೆ. ಆ ರೀತಿಯ ಬದುಕುವ ಹಕ್ಕನ್ನು ಪ್ರಜಾಪ್ರಭುತ್ವ ದಯಪಾಲಿಸಿದೆ. ಈ ಪ್ರಜಾಪ್ರಭುತ್ವದ ಮೂಲ ಪರಿಕಲ್ಪನೆ ಜಗತ್ತಿನಲ್ಲಿಯೇ ಮೊತ್ತ ಮೊದಲ ಬಾರಿಗೆ ಬಸವಕಲ್ಯಾಣದಲ್ಲಿಯ ಅನುಭವ ಮಂಟಪದಲ್ಲಿ ಬಸವಣ್ಣನವರ ಜತೆ ಹಲವಾರು ಶರಣರ ನೇತೃತ್ವದಲ್ಲಿ ಮೊಳಕೆಯೊಡೆಯಿತೆನ್ನಬಹುದು.

ಅಂದಿನವರೆಗೆ ವ್ಯವಸ್ಥೆಯಲ್ಲಿ ಆಡಳಿತ ನಡೆಸುವವರು ಸಾಮಾನ್ಯವಾಗಿ ರಾಜರು ಇದ್ದರು, ರಾಜಶಾಹಿ ವ್ಯವಸ್ಥೆ ಇತ್ತು. ಅಲ್ಲಿ ಮುಕ್ತವಾದ ಅವಕಾಶವಾಗಲೀ, ಸ್ವಾತಂತ್ರ್ಯವಾಗಲಿ ಇರಲಿಲ್ಲ. ಸರಿಯಿರಲಿ ತಪ್ಪಿರಲಿ ರಾಜನೇ ಸರಸ್ವ, ರಾಜಾಜ್ಞೆಯನ್ನೇ ಪ್ರಜೆಗಳು ಪಾಲಿಸಬೇಕಾಗಿತ್ತು. ಕೆಲವು ಧರ್ಮದ ವ್ಯವಸ್ಥೆಯೇ ಆಡಳಿತವಾಗಿತ್ತು. ಈ ತರಹದ ಪ್ರಜೆಗಳಿಗೆ ಪ್ರಜಾಪ್ರಭುತ್ವ ಎಂಬ ಮುಕ್ತ ಆಡಳಿತದ ವ್ಯವಸ್ಥೆಯ ಒಂದು ಪರಿಕಲ್ಪನೆ ಇರಲೇ ಇಲ್ಲ.

ಪ್ರಜಾಪ್ರಭುತ್ವ ಗಣರಾಜ್ಯದ ವ್ಯವಸ್ಥೆ ಇರುವ ದೇಶದಲ್ಲಿ ಸರಕಾರದ ಆಡಳಿತ ಯಂತ್ರ ಸುಸೂತ್ರವಾಗಿ ನಡೆಯುವಲ್ಲಿ ಕಾರ್ಯಾಂಗ, ನ್ಯಾಯಾಂಗಗಳ ಚಾಲನೆಗಾಗಿ ಅಧಿಕಾರಿ ವರ್ಗವಿದ್ದರೆ ನಿರ್ಣಯ ಕೈಕೊಳ್ಳಲು ಶಾಸಕಾಂಗವಿದ್ದು ಅಲ್ಲಿಯ ಶಾಸಕರನ್ನು ಪ್ರಜಾಪ್ರತಿನಿಧಿಗಳೆಂದು ಆಯ್ಕೆ ಮಾಡುವ ಅಧಿಕಾರ ಮತದಾರನ ಕೈಯಲ್ಲಿದೆ. ಆ ದೃಷ್ಟಿಯಿಂದ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಸಾಮಾನ್ಯ



Downloaded From: www.kpscvaani.com

ಪ್ರಜೆ ವಾಸ್ತವದಲ್ಲಿ ರಾಜನಾಗಿದ್ದಾನೆ. ಸರ್ವಾಧಿಕಾರ, ನಿರಂಕುಶ ಪ್ರಭುತ್ವ ವ್ಯವಸ್ಥೆಯಡಿಯಲ್ಲಿರುವಂತಹ ಉಸಿರುಗಟ್ಟಿಸುವ ವಾತಾವರಣವಿಲ್ಲದೇ ಪ್ರಜೆಗಳದ್ದೇ ಆದ, ಪ್ರಜೆಗಳಿಂದಲೇ ಆಯ್ಕೆಯಾದ ಪ್ರಜೆಗಳ ಸರ್ಕಾರದಡಿಯಲ್ಲಿ ಉತ್ತಮವಾಗಿ ಬದುಕಿ ಅಭಿವೃದ್ಧಿ ಹೊಂದಲು ಸಾಧ್ಯ, ಆದರೆ ಪ್ರಜೆಗಳನ್ನಾಳುವ ನಾಯಕರ ಆಯ್ಕೆ ಮಾತ್ರ ಪ್ರಮುಖ ಪಾತ್ರವಹಿಸುತ್ತದೆ. "Think before ink" ಎಂಬಂತೆ ಪ್ರಜೆಗಳು ತಮ್ಮ ಒಲವಿನ ಆಯ್ಕೆಯ ಮತ ಚಲಾಯಿಸುವಾಗ ವಿಚಾರ ಮಾಡಿ ಆಯ್ಕೆಯ ಮತವನ್ನು ಚಲಾಯಿಸಬೇಕು. ಯಾವುದೇ ಆಶೆ, ಆಮಿಶಕ್ಕೆ ಒಳಗಾಗಿ ತಾವು ಚಲಾಯಿಸಿದ ಮತ ಐದು ವರ್ಷದ ದುರಾಡಳಿತಕ್ಕೆ ಅವಕಾಶವೀಯಬಾರದು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುವೇ ಆಗಿರುವ ಪ್ರತಿಯೊಬ್ಬ ಪ್ರಜೆಯೂ ತಾನು ಚಲಾಯಿಸುವ ಮತದಿಂದ ಆಯ್ಕೆಯಾಗುವ ಪ್ರಜಾಪ್ರತಿನಿಧಿ ಇಡೀ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ರೂಪಿಸುವಲ್ಲಿ ತನುಮನದಿಂದ ಪ್ರಯತ್ನಿಸಬೇಕು. ಆಗ ಆ ನಾಡು "ಬಂದೂಕಿನ ನಳಿಕೆಯಲ್ಲಿ ಗುಬ್ಬಿ ಗೂಡು ಕಟ್ಟಿ ಬದುಕುವಂತಹ" ಶಾಂತಿಯುತ ಸಮಾಜದಿಂದ ಕೂಡಿದ ಸುಖಿ ನಾಡಾಗಿ ಸಮಗ್ರ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಈ ಬಗೆಯ ಸುಖೀ ನಾಡಾಗಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಕಷ್ಟು ಅವಕಾಶಗಳಿರುವುದರಿಂದ ಮತದಾರ, ಆಯ್ಕೆಯಾದ ಜನನಾಯಕ ತಮ್ಮ ತಮ್ಮ ಜವಾಬ್ದಾರಿಯರಿತು ತಮ್ಮೊಂದಿಗೆ ದೇಶದ ಪ್ರಗತಿಗೆ ಪ್ರಯತ್ನಶೀಲರಾದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗುತ್ತದೆ.

ಶತಶತಮಾನಗಳಿಂದಲೂ ರಾಜ ಪ್ರಭುತ್ವದಲ್ಲಿ ಹೇಳಿದ್ದನ್ನು ಮಾಡುವ, ಆಳಿಸಿಕೊಳ್ಳುವ ಜನತೆಯಿಂದ ಕೂಡಿದ ಭಾರತವನ್ನು ಹೊರಗಿನ ಬ್ರಿಟೀಷರೂ ಸಹ ಗುಲಾಮಿತನದ ವ್ಯವಸ್ಥೆಯೊಳಗಡೆ ಬಂಧಿಯಾಗಿಸಿ ಪರಸ್ಪರರ ನಡುವೆ ವಿಷ ಬೀಜ ಬಿತ್ತಿ ಒಡೆದು ಆಳುವ ನೀತಿಯನ್ನು ಅನುಸರಿಸಿ ನೂರಾರು ವರ್ಷಗಳ ಕಾಲ ಅತ್ಯಂತ ಸುಲಭವಾಗಿ ಆಡಳಿತ ಚಲಾಯಿಸಿಬಿಟ್ಟರು. ಅವರು ಆಳಿದ ಈ ವ್ಯವಸ್ಥೆಯಲ್ಲಿ ದೇಶ ಸ್ವತಂತ್ರ್ಯ ಹೊಂದಿದಾಗ ಯಾವ ವ್ಯವಸ್ಥೆಯಡಿಯಲ್ಲಿ ಈ ದೇಶದ ಜನತೆಯನ್ನು ಪ್ರಗತಿ ಚಕ್ರದೊಂದಿಗೆ ಕೊಂಡೊಯ್ಯಬೇಕೆಂಬ ಸಂದಿಗ್ಧತೆಯಲ್ಲಿ ರಾಷ್ಟ್ರೀಯ ನೇತಾರರ ವಿಚಾರ ಮಾಡಿ ಹಲವು ದೇಶಗಳ ಆಡಳಿತದಲ್ಲಿ ಅನುಸರಿಸುವಂತಹ ಅತ್ಯುತ್ತಮ ಅಂಶಗಳನ್ನು ಪರಿಗಣಿಸಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯಡಿಯಲ್ಲಿ ಅವಶ್ಯವಿರುವ ಸಂವಿಧಾನವನ್ನು ರಚಿಸಿದರು. ಆ ಸಂವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಈ ದೇಶದ ಜನತೆಯನ್ನು ಮುನ್ನಡೆಸಿಕೊಂಡು ಹೋಗಲು ಪ್ರಜಾಪ್ರಭುತ್ವವೆಂಬ ಮುಕ್ತ ವ್ಯವಸ್ಥೆಯಲ್ಲಿ ಆಡಳಿತ ಯಂತ್ರ ಸುಗಮವಾಗಿ ಸಾಗಲು ಅವಕಾಶ ಕಲ್ಪಿಸಲಾಗಿದೆ.

ಇಂತಹ ವ್ಯವಸ್ಥೆಯಲ್ಲಿ ಮತದಾರನಾದ ಶ್ರೀಸಾಮಾನ್ಯ ತನ್ನ **"ಮತದಾನ"** ಎಂಬ ಅಮೂಲ್ಯ ಅಸ್ತ್ರದಿಂದ ಪ್ರಜಾಪ್ರಭುತ್ವದ ಪ್ರಜಾ ಪ್ರತಿನಿಧಿಯನ್ನು ನಿಯಂತ್ರಿಸುವ ಮೂಲಕ ಹಾಗೂ ಅದೇ ರೀತಿ ನಾಯಕರಾದವರು ಪ್ರಜಾ ಪ್ರತಿನಿಧಿಯೆಂಬ ಸ್ಥಾನಕ್ಕೆ ಕಳಂಕ ತರದಂತೆ ಅದರ ಮಹತ್ವವರಿತು ಸಾಗಿದರೆ ಮಾತ್ರ ದೇಶ ಅಭಿವೃದ್ಧಿ ಹೊಂದಬಹುದು. ಈ ಸಮಯದಲ್ಲಿ ನೆನೆಯಲೇಬೇಕಾದಂತಹ ಒಂದು ಘಟನೆ ನನ್ನ ನೆನಪಿಗೆ ಬರುತ್ತದೆ. ಹಿಂದೆ ಭಾರತದ ಪ್ರಧಾನಿಯಾಗಿದ್ದ ಶ್ರೀ ಲಾಲಬಹದ್ದೂರ್ ಶಾಸ್ತ್ರಿಯವರು ಅಪ್ಪಟ ಪ್ರಾಮಾಣಿಕತೆಗೆ ಹೆಸರಾದವರು. ಅವರು ಬೇಡಿದವರಿಗೆ ತಮ್ಮಲ್ಲಿದ್ದದ್ದನ್ನು ದಾನವಾಗಿ ಕೊಟ್ಟುಬಿಡುವವರಾಗಿದ್ದರು. ಒಮ್ಮೆ ಅವರ ಮನೆಗೊಬ್ಬ ಬಡವ ತನ್ನ ಮಗಳ ಮದುವೆ ಸಲುವಾಗಿ ಹಣ ಸಹಾಯ ಕೇಳಲು ಬಂದಾಗ ವಾಸ್ತವವಾಗಿ ಆ ಸಮಯದಲ್ಲಿ ಅವರಲ್ಲಿ ಹಣವಿರಲಿಲ್ಲ. ಅದೇ ವಿಷಯ ಕುರಿತು ಅವರು ವಿಷಾದದಿಂದ ಆ ಬಡವನೊಂದಿಗೆ ಮಾತನಾಡುವಾಗ ಅವರ ಪತ್ನಿ ಒಂದಿಡಿ ಗಂಟಿನ ಮೊತ್ತವನ್ನು ಬೇಡಿ ಬಂದ ಬಡವನಿಗೆ ನೀಡಿದರು. ಆ ಬಡವ ತೆರಳಿದ ನಂತರ ಶಾಸ್ತ್ರೀಜಿಯವರು ಆ ಹೆಚ್ಚುವರಿ ಹಣದ ಕುರಿತು ತಮ್ಮ ಪತ್ನಿಯನ್ನು ವಿಚಾರಿಸಿದಾಗ, ಅವರ ಪತ್ನಿ "ನೀವು ಮನೆಯ ಖರ್ಚಿಗಾಗಿ ಕೊಟ್ಟಿರುವ ಹಣದಲ್ಲಿಯೇ ಸ್ವಲ್ಪ ಉಳಿಸಿದ್ದೆ, ನಿಮ್ಮ ದೃಷ್ಟಿಯಲ್ಲಿ ನಾನು ತಪ್ಪು ಮಾಡಿದೆ ಎಂದೆನಿಸಿದಲ್ಲಿ ದಯವಿಟ್ಟು ಕ್ಷಮಿಸಿ" ಎಂದರಂತೆ.

ಆಗ ಶಾಸ್ತ್ರೀಜಿಯವರು ತಮ್ಮ ಪತ್ನಿಯೊಂದಿಗೆ ಏನೊಂದು ಪ್ರತಿಕ್ರಿಯಿಸದೇ ಹರ್ಷದೊಂದಿಗೆ ನೆಮ್ಮದಿಯಿಂದ ಕುಳಿತರು. ಆದರೆ ಕೂಡಲೇ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು ನನ್ನ ವೇತನವು ಅವಶ್ಯಕತೆಗಿಂತ ಹೆಚ್ಚಾಗಿರುವುದು ನನ್ನ ಗಮನಕ್ಕೆ ಕಂಡುಬಂದಿರುವುದರಿಂದ ಇನ್ನು ಮುಂದೆ ಪ್ರತಿ ತಿಂಗಳು ರೂ. 40/-ಗಳನ್ನು ಕಡಿತಗೊಳಿಸಿ ತಮ್ಮ ವೇತನವನ್ನು ಪಾವತಿಸುವಂತೆ ಕೋರಿಕೊಳ್ಳುತ್ತಾರೆ. ಅದು ಅವರ ಉನ್ನತ ಆದರ್ಶವಾಗಿದೆ. ಆದರೆ ಇಂದಿನ ಕಾಲದಲ್ಲಿ ಶಾಸ್ತ್ರಿ ಅವರಂತ ಜನಪ್ರತಿನಿಧಿಗಳು ಎಲ್ಲಿ ಸಿಗುತ್ತಾರೆ ಹೇಳಿ.

ಪ್ರಸ್ತುತ ನಮ್ಮ ದೇಶದುದ್ದಗಲಕ್ಕೂ ವಿವಿಧ ನೆಲೆಯಲ್ಲಿ ಚುನಾವಣೆಗಳು ನಡೆಯುವ ಕಾಲ ಘಟ್ಟದಲ್ಲಿ ನಾವಿದ್ದೇವೆ. ಈ ಸಂದರ್ಭದಲ್ಲಿ ಮತದಾರ ಪ್ರಭು ಯಾವುದೇ ಆಶೆ, ಆಮಿಷಗಳಿಗೀಡಾಗದೇ ತಾವು ಆಯ್ಕೆ ಮಾಡುವ ಜನಪ್ರತಿನಿಧಿ ಹೇಗಿರಬೇಕೆಂದು ಚಿಂತಿಸುವ ಕಾಲ ಇಂದು ಸನ್ನಿಹಿತವಾಗಿದೆ. ನಮ್ಮ ಪ್ರತಿಯೊಬ್ಬರ ಆದಾಯದ ಅಳತೆಗೋಲು ಈ ದೇಶದ ಕಟ್ಟ ಕಡೆಯ ನಿಕೃಷ್ಟ ವ್ಯಕ್ತಿಯ ಅವಶ್ಯಕತೆಯ ಮಾನದಂಡವನ್ನು ಅವಲಂಭಿಸಿರಬೇಕೆಂದು ಬಲ್ಲವರು ಹೇಳುತ್ತಾರೆ. ಅವಶ್ಯಕತೆಗಿಂತ ಹೆಚ್ಚಿಗೆ ಸಂಗ್ರಹಿಸುವ ಬುದ್ಧಿಯೂ ಮಾನವನಿಗಲ್ಲದೇ ಜಗತ್ತಿನ ಬೇರಾವ ಪ್ರಾಣಿ ಪಕ್ಷಿಗಳಿಗೂ ಇರುವುದಿಲ್ಲ. ನಾವು ಆಯ್ಕೆ ಮಾಡುವ ನಮ್ಮ ಪ್ರಜಾಪ್ರತಿನಿಧಿಯ ತನುಮನವೆಲ್ಲವೂ ಪ್ರಜಾ ಕಲ್ಯಾಣವೆಂಬ ಪರಿಕಲ್ಪನೆಯುಳ್ಳವರಾಗಿರಬೇಕು. ಅಂತಹ ನಾಯಕರನ್ನು ಮತದಾನದ ಮೂಲಕ ಆಯ್ಕೆ ಮಾಡಬೇಕಾದ ಬಹುದೊಡ್ಡ ಹೊಣೆ ಪ್ರತಿಯೊಬ್ಬ ಪ್ರಜೆಯದ್ದಾಗಿದೆ. ಈ ಎಲ್ಲಾ ಅಂಶಗಳನ್ನು ಅರಿತುಕೊಂಡು ನಡೆದಲ್ಲಿ ಪ್ರಜಾಪ್ರಭುತ್ವವನ್ನು ಚೆನ್ನಾಗಿ ಬಳಸಿಕೊಳ್ಳಬಹುದಾಗಿದೆ.

"ಪ್ರಜಾಪ್ರಭುತ್ವ"ದಲ್ಲಿ ಪ್ರಜೆಗಳೇ ಪ್ರಭುಗಳಾಗುವ ಅವಕಾಶಗಳಿದ್ದು ಅದರನ್ವಯ ಎಲ್ಲರ ಆಶಯ ಈಡೇರಲಿ, ಅಂತಹ ಒಂದು ಒಳ್ಳೆಯ ವಿಚಾರ, ಮನಸ್ಸು, ಇಚ್ಛಾಶಕ್ತಿಯನ್ನು ರಾಜಕೀಯ ನೇತಾರರಿಗೂ ಹಾಗೂ ಪ್ರಜೆಗಳಿಗೂ ನೀಡಲೆಂದು ಆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆ ಅಭಿವೃದ್ಧಿ ಪಥದತ್ತ ಸಾಗಿ ನಾವು ಆಚರಿಸುತ್ತಿರುವ ಗಣರಾಜ್ಯೋತ್ಸವವು ಹೆಚ್ಚು ಅರ್ಥಪೂರ್ಣವಾಗಲಿ.


Downloaded From: www.kpscvaani.com

# ಪದಬಂಧ-38

| | | | | | | | | |
|---|---|---|---|---|---|---|---|---|
| 1 | | 2 | ■ | ■ | 3 | ■ | ■ | 4 |
| | ■ | | ■ | 5 | | 6 | | |
| | ■ | 7 | 8 | ■ | ■ | | ■ | |
| | ■ | ■ | | ■ | ■ | | ■ | ■ |
| | ■ | 9 | | | 10 | | ■ | 11 |
| ■ | ■ | | ■ | ■ | | ■ | ■ | |
| 12 | ■ | | ■ | ■ | 13 | 14 | ■ | |
| 15 | | | 16 | | ■ | | ■ | |
| | ■ | ■ | | ■ | ■ | 17 | | |

ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಕನಸು ಇಲ್ಲಿ ನಿಜವಾಗಿದೆ (3)
5. ಟಿಬೆಟ್ಟಿನ ಕಾಡು ಎತ್ತು (5)
7. ಮಗಳೊಡನೆ ಕಾಣಿಸಿದ ಪುತ್ರ (2)
9. ಚಳಿಗಾಲದ ಅಧಿವೇಶನ ಜರುಗುವ ಬೆಳಗಾವಿಯ ಭವನ (5)
13. ಅಧಮನ ಹತ್ತಿರವಿರುವ ಹಣ (2)
15. ಹಳೆಯದನ್ನು ಹೊಸತು ಮಾಡುವಿಕೆ (5)
17. ಮನೆ ಇಲ್ಲಿ ಉಲ್ಟಾ ಆಗಿದೆ (3)

## ಮೇಲಿಂದ ಕೆಳಕ್ಕೆ

1. ನಗರವಾಸಿ ಬಡಜನರ ಆರೋಗ್ಯ ರಕ್ಷಣೆಗಾಗಿ ಪ್ರಾರಂಭವಾಗಿರುವ ಆರೋಗ್ಯ ಕೇಂದ್ರ (5)
2. ಮಗನಿಗೆ ಇದು ಸಲೀಸು (3)
3. ಪಂಚಪಾಂಡವರಲ್ಲಿ ಎರಡನೆಯವನು (2)
4. ತನಗೆ ತಾನೇ ಮಾತನಾಡಿಕೊಳ್ಳುವುದು (3)
6. ಬಿಲ್ಲುಗಾರನಿಲ್ಲಿ ತಿರುಗಿದ್ದಾನಲ್ಲಾ! (4)
8. ಗಡಕ್ಕನೆ ಬಂದೆರಗಿದ ಗಂಡು ಬೆಕ್ಕು (3)
9. ಲೋಪದೋಷಗಳನ್ನು ಸರಿಪಡಿಸುವವನು (4)
10. ಸುಗಂಧ ದ್ರವ್ಯ ಬೀರುವ ವಾಸನೆ (3)
11. ಶ್ರೇಷ್ಠ ವರ್ಗದ ಸನ್ಯಾಸಿ (5)
12. ಓಬವ್ವನ ಆಯುಧ (3)
14. ನಯವಾಗಿ ಹೊಳೆಯುವ ಅಕ್ಷಿ(3)
16. ವಿರಮಿಸುತ್ತಿರುವಾಗ ಮೂಡಿದ ಸೂರ್ಯ (2)

## ಉತ್ತರ

**ಮೇಲಿಂದ ಕೆಳಕ್ಕೆ**

1. ನಮ್ಮ ಕ್ಲಿನಿಕ್ 2. ಸುಗಮ 3. ಭೀಮ 4. ಸ್ವಗತ
6. ರಿರ್ಧಾನುಧ 8. ಗಡವ 9. ಸುಧಾರಕ 10. ಸೌಗಂಧ
11. ಪರಮಹಂಸ 12. ಒನಕೆ 14. ನಯನ 16.ರವಿ

**ಎಡದಿಂದ ಬಲಕ್ಕೆ**

1. ನನಸು 5. ಚಮರಿಮೃಗ 7. ಮಗ 9. ಸುವರ್ಣಸೌಧ
13. ಧನ 15. ನವೀಕರಣ 19. ನದಸ.

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From: www.kpscvaani.com




ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಮತ್ತು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಕ್ರೀಡಾಪಟುಗಳಿಗೆ ಏಕಲವ್ಯ ಹಾಗೂ ಇತರ ಕ್ರೀಡಾ ಪ್ರಶಸ್ತಿ ಪ್ರದಾನ ಮಾಡಿದ ಸಂದರ್ಭ. ಈ ಸಂದರ್ಭದಲ್ಲಿ ಕ್ರೀಡಾ ಸಚಿವರಾದ ನಾರಾಯಣ ಗೌಡ, ಶಾಸಕ ರಿಜ್ವಾನ್ ಅರ್ಷದ್, ಕರ್ನಾಟಕ ಒಲಿಂಪಿಕ್ಸ್ ಅಸೋಸಿಯೇಷನ್‌ನ ಅಧ್ಯಕ್ಷರಾದ ಗೋವಿಂದರಾಜು, ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.




ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿಕ್ಕಮಗಳೂರು ಹಬ್ಬದ ಲೋಗೊ ಅನ್ನು ಬೆಳಗಾವಿಯಲ್ಲಿ ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಬಿ.ಜೆ.ಪಿ ರಾಷ್ಟ್ರೀಯ ಕಾರ್ಯದರ್ಶಿಗಳಾದ ಸಿ.ಟಿ.ರವಿ, ಸಚಿವರಾದ ಆನಂದ್ ಸಿಂಗ್, ಸುನಿಲ್ ಕುಮಾರ್, ಬೈರತಿ ಬಸವರಾಜ್, ಮುನಿರತ್ನ, ವಿಧಾನಪರಿಷತ್ ಸದಸ್ಯರಾದ ಬೋಜೇಗೌಡ, ಎಂಕೆ. ಪ್ರಾಣೇಶ್ ಅವರುಗಳು ಉಪಸ್ಥಿತರಿದ್ದಾರೆ.


Downloaded From: www.kpscvaani.com

"VARTHA JANAPADA" Monthly - January 2023
"ವಾರ್ತಾ ಜನಪದ" ಮಾಸಿಕ – ಜನವರಿ 2023



RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




## 2023ನೇ ಇಸವಿಯ ಸಂಕ್ಷಿಪ್ತ ಕ್ಯಾಲೆಂಡರ್

| ತಿಂಗಳುಗಳು | | | | | | | | | | | |
|---|---|---|---|---|---|---|---|---|---|---|---|
| ಜನವರಿ ಅಕ್ಟೋಬರ್ | ಮೇ | ಆಗಸ್ಟ್ | ಫೆಬ್ರವರಿ ಮಾರ್ಚ್ ನವೆಂಬರ್ | ಜೂನ್ | ಸೆಪ್ಟೆಂಬರ್ ಡಿಸೆಂಬರ್ | ಏಪ್ರಿಲ್ ಜುಲೈ | | | | | |
| ವಾರಗಳು | | | | | | | ತಾರೀಖು | | | | |
| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ೧ | ೮ | ೧೫ | ೨೨ | ೨೯ |
| ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಭಾನು | ೨ | ೯ | ೧೬ | ೨೩ | ೩೦ |
| ಮಂಗಳ | ಬುಧ | ಗುರು | ಶುಕ್ರ | ಶನಿ | ಭಾನು | ಸೋಮ | ೩ | ೧೦ | ೧೭ | ೨೪ | ೩೧ |
| ಬುಧ | ಗುರು | ಶುಕ್ರ | ಶನಿ | ಭಾನು | ಸೋಮ | ಮಂಗಳ | ೪ | ೧೧ | ೧೮ | ೨೫ | * |
| ಗುರು | ಶುಕ್ರ | ಶನಿ | ಭಾನು | ಸೋಮ | ಮಂಗಳ | ಬುಧ | ೫ | ೧೨ | ೧೯ | ೨೬ | * |
| ಶುಕ್ರ | ಶನಿ | ಭಾನು | ಸೋಮ | ಮಂಗಳ | ಬುಧ | ಗುರು | ೬ | ೧೩ | ೨೦ | ೨೭ | * |
| ಶನಿ | ಭಾನು | ಮಂಗಳ | ಬುಧ | ಗುರು | ಶುಕ್ರ | ಶನಿ | ೭ | ೧೪ | ೨೧ | ೨೮ | * |

* ಫೆಬ್ರವರಿ – 28 ದಿನಗಳು

ರಚನೆ : ಜಿ.ಡಿ. ಲಕ್ಷ್ಮೀನಾರಾಯಣ್

Downloaded From: www.kpscvaani.com